# ತುಮಕೂರು ವಿಶ್ವವಿದ್ಯಾನಿಲಯ

# ವಾರ್ಷಿಕ ವರದಿ

2019~20

# ತುಮಕೂರು ವಿಶ್ವವಿದ್ಯಾನಿಲಯ

## ವಾರ್ಷಿಕ ವರದಿ

# 2019-20

**ದಿನಾಂಕ : 17.06.2020 ರಂದು ಪರಿಚಲನೆಯ ಮೂಲಕ ಅನುಮೋದನೆ ಪಡೆದ ವಿದ್ಯಾವಿಷಯಕ ಪರಿಷತ್ತಿನ ನಿರ್ಣಯ**

**Sub No:** 2019-20 ನೇ ಸಾಲಿನ ವಿಶ್ವವಿದ್ಯಾನಿಲಯದ ಕರಡು ವಾರ್ಷಿಕ ವರದಿಗೆ ಅನುಮೋದನೆ

**ನಿರ್ಣಯ**

**ವಿದ್ಯಾ ವಿಷಯಕ ಪರಿಷತ್ತು ಕರಡು ವಾರ್ಷಿಕ ವರದಿ 2019-20 ನ್ನು ಅನುಮೋದಿಸಿ, ಸಿಂಡಿಕೇಟ್ ಸಭೆಯ ಅನುಮೋದನೆಯೊಂದಿಗೆ ಸರ್ಕಾರಕ್ಕೆ ತುರ್ತಾಗಿ ಸಲ್ಲಿಸಲು ಶಿಫಾರಸ್ಸು ಮಾಡಿತು.**

**ದಿನಾಂಕ : 20.06.2020 ರಂದು ನಡೆದ ಸಿಂಡಿಕೇಟ್ ಸಭಾ ನಡಾವಳಿಗಳು**

**Sub No:** 2019-20 : ಸಾ.ಸಿಂ: 01 : ಸಾ&ಅ: 05 ದಿನಾಂಕ : 20.06.2020

2019-20 ನೇ ಸಾಲಿನ ವಾರ್ಷಿಕ ವರದಿಯ ಕುರಿತು

**ನಿರ್ಣಯ**

**2019-20ನೇ ಸಾಲಿನ ವಾರ್ಷಿಕ ವರದಿಯ ಕುರಿತು ಸರ್ಕಾರ ನೀಡಿರುವ ನಮೂನೆಯಲ್ಲಿ ಸಿದ್ದಪಡಿಸಿರುವ ಕರಡು ವಾರ್ಷಿಕ ವರದಿಯನ್ನು ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸಿನನ್ವಯ ಅನುಮೋದಿಸಿ ಸರ್ಕಾರಕ್ಕೆ ಸಲ್ಲಿಸಲು ನಿರ್ಣಯಿಸಿತು.**

ತುಮಕೂರು ವಿಶ್ವವಿದ್ಯಾನಿಲಯ
ವಿಶ್ವವಿದ್ಯಾನಿಲಯ ಕಾರ್ಯಾಲಯ
ಬಿ.ಹೆಚ್.ರಸ್ತೆ, ತುಮಕೂರು-572 103, ಕರ್ನಾಟಕ
ದೂರವಾಣಿ: 0816-2255596 ಫ್ಯಾಕ್ಸ್: 0816-2270719
ಇ-ಮೇಲ್: tumkuruniversityvc@gmail.com
ವೆಬ್:www.tumkuruniversity.ac.in

TUMKUR UNIVERSITY
Vishwavidyanilaya Karyalaya,
B.H.Road, Tumkur - 572 103, KARNATAKA, INDIA
Ph : Off : 0816-2255596, Fax : 0816-2270719
E-mail : tumkuruniversityvc@gmail.com
Website : www.tumkuruniversity.ac.in

**Prof. Y.S. Siddegowda**
Vice Chancellor

**ಸಂಖ್ಯೆ:ತುವಿ:ಕುಪಆಶಾ:2020–21:** **28.07.2020**

## "ಸಂದೇಶ"

ತುಮಕೂರು ವಿಶ್ವವಿದ್ಯಾನಿಲಯದ 2019–20 ನೇ ಸಾಲಿನ 'ವಾರ್ಷಿಕ ವರದಿ'ಯನ್ನು ಪ್ರಸ್ತುತ ಪಡಿಸಲು ನನಗೆ ಅಪಾರ ಸಂತೋಷವಾಗಿದೆ. ಒಂದು ವಿಶ್ವವಿದ್ಯಾನಿಲಯದ ಯಶಸ್ಸು ಅಲ್ಲಿನ ಶೈಕ್ಷಣಿಕ ವಾತಾವರಣವನ್ನು ಅಭಿವೃದ್ಧಿ ಪಡಿಸಿ, ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣದೆಡೆಗೆ ಆಕರ್ಷಿಸುವ ಹಾಗೂ ಬೋಧಕ ಸಿಬ್ಬಂದಿಗಳ ಪ್ರತಿಭೆಗಳನ್ನು ಗುರುತಿಸಿ ಅವರ ಶ್ರೇಯೋಭಿವೃದ್ಧಿಗೆ ಶ್ರಮಿಸುವುದರ ಮೇಲೆ ಅವಲಂಬಿತವಾಗಿರುತ್ತದೆ ಹಾಗೂ ಈ ಮೌಲ್ಯಗಳು ವಿಶ್ವವಿದ್ಯಾನಿಲಯವು ತನ್ನ ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಸಮಾಜದ ಜೊತೆಯಲ್ಲಿ ತನ್ನ ಘನತೆ, ಸಮಗ್ರತೆ, ಉತ್ಕೃಷ್ಟತೆ ಮತ್ತು ಮಹಾತ್ವಾಕಾಂಕ್ಷೆಗಳನ್ನು ಪ್ರತಿಬಿಂಬಿಸುತ್ತದೆ.

ವಿಶ್ವವಿದ್ಯಾನಿಲಯ ನಿರಂತರವಾಗಿ ಬೋಧನೆ, ಸಂಶೋಧನಾ ಚಟುವಟಿಕೆಗಳು, ಸಂಶೋಧನಾ ಪ್ರಕಟಣೆಗಳು ಹಾಗೂ ವಿಸ್ತರಣಾ ಚಟುವಟಿಕೆಗಳ ಮೇಲೆ ತನ್ನ ಗಮನವನ್ನು ಕೇಂದ್ರೀಕರಿಸಬೇಕಾಗುತ್ತದೆ. ತುಮಕೂರು ವಿಶ್ವವಿದ್ಯಾನಿಲಯವು ತನ್ನ ಶೈಕ್ಷಣಿಕ ವೇಳಾಪಟ್ಟಿಯನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದೆ. ವಿಶ್ವವಿದ್ಯಾನಿಲಯ ವಿದ್ಯಾರ್ಥಿಗಳ ಫಲಿತಾಂಶವನ್ನು ನಿಗಧಿತ ಸಮಯದೊಳಗೆ ಘೋಷಿಸುತ್ತಿದೆ. ವಿಶ್ವವಿದ್ಯಾನಿಲಯವು ತನ್ನ ಶೈಕ್ಷಣಿಕ ಅನುಭವದ ಮೂಲಕ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ ಹಾಗೂ ಹೆಚ್ಚಿನ ಪ್ರವೇಶಾತಿಗೆ ಪ್ರೇರಣೆಯನ್ನು ನೀಡುತ್ತಿದೆ. ಇಂತಹ ಶೈಕ್ಷಣಿಕ ವಾತಾವರಣದಿಂದಾಗಿ ನಮ್ಮ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಸ್ಥಳೀಯ ಸಂಘ–ಸಂಸ್ಥೆಗಳು, ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳು, ಪ್ರತಿಷ್ಠಿತ ಕಂಪನಿಗಳು, ಎನ್‌ಜಿಒ ಹಾಗೂ ಇತರೆ ಕೈಗಾರಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ವಿಶ್ವವಿದ್ಯಾನಿಲಯದ ಅಧ್ಯಾಪಕರು ತಮ್ಮ ದೈನಂದಿನ ಬೋಧನೆ ಮತ್ತು ಶೈಕ್ಷಣಿಕ ವೇಳಾಪಟ್ಟಿಯೊಂದಿಗೆ ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಇದರೊಂದಿಗೆ, ವಿಶ್ವವಿದ್ಯಾನಿಲಯವು ಸ್ಥಳೀಯ, ರಾಜ್ಯ, ರಾಷ್ಟ್ರೀಯ ಹಾಗೂ ಜಾಗತಿಕ ಮಟ್ಟದ ಸವಾಲುಗಳನ್ನು ಎದುರಿಸಲು ಶಿಕ್ಷಣ ತಜ್ಞರೊಂದಿಗೆ ಜೊತೆಗೂಡಿ ಕಾರ್ಯಪ್ರವೃತ್ತವಾಗಿದೆ.

ಎನ್‌ಐಆರ್‌ಎಫ್–2020 ಇವರು ಪ್ರಕಟಿಸಿರುವ ರಾಷ್ಟ್ರ ಮಟ್ಟದ ವಿಶ್ವವಿದ್ಯಾನಿಲಯಗಳ ರ್‍ಯಾಂಕಿಂಗ್ ಪಟ್ಟಿಯಲ್ಲಿ ರಾಜ್ಯ ವಿಶ್ವವಿದ್ಯಾನಿಲಯಗಳ ಐದು ಅಗ್ರ ಶ್ರೇಣಿಯಲ್ಲಿ ತುಮಕೂರು ವಿಶ್ವವಿದ್ಯಾನಿಲಯವು ಸ್ಥಾನ ಪಡೆದಿದೆ.

ಪ್ರಸ್ತುತ 2019–20ನೇ ಸಾಲಿನ ವಾರ್ಷಿಕ ವರದಿಯಲ್ಲಿ ಗುಣಮಟ್ಟದ ಉನ್ನತ ಶಿಕ್ಷಣವನ್ನು ಒದಗಿಸುತ್ತಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಸಾಧನೆಗಳು ಹಾಗೂ ಶೈಕ್ಷಣಿಕ–ಸಂಶೋಧನಾ ಹಾಗೂ ವಿಸ್ತರಣಾ ಚಟುವಟಿಕೆಗಳ ಮಾಹಿತಿಯನ್ನು ವಿವರಿಸಲಾಗಿದೆ. ಶಿಕ್ಷಣದಲ್ಲಿ ಉತ್ಕೃಷ್ಠತೆಯನ್ನು ಸಾಧಿಸಲು ಕೊನೆಯೇ ಇಲ್ಲ ಎಂಬುದರ ಅರಿವಿದೆ. ಆದುದರಿಂದ, ನಮ್ಮ ವಿಶ್ವವಿದ್ಯಾನಿಲಯದ ಅಧ್ಯಾಪಕರು ಇನ್ನೂ ಹೆಚ್ಚಿನ ಶೈಕ್ಷಣಿಕ ಮತ್ತು ಸಂಶೋಧನಾ ಹಾಗೂ ವಿಸ್ತರಣಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ವಿಶ್ವವಿದ್ಯಾನಿಲಯವನ್ನು ಎತ್ತರಕ್ಕೆ ಕೊಂಡೊಯ್ಯಬೇಕು, ನಮ್ಮ ಸಮಾಜ ವಿಶ್ವವಿದ್ಯಾನಿಲಯದ ಮೇಲೆ ಇಟ್ಟಿರುವ ನಂಬಿಕೆಯನ್ನು ಶಾಶ್ವತಗೊಳಿಸಬೇಕು. ಇತ್ತೀಚಿನ ಕೋವಿಡ್–19 ಸಾಂಕ್ರಾಮಿಕ ಕಾಯಿಲೆಯು ನಮ್ಮ ಜೀವನ ಹಾಗೂ ಉನ್ನತ ಶಿಕ್ಷಣದ ಮೇಲೆ ಹೆಚ್ಚಿನ ಪರಿಣಾಮ ಬೀರಿದೆ. ಆದಾಗ್ಯೂ, ತುಮಕೂರು ವಿಶ್ವವಿದ್ಯಾನಿಲಯ ಡಿಜಿಟಲ್ ಕಲಿಕೆ, ಇ–ಆಡಳಿತ, ಆನ್‌ಲೈನ್ ಬೋಧನೆಗಳ ಮೂಲಕ ಶಿಕ್ಷಣವನ್ನು ಪಸರಿಸುವ ಕಾರ್ಯವನ್ನು ಅಳವಡಿಸಿಕೊಂಡಿದೆ. ಈ ಕಾರ್ಯವಿಧಾನವು ಸ್ಥಳೀಯ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಗಮನವನ್ನು ಸೆಳೆದಿದೆ.

ತುಮಕೂರು ವಿಶ್ವವಿದ್ಯಾನಿಲಯದ 2019–20ನೇ ಸಾಲಿನ ಎಲ್ಲಾ ಸಾಧನೆಗಳಿಗೆ ಸಹಕಾರ ನೀಡಿದ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ.

28/7

(ಪ್ರೊ. ವೈ. ಎಸ್. ಸಿದ್ದೇಗೌಡ)
ಉಪಕುಲಪತಿಗಳು

# ಪರಿವಿಡಿ


| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 1 | ಸಾಮಾನ್ಯ ಮಾಹಿತಿ | 1 |
| 2 | ವಿಶ್ವವಿದ್ಯಾನಿಲಯದ ಅಧಿಕಾರಗಳು | 7 |
| 3 | ದರ್ಶನ ಮತ್ತು ಧ್ಯೇಯ | 15 |
| 4 | ಆಡಳಿತ ಮತ್ತು ಸಂಘಟಿಸುವಿಕೆ | 16 |
| 5 | ಯುಜಿಸಿ 2010 ನಿಯಮಾನುಸಾರ ಆತಂರಿಕ ಗುಣಮಟ್ಟ ಖಾತ್ರಿ ಕೋಶ (IQAC)ದ ರಚನೆ ಹಾಗೂ ಅದರ ಕಾರ್ಯನಿರ್ವಹಣೆ | 17 |
| 6 | ಕಾರ್ಯಕ್ರಮಗಳ ಮೇಲ್ವಿಚಾರಣೆ ಹಾಗೂ ಮೌಲ್ಯಮಾಪನ ಮಂಡಳಿಯ ರಚನೆ ಮತ್ತು ಕಾರ್ಯನಿರ್ವಹಣೆ. | 17 |
| 7 | ಕುಲಾಧಿಪತಿಗಳ ಹಾಗೂ ಸರ್ಕಾರದ ನಿರ್ದೇಶನಗಳ ಅನುಸರಣೆ: | 17 |
| 8 | ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ ಸಲಹೆಗೆ ಅನುಸಾರವಾಗಿ ಸರ್ಕಾರವು ಹೊರಡಿಸುವ ಅಧಿಸೂಚನೆಗಳ ಅನುಪಾಲನೆ. | 17 |
| 9 | ಸಾಮಾಜಿಕ ಹೊರಗಿಡುವಿಕೆ ಮತ್ತು ಸೇರ್ಪಡೆ ನೀತಿಗಳ ಕೇಂದ್ರ ಮತ್ತು ಅದರ ಕಾರ್ಯ ನಿರ್ವಹಣಾ ವರದಿ– ಇಲ್ಲ | 17 |
| 10 | ಸಂಸ್ಥೆಯ ಸಾಮಾಜಿಕ ಜವಾಬ್ದಾರಿಯ ನಿರ್ವಹಣೆಯಲ್ಲಿ ಗಾಂಧಿ ಅಧ್ಯಯನ ಕೇಂದ್ರ ಹಾಗೂ ಡಾ. ಬಿ ಆರ್ ಅಂಬೇಡ್ಕರ್ ಅಧ್ಯಯನ ಕೇಂದ್ರಗಳ ಬಳಕೆ: | 17 |
| 11 | ಪ್ರವೇಶಾತಿ ವಿಧಾನಗಳು | 20 |
| 12 | ವಿದ್ಯಾರ್ಥಿ ಬೆಂಬಲ ವ್ಯವಸ್ಥೆ. | 24 |
| 13 | ವಿದ್ಯಾರ್ಥಿ ಭಾಗವಹಿಸುವಿಕೆ | 31 |
| 14 | ಅಲ್ಯುಮ್ನಿ ಮತ್ತು ಅಲ್ಯುಮ್ನೆ | 35 |
| 15 | ಸಂಯೋಜನೆ | 36 |
| 16 | ಕಾಲೇಜು ಅಭಿವೃದ್ಧಿ ಪರಿಷತ್ತು : ಯುಜಿಸಿ ಕಾಯ್ದೆ 1956 ರ 12 ಎಫ್ ಮತ್ತು 12 ಬಿ ರಡಿಯಲ್ಲಿ ಬಾರದ ಕಾಲೇಜುಗಳ ಅಭಿವೃದ್ಧಿ ಮತ್ತು ಅವುಗಳ ಕಾರ್ಯವೈಖರಿ | 36 |
| 17 | ಪಠ್ಯಕ್ರಮ ವಿನ್ಯಾಸ ಮತ್ತು ಅಭಿವೃದ್ಧಿ. | 36 |
| 18 | ಪ್ರಸಾರಾಂಗ ಮತ್ತು ಮುದ್ರಣ | 38 |
| 19 | ಶುಲ್ಕದ ರಚನೆ | 40 |
| 20 | ಅಧ್ಯಾಪಕರ ವಿವರ | 52 |
| 21 | ಸಹಾಯಕ ಸಿಬ್ಬಂದಿ | 59 |
| 22 | ಪರೀಕ್ಷೆ ಮತ್ತು ಮೌಲ್ಯಮಾಪನ | 61 |
| 23 | ಘಟಿಕೋತ್ಸವ: 13 ನೇ ವಾರ್ಷಿಕ ಘಟಿಕೋತ್ಸವ (2019–20)ವನ್ನು ನಡೆಸಲಾಗಿದೆ. | 78 |
| 24 | ಕೌಶಲ ಅಭಿವೃದ್ಧಿ ಮತ್ತು Placement Cell: | 99 |
| 25 | ಸಂಶೋಧನಾ ನೀತಿ ಮತ್ತು ಫಲಿತಾಂಶ | 101 |
| 26 | ಆಹ್ವಾನಿತ ವಿಶೇಷ ಉಪನ್ಯಾಸಗಳು ಮತ್ತು ಶ್ರೇಷ್ಠ ಶಿಕ್ಷಣ ತಜ್ಞರು ಮತ್ತು ವಿದ್ವಾಂಸ ಉಪನ್ಯಾಸಗಳು, ದಿಕ್ಸೂಚಿ ಉಪನ್ಯಾಸಗಳು | 115 |
| 27 | ವಿಶೇಷ ಕಾರ್ಯಕ್ರಮಗಳ ಆಯೋಜನೆ | 116 |
| 28 | ಸಂಶೋಧನಾ ಫಲಿತಾಂಶಗಳು | 116 |
| 29 | ವಿಶ್ವವಿದ್ಯಾನಿಲಯ ಬೋಧಕವರ್ಗ ಮತ್ತು ಇತರೆ ನೌಕರಿಗೆ ಸಂದ ಪ್ರಶಸ್ತಿಗಳು ಮತ್ತು ಮಾನ್ಯತೆ | 118 |
| 30 | ಸಂಶೋಧನಾ ಸಂಸ್ಕೃತಿಗೆ ಉತ್ತೇಜನ | 118 |
| 31 | ರಾಜ್ಯ ನೀತಿಗೆ ಸಂಶೋಧನಾ ಕೊಡುಗೆಗಳು –ಸಾಮಾಜಿಕ ಜವಾಬ್ದಾರಿಗಳನ್ನು ನಿರ್ಮಾಣ ಮತ್ತು ಹೊಣೆಗಾರಿಕೆ | 119 |
| 32 | ಸಂಶೋಧನಾ ನೈತಿಕತೆ | 120 |
| 33 | ಅಧ್ಯಯನ ಪೀಠಗಳ ಸ್ಥಾಪನೆ ಮತ್ತು ಅವುಗಳ ಕಾರ್ಯಗಳು | 120 |

| | | |
|---|---|---|
| 34 | ಆಧುನಿಕ ಬೋಧನಾ–ಕಲಿಕಾ–ಸಂಶೋಧನಾ ಚಟುವಟಿಕೆಗಳ ಕೇಂದ್ರವಾಗಿ – ಗ್ರಂಥಾಲಯ | 121 |
| 35 | ಭೌತಿಕ ಮೂಲಸೌಕರ್ಯ | 125 |
| 36 | ಮಾಹಿತಿ ಸಂವಹನ ತಂತ್ರಜ್ಞಾನ (ಐಸಿಟಿ) ಮೂಲ ಸೌಕರ್ಯಗಳು | 129 |
| 37 | ಯುಜಿಸಿ – ಸ್ಟಾಫ್ ಟ್ರೈನಿಂಗ್ ಕಾಲೇಜು | 130 |
| 38 | ಹಣಕಾಸು | 131 |
| 39 | ಕ್ರೀಡೆ/ ಎನ್ಎಸ್ಎಸ್/ ಎನ್ಸಿಸಿ/ ಯುವ ರೆಡ್ಕ್ರಾಸ್ | 144 |
| 40 | ಮಹಿಳಾ ಸಬಲೀಕರಣ/ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು/ ಲಿಂಗ ಸಮಾನತೆ ಮತ್ತು ಇತರೆ ಕೋಶಗಳ ಸ್ಥಾಪನೆ ಮತ್ತು ಅದರ ಕಾರ್ಯವೈಖರಿ – ಪ್ರತೀ ಕೋಶದ ಆಯವ್ಯಯ, ವೆಚ್ಚ ಮತ್ತು ಇತರೆ ಚಟುವಟಿಕೆಗಳ ವರದಿ | 148 |
| 41 | ಉತ್ತಮ ಅಭ್ಯಾಸಗಳು | 149 |
| 42 | ಆವಿಷ್ಕಾರಗಳು | 149 |
| 43 | ವ್ಯಾಜ್ಯಗಳು | 153 |
| 44 | ಯಾವುದಾದರೂ ಲೋಕಾಯುಕ್ತ ಪ್ರಕರಣಗಳಲ್ಲಿ ಇದ್ದಲ್ಲಿ | 153 |
| 45 | ಕಾನೂನುಬದ್ಧ ಸಮಿತಿಗಳ ಪ್ರಕ್ರಿಯೆಗಳು | 153 |
| 46 | ದೂರ ಶಿಕ್ಷಣ | 153 |
| 47 | ಶೈಕ್ಷಣಿಕ ಸೇವೆಗಳ ಗುಣಮಟ್ಟವನ್ನು ಹೆಚ್ಚಿಸಲು ವಿಶ್ವವಿದ್ಯಾಲಯವು ಕೈಗೊಂಡಿರುವ ವಿಶೇಷ ಉಪಕ್ರಮಗಳು | 154 |
| 48 | ವಿಶ್ವವಿದ್ಯಾನಿಲಯದ ಸಾಧನೆಗಳನ್ನು ಪ್ರದರ್ಶಿಸಲು ಇತರ ಯಾವುದೇ ಮಾಹಿತಿ | 154 |
| 49 | ಕುಲಪತಿಗಳ ಅಭಿಪ್ರಾಯಗಳು | 155 |

1. **ಸಾಮಾನ್ಯ ಮಾಹಿತಿ**

a. **ವಿಶ್ವವಿದ್ಯಾನಿಲಯದ ಹೆಸರು** : **ತುಮಕೂರು ವಿಶ್ವವಿದ್ಯಾನಿಲಯ**

b. **ಸ್ಥಾಪನೆಯಾದ ವರ್ಷ, ವಿಳಾಸ, ಅಂತರ್ಜಾಲ ಮತ್ತು ನ್ಯಾಕ್ ಶ್ರೇಯಾಂಕ :**

**ಸ್ಥಾಪನೆಯಾದ ವರ್ಷ** : 20ನೇ ಮಾರ್ಚ್ 2004

**ವಿಳಾಸ** : ತುಮಕೂರು ವಿಶ್ವವಿದ್ಯಾನಿಲಯ
ಬಿ.ಹೆಚ್. ರಸ್ತೆ, ತುಮಕೂರು
www.tumkuruniversity.ac.in

**ನ್ಯಾಕ್ ಶ್ರೇಯಾಂಕ** : "ಬಿ" ಗ್ರೇಡ್ (ನ್ಯಾಕ್ ಮಾನ್ಯತೆಯ 2ನೇ ಸೈಕಲ್‌ನ ಸಿದ್ದತೆಯಲ್ಲಿದೆ)

c. **ಶಾಸನಬದ್ಧ ಸಂಸ್ಥಗಳಿಂದ ಪಡೆದ ವಿಶೇಷ ಮಾನ್ಯತೆ** : **ಇಲ್ಲ**

d. **ಕುಲಪತಿಗಳ ಹೆಸರು** : **ಪ್ರೊ. ವೈ.ಎಸ್. ಸಿದ್ದೇಗೌಡ**

e. **ಕುಲಸಚಿವರು, ಕುಲಸಚಿವರು (ಪರೀಕ್ಷಾಂಗ), ಹಣಕಾಸು ಅಧಿಕಾರಿಗಳ ಹೆಸರು:**

**ಕುಲಸಚಿವರು** : **ಪ್ರೊ. ಕೆ.ಎನ್. ಗಂಗಾನಾಯ್ಕ್**
**ಕುಲಸಚಿವರು (ಪರೀಕ್ಷಾಂಗ)** : **ಪ್ರೊ. ಕೆ.ಜೆ. ಸುರೇಶ್ ಮತ್ತು ಪ್ರೊ. ಎಂ. ಕೊಟ್ರೇಶ್**
**ಹಣಕಾಸು ಅಧಿಕಾರಿಗಳು** : **ಪ್ರೊ. ಪಿ. ಪರಮಶಿವಯ್ಯ ಮತ್ತು ಶ್ರೀ ನರಸಿಂಹಮೂರ್ತಿ**

## 2019–20ನೇ ಸಾಲಿನ ಮಾನ್ಯ ವಿದ್ಯಾವಿಷಯಕ ಪರಿಷತ್ ಸದಸ್ಯರುಗಳ ವಿವರ

| 13 | b. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕಾರ ವಿದ್ಯಾವಿಷಯಕ ಪರಿಷತ್‌ಗೆ ನಾಮನಿರ್ದೇಶನಗಳು |
|---|---|

**2019–20ನೇ ಸಾಲಿನ ಮಾನ್ಯ ವಿದ್ಯಾವಿಷಯಕ ಪರಿಷತ್ ಸದಸ್ಯರುಗಳ ವಿವರ**

| ಕ್ರಮ ಸಂಖ್ಯೆ | ಮಾನ್ಯ ಸದಸ್ಯರುಗಳ ಹೆಸರು | ಹುದ್ದೆಯ ಹೆಸರು | ಕಾಲಾವಧಿ |
|---|---|---|---|
| 1 | **ಪ್ರೊ. ವೈ.ಎಸ್. ಸಿದ್ದೇಗೌಡ,**<br>ಮಾನ್ಯ ಕುಲಪತಿಗಳು, ತುಮಕೂರು ವಿಶ್ವವಿದ್ಯಾನಿಲಯ,<br>ತುಮಕೂರು. | **ಅಧ್ಯಕ್ಷರು** | **ಕ.ರಾ.ವಿ. ಅಧಿನಿಯಮ 2000 ಅನ್ವಯ ಹುದ್ದೆಯು ಶಾಶ್ವತ ಸದಸ್ಯರು** |
| 2 | **ಆಯುಕ್ತರು, ಅಥವಾ ಇವರ ಪ್ರತಿನಿಧಿ,**<br>ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, 2ನೇ ಮಹಡಿ,<br>ತಾಂತ್ರಿಕ ಶಿಕ್ಷಣ ಇಲಾಖೆ ಕಟ್ಟಡ,<br>ಅರಮನೆ ರಸ್ತೆ, ಬೆಂಗಳೂರು –560001. | **ಸದಸ್ಯರು** | **ಕ.ರಾ.ವಿ. ಅಧಿನಿಯಮ 2000 ಶಾಶ್ವತ ಸದಸ್ಯರು** |
| 3 | **ನಿರ್ದೇಶಕರು,**<br>ತಾಂತ್ರಿಕ ಶಿಕ್ಷಣ ಇಲಾಖೆ,<br>ತಾಂತ್ರಿಕ ಶಿಕ್ಷಣ ಭವನ, 3ನೇ ಮಹಡಿ, ಅರಮನೆ ರಸ್ತೆ,<br>ಬೆಂಗಳೂರು–560001. | **ಸದಸ್ಯರು** | **ಕ.ರಾ.ವಿ. ಅಧಿನಿಯಮ 2000 ಶಾಶ್ವತ ಸದಸ್ಯರು** |
| **ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷರು ನಾಮನಿರ್ದೇಶನ ಮಾಡಿದ ಒಬ್ಬ ಕರ್ನಾಟಕ ವಿಧಾನ ಸಭಾ ಸದಸ್ಯ;** | | | **ಖಾಲಿ ಸ್ಥಾನ** |
| **ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯವರು ನಾಮನಿರ್ದೇಶನ ಮಾಡಿದ ಇಬ್ಬರು ಕರ್ನಾಟಕ ವಿಧಾನ ಪರಿಷತ್ ಸದಸ್ಯರು** | | | |
| 4 | **ಶ್ರೀ ಕಾಂತ್‌ರಾಜ್ (ಬೆಮಲ್)**<br>ಮಾನ್ಯ ಸದಸ್ಯರು, ಕರ್ನಾಟಕ ರಾಜ್ಯ ವಿಧಾನ ಪರಿಷತ್,<br>ನಂ.2, ಬಿನ್ನಮಂಗಲ, ಕಸಬಾ ಹೋಬಳಿ,<br>ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. | **ಸದಸ್ಯರು** | **07.05.2016 ರಿಂದ 05.01.2022** |
| 5 | **ಶ್ರೀ ಎ. ದೇವೇಗೌಡ,**<br>ಮಾನ್ಯ ಸದಸ್ಯರು, ಕರ್ನಾಟಕ ರಾಜ್ಯ ವಿಧಾನ ಪರಿಷತ್,<br>ನಂ. 30, 'ದತ್ತ ಕೃಪ' ಶ್ರೀ ರಾಘವೇಂದ್ರ ಮಠ ರಸ್ತೆ,<br>ಪಾಪರೆಡ್ಡಿ ಪಾಳ್ಯ, ನಾಗರಭಾವಿ 2ನೇ ಹಂತ,<br>ಬೆಂಗಳೂರು–560072. | **ಸದಸ್ಯರು** | **11.10.2018 ರಿಂದ 21.06.2024** |

| | | | |
|---|---|---|---|
| **ಎರಡು ವರ್ಷಗಳ ಅವಧಿಗಾಗಿ, ಜೇಷ್ಠತೆಗೆ ಅನುಸಾರವಾಗಿ ಸರದಿಯ ಮೇಲೆ, ಕುಲಪತಿಯವರಿಂದ ನಾಮನಿರ್ದೇಶಿತರಾದ ಸಂಯೋಜಿತ ಕಾಲೇಜುಗಳ ಹತ್ತು ಜನ ಪ್ರಾಂಶುಪಾಲರು;** | | | |
| 6 | **ಪ್ರೊ. ಹೆಚ್.ಎನ್. ವಿಜಯೇಂದ್ರ,**<br>ಪ್ರಾಂಶುಪಾಲರು, ಶ್ರೀ ಸಿದ್ಧಾರ್ಥ ಪ್ರಥಮ ದರ್ಜೆ ಮಹಾ ವಿದ್ಯಾಲಯ, ತುಮಕೂರು–05 | **ಸದಸ್ಯರು** | **09.04.2019 ರಿಂದ 08.04.2021** |
| 7 | **ಡಾ. ಗುರುಬಸಪ್ಪ ಹೆಚ್.ಡಿ.**<br>ಪ್ರಾಂಶುಪಾಲರು, ಶ್ರೀ ಸಿದ್ಧಾರ್ಥ ಶಿಕ್ಷಣ ಮಹಾವಿದ್ಯಾಲಯ, ಡಾ. ಹೆಚ್. ಎಂ. ಗಂಗಾಧರಯ್ಯ ರಸ್ತೆ, ಸರಸ್ವತಿ ಪುರಂ, ಮರಳೂರು ಪೋಸ್ಟ್, ತುಮಕೂರು–572105. | **ಸದಸ್ಯರು** | **09.04.2019 ರಿಂದ 08.04.2021** |
| 8 | **ಪ್ರೊ. ಶಿವಾನಂದಯ್ಯ ಎನ್.ಪಿ.,**<br>ಪ್ರಾಂಶುಪಾಲರು, ಶ್ರೀ ಹೊನ್ನಾದೇವಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಂಡಿನಶಿವರ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ– 572215. | **ಸದಸ್ಯರು** | **09.04.2019 ರಿಂದ 08.04.2021** |
| 9 | **ಡಾ. ನರಸಿಂಹನ್ ಎಮ್.ಎಸ್.**<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್, ತುಮಕೂರು ಜಿಲ್ಲೆ–572130 | **ಸದಸ್ಯರು** | **09.04.2019 ರಿಂದ 08.04.2021** |
| 10 | **ಪ್ರೊ. ಡಿ.ಎಸ್. ಮುನಿಂದ್ರಕುಮಾರ್,**<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ, ತುಮಕೂರು ಜಿಲ್ಲೆ–572132 | **ಸದಸ್ಯರು** | **09.04.2019 ರಿಂದ 08.04.2021** |
| 11 | **ನಾರಾಯಣ ಕೆ.ಆರ್.,**<br>ಪ್ರಾಂಶುಪಾಲರು, ಶ್ರೀಮತಿ ಮತ್ತು ಶ್ರೀ ವೈ.ಇ.ಆರ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾವಗಡ, ತುಮಕೂರು<br>ಜಿಲ್ಲೆ–561202. | **ಸದಸ್ಯರು** | **09.04.2019 ರಿಂದ 08.04.2021** |
| 12 | **ಡಾ. ಆನಂದ ಕುಮಾರಿ,**<br>ಪ್ರಾಂಶುಪಾಲರು, ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ತುಮಕೂರು | **ಸದಸ್ಯರು** | **09.04.2019 ರಿಂದ 08.04.2021** |
| 13 | **ಡಾ. ಬಾಲಪ್ಪ,**<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ, ತುಮಕೂರು ಜಿಲ್ಲೆ–572129. | **ಸದಸ್ಯರು** | **09.04.2019 ರಿಂದ 08.04.2021** |
| 14 | **ಡಾ. ಪಿ. ರಾಜಾರೆಡ್ಡಿ,**<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿ.ಎಸ್.ಪುರ, ಗುಬ್ಬಿ ತಾಲ್ಲೂಕು–572213 | **ಸದಸ್ಯರು** | **09.04.2019 ರಿಂದ 08.04.2021** |
| 15 | **ಡಾ. ಎಸ್.ಬಿ. ಬಸವರೆಡ್ಡಿ,**<br>ಪ್ರಾಂಶುಪಾಲರು, ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು, ತಿಪಟೂರು,<br>ತುಮಕೂರು ಜಿಲ್ಲೆ–572 201. | **ಸದಸ್ಯರು** | **09.04.2019 ರಿಂದ 08.04.2021** |

| | | | |
|---|---|---|---|
| **ಮೂರು ವರ್ಷಗಳನ್ನು ಮೀರದ ಅವಧಿಗಾಗಿ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರಾದ ಕೈಗಾರಿಕೆ, ವಾಣಿಜ್ಯ, ಬ್ಯಾಂಕಿಂಗ್ ಅಥವಾ ಇತರೆ ಯಾವುದೇ ವೃತ್ತಿಯನ್ನು ಪ್ರತಿನಿಧಿಸುವ ಮೂವರು ಸುಪ್ರಸಿದ್ಧ ವ್ಯಕ್ತಿಗಳು;** | | | |
| 16 | **ಶ್ರೀ ಎಸ್. ಪುರುಷೋತ್ತಮರಾವ್ ಸಿಂದ್ಯಾ,**<br>ನಂ. 31, ತುಮಕೂರು ರಸ್ತೆ, ಊರ್ಡಿಗೆರೆ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ–572140. | **ಸದಸ್ಯರು** | **22.03.2018 ರಿಂದ 21.03.2021** |
| 17 | **ಶ್ರೀ ಸಿ.ಎನ್. ನರಸಿಂಹಮೂರ್ತಿ,**<br>ನಿವೃತ್ತ ಪ್ರಾಂಶುಪಾಲರು, ನಂ. 05, ಅಶೋಕನಗರ 5ನೇ ಅಡ್ಡರಸ್ತೆ, ಅಶೋಕನಗರ, ತುಮಕೂರು. | **ಸದಸ್ಯರು** | |
| 18 | **ಶ್ರೀ ನಾರಾಯಣ ಎಮ್.**<br>ನಿವೃತ್ತ ಉಪನ್ಯಾಸಕರು,<br>'ಮಾತೃಶ್ರೀ' ಕಾಳಿದಾಸ ಪದವಿ ಪೂರ್ವ ಕಾಲೇಜು ಹಿಂಭಾಗ, ವಾರ್ಡ್ ನಂ. 02, ಶಿರಾಗೇಟ್, ತುಮಕೂರು–572106. | **ಸದಸ್ಯರು** | |
| **ಕುಲಪತಿಯವರು, ಜೇಷ್ಠತೆಗನುಸಾರವಾಗಿ, ಸರಿಯ ಮೇಲೆ ಎರಡು ವರ್ಷಗಳ ಅವಧಿಗಾಗಿ ನಾಮನಿರ್ದೇಶನ ಮಾಡಿದ ವಿಶ್ವವಿದ್ಯಾನಿಲಯದ ವಿಭಾಗದ ಐವರು ಪ್ರಾಧ್ಯಾಪಕರು;** | | | |
| 19 | **ಡಾ. ಶಿವಲಿಂಗಸ್ವಾಮಿ ಹೆಚ್.ಕೆ.**<br>ಪ್ರಾಧ್ಯಾಪಕರು, ಸ್ನಾತಕೋತ್ತರ ಆಂಗ್ಲ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | **ಸದಸ್ಯರು** | **16.05.2018 ರಿಂದ 15.05.2020** |

| | | | |
|---|---|---|---|
| 20 | **ಡಾ. ಪರಶುರಾಮ ಕೆ.ಜಿ.,**<br>ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಜಕಾರ್ಯ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | **ಸದಸ್ಯರು** | |
| 21 | **ಡಾ. ಕೇಶವ**<br>ಪ್ರಾಧ್ಯಾಪಕರು, ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | **ಸದಸ್ಯರು** | |
| 22 | **ಡಾ. ರವೀಂದ್ರ ಕುಮಾರ್ ಬಿ.,**<br>ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | **ಸದಸ್ಯರು** | |
| 23 | **ಡಾ. ಗುಂಡೂರ್ ನಿಶೀಮಪ್ಪ.,**<br>ಪ್ರಾಧ್ಯಾಪಕರು, ಸ್ನಾತಕೋತ್ತರ ಆಂಗ್ಲ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | **ಸದರಿ ಸದಸ್ಯರು ಅನ್ಯ ವಿಶ್ವವಿದ್ಯಾನಿಲಯ ಹುದ್ದೆಗೆ ನೇಮಕಾತಿ ಹೊಂದಿ, ದಿನಾಂಕ 24.06.2019 ರಂದು ಬಿಡುಗಡೆ ಹೊಂದಿರುತ್ತಾರೆ.** | |
| **ಕುಲಪತಿಯವರು, ಜೇಷ್ಠತೆಗನುಸಾರವಾಗಿ ಎರಡು ವರ್ಷಗಳ ಅವಧಿಗಾಗಿ ಸರದಿಯ ಮೇಲೆ ನಾಮನಿರ್ದೇಶನ ಮಾಡಿದ ವ್ಯಾಸಂಗ ವಿಭಾಗಗಳ ಐವರು ಡೀನರುಗಳು;** | | | |
| 24 | **ಡಾ. ಪರಮಶಿವಮೂರ್ತಿ ಡಿ.ವಿ.**<br>ಡೀನರು, ಕಲಾ ನಿಕಾಯ ಮತ್ತು ಕಾನೂನು ನಿಕಾಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | **ಸದಸ್ಯರು** | **24.03.2020 ರಿಂದ 23.03.2022** |
| 25 | **ಡಾ. ಬಿ.ಟಿ. ಸಂಪತ್ ಕುಮಾರ್**<br>ಡೀನರು, ವಿಜ್ಞಾನ ನಿಕಾಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | **ಸದಸ್ಯರು** | **08.04.2019 ರಿಂದ 07.04.2021** |
| 26 | **ಪ್ರೊ. ನೂರ್ ಅಫ್ಷಾ**<br>ಡೀನರು, ವಾಣಿಜ್ಯ ಮತ್ತು ವ್ಯವಹಾರ ನಿಕಾಯ ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | **ಸದಸ್ಯರು** | **15.04.2018 ರಿಂದ 14.04.2020** |
| 27 | **ಶ್ರೀಮತಿ ಸುಜಾತ**<br>ಡೀನರು, ಶಿಕ್ಷಣದ ಬೋಧಕರು, ತುಮಕೂರು ವಿಶ್ವವಿದ್ಯಾನಿಲಯ,<br>ಶ್ರೀ ಟಿ.ವಿ.ವಿ. ವೆಂಕಟಸ್ವಾಮಿ ಬಿ.ಇಡಿ. ಕಾಲೇಜು, ಗೌರಿಬಿದನೂರು ರಸ್ತೆ, ಮಧುಗಿರಿ, ತುಮಕೂರು ಜಿಲ್ಲೆ. | **ಸದಸ್ಯರು** | **01.06.2019 ರಿಂದ 18.10.2020** |
| **ಎರಡು ವರ್ಷಗಳ ಅವಧಿಗಾಗಿ ಕುಲಪತಿಯವರಿಂದ ನಾಮನಿರ್ದೇಶನ ಮಾಡಲಾಗುವ ಆರು ವಿದ್ಯಾರ್ಥಿಗಳು** | | | **ಖಾಲಿ ಸ್ಥಾನ** |
| **ಮೂರು ವರ್ಷಗಳ ಅವಧಿಗಾಗಿ, ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಆರು ಜನ ಸುಪ್ರಸಿದ್ಧ ಶಿಕ್ಷಣ ತಜ್ಞರು;** | | | **ಖಾಲಿ ಸ್ಥಾನ** |
| **ಗ್ರಂಥಪಾಲರು;** | | | **ಖಾಲಿ ಸ್ಥಾನ** |
| 28 | **ಡಾ. ಕೊಟ್ರೇಶ್ ಎಂ.**<br>ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. . | **ಸದಸ್ಯರು** | **ಕ.ರಾ.ವಿ. ಅಧಿನಿಯಮ 2000 ಅನ್ವಯ ಹುದ್ದೆಯು ಶಾಶ್ವತ ಸದಸ್ಯರು** |
| 29 | **ಡಾ. ಕೇಶವ,**<br>ನಿರ್ದೇಶಕರು, ಯೋಜನೆ, ಮೇಲ್ವಿಚಾರಣೆ ಸಮಿತಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | **ಸದಸ್ಯರು** | **ಕ.ರಾ.ವಿ. ಅಧಿನಿಯಮ 2000 ಅನ್ವಯ ಹುದ್ದೆಯು ಶಾಶ್ವತ ಸದಸ್ಯರು** |
| 30 | **ಡಾ. ಬಿ.ಟಿ. ಸಂಪತ್ ಕುಮಾರ್**<br>ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ ತುಮಕೂರು ವಿಶ್ವವಿದ್ಯಾನಿಲಯ ತುಮಕೂರು. | **ಸದಸ್ಯರು** | **ಕ.ರಾ.ವಿ. ಅಧಿನಿಯಮ 2000 ಅನ್ವಯ ಹುದ್ದೆಯು ಶಾಶ್ವತ ಸದಸ್ಯರು** |
| **ನಿರ್ದೇಶಕರು, ದೈಹಿಕ ಶಿಕ್ಷಣ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.** | | | **ಖಾಲಿ ಸ್ಥಾನ** |
| 31 | **ಕುಲಸಚಿವರು (ಮೌಲ್ಯಮಾಪನ)**<br>ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | **ಸದಸ್ಯರು** | **ಕ.ರಾ.ವಿ. ಅಧಿನಿಯಮ 2000 ಅನ್ವಯ ಹುದ್ದೆಯು ಶಾಶ್ವತ ಸದಸ್ಯರು** |
| 32 | **ಕುಲಸಚಿವರು,**<br>ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | **ಸದಸ್ಯ ಕಾರ್ಯದರ್ಶಿ** | **ಕ.ರಾ.ವಿ. ಅಧಿನಿಯಮ 2000 ಅನ್ವಯ ಹುದ್ದೆಯು ಶಾಶ್ವತ ಸದಸ್ಯರು** |
| 33 | **ವಿಶೇಷ ಆಹ್ವಾನಿತರು ಕರ್ನಾಟಕ ಸರ್ಕಾರದಿಂದ**<br>**ಪ್ರೊ. ಕೆ. ನರಹರಿ,**<br>ವಿಶ್ರಾಂತ ಪ್ರಾಧ್ಯಾಪಕರು, ಬಿ.ಎಮ್.ಎಸ್. ಇಂಜಿನಿಯರಿಂಗ್ ಕಾಲೇಜು, ಮತ್ತು ವಿಶ್ರಾಂತ ಕರ್ನಾಟಕ ವಿಧಾನ ಪರಿಷತ್ ಸದಸ್ಯರು, ಶ್ರೀರಾಮ್‌ಪುರ, ಬೆಂಗಳೂರು – 560 021. | **ಸದಸ್ಯರು** | |

## 2019–20ನೇ ಸಾಲಿನ ಮಾನ್ಯ ಸಿಂಡಿಕೇಟ್ ಸದಸ್ಯರುಗಳ ವಿವರ

| ಕ್ರಮ ಸಂಖ್ಯೆ | ಮಾನ್ಯ ಸದಸ್ಯರುಗಳ ಹೆಸರು | ಹುದ್ದೆಯ ಹೆಸರು | ಕಾಲಾವಧಿ |
|---|---|---|---|
| 1 | **ಪ್ರೊ. ವೈ.ಎಸ್. ಸಿದ್ದೇಗೌಡ,**<br>ಮಾನ್ಯ ಕುಲಪತಿಗಳು, ತುಮಕೂರು ವಿಶ್ವವಿದ್ಯಾನಿಲಯ,<br>ತುಮಕೂರು. | **ಅಧ್ಯಕ್ಷರು** | **ಕ.ರಾ.ವಿ. ಅಧಿನಿಯಮ 2000 ಅನ್ವಯ ಹುದ್ದೆಯು ಶಾಶ್ವತ ಸದಸ್ಯರು** |
| 2 | **ಆಯುಕ್ತರು, ಅಥವಾ ಇವರ ಪ್ರತಿನಿಧಿ,**<br>ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, 2ನೇ ಮಹಡಿ,<br>ತಾಂತ್ರಿಕ ಶಿಕ್ಷಣ ಇಲಾಖೆ ಕಟ್ಟಡ,<br>ಅರಮನೆ ರಸ್ತೆ, ಬೆಂಗಳೂರು –560001. | **ಸದಸ್ಯರು** | **ಕ.ರಾ.ವಿ. ಅಧಿನಿಯಮ 2000 ಶಾಶ್ವತ ಸದಸ್ಯರು** |
| 3 | **ನಿರ್ದೇಶಕರು,**<br>ತಾಂತ್ರಿಕ ಶಿಕ್ಷಣ ಇಲಾಖೆ,<br>ತಾಂತ್ರಿಕ ಶಿಕ್ಷಣ ಭವನ, 3ನೇ ಮಹಡಿ, ಅರಮನೆ ರಸ್ತೆ,<br>ಬೆಂಗಳೂರು–560001. | **ಸದಸ್ಯರು** | **ಕ.ರಾ.ವಿ. ಅಧಿನಿಯಮ 2000 ಶಾಶ್ವತ ಸದಸ್ಯರು** |
| **ಜೇಷ್ಠತೆಯ ಆಧಾರದ ಮೇಲೆ ಸರದಿಯ ಮೇಲೆ ಒಂದು ವರ್ಷದ ಅವಧಿಗಾಗಿ ಕುಲಪತಿಯವರಿಂದ ನಾಮ ನಿರ್ದೇಶಿತನಾದ ಒಬ್ಬ ಡೀನ್;** | | | |
| 4 | **ಪ್ರೊ. ನೂರ್‌ಅಫ್ಜಾ**<br>ಡೀನರು, ವಾಣಿಜ್ಯ ಮತ್ತು ನಿರ್ವಹಣಾ ನಿಕಾಯ,<br>ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | **ಸದಸ್ಯರು** | **24.03.2020 ರಿಂದ 23.03.2021 ಅಥವಾ (ಡೀನರ ಅವಧಿ 14.04.2020)** |
| **ಖ್ಯಾತ ಶಿಕ್ಷಣ ತಜ್ಞರ, ವಾಣಿಜ್ಯ, ಬ್ಯಾಂಕಿಂಗ್, ಕೈಗಾರಿಕೆ ಅಥವಾ ಇತರೆ ವೃತ್ತಿಗಳ ಪೈಕಿಯಿಂದ ಕುಲಾಧಿಪತಿಯವರು ನಾಮನಿರ್ದೇಶನ ಮಾಡಿದ ಇಬ್ಬರು ಸದಸ್ಯರು;** | | | |
| 5 | **ಶ್ರೀ ಶ್ರೀನಿವಾಸ ಆರ್.ಕೆ.**<br>ತಂದೆ: ಲೇಟ್ ಕಲ್ಲಪ್ಪ, ರಂಗಾಪುರ, ಕೊಟ್ಟ ಅಂಚೆ,<br>ಶಿರಾ ತಾಲ್ಲೂಕು, **ತುಮಕೂರು ಜಿ.–572137.** | **ಸದಸ್ಯರು** | 26.06.2019 ರಿಂದ 25.06.2022 ಅಥವಾ ಮುಂದಿನ ಆದೇಶದವರೆಗೆ |
| 6 | **ಕುಮಾರಿ ಐಶ್ವರ್ಯ ಸುರೇಶ್,**<br>ನಂಬರ್ 220,<br>2ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಎ.ಇ.ಸಿ.ಎಸ್. ಬಡಾವಣೆ,<br>**ಸಂಜಯ್‌ನಗರ, ಬೆಂಗಳೂರು–560094.** | **ಸದಸ್ಯರು** | 29.06.2019 ರಿಂದ 28.06.2022 ಅಥವಾ ಮುಂದಿನ ಆದೇಶದವರೆಗೆ |

| | | | |
|---|---|---|---|
| **ಜೇಷ್ಠತೆಗನುಸಾರವಾಗಿ ಸರದಿಯ ಮೇಲೆ ಒಂದು ವರ್ಷದ ಅವಧಿಗಾಗಿ ಕುಲಪತಿಯವರಿಂದ ನಾಮನಿರ್ದೇಶಿತರಾದ ಸಂಯೋಜಿತ ಕಾಲೇಜುಗಳ ನಾಲ್ಕು ಪ್ರಾಂಶುಪಾಲರು, ಅವರಲ್ಲಿ ಒಬ್ಬರು ಮಹಿಳಾ ಪ್ರಾಂಶುಪಾಲರಾಗತಕ್ಕದ್ದು;** | | | |
| 7 | **ಪ್ರೊ. ಬಿ.ಆರ್. ಕೃಷ್ಣಮೂರ್ತಿ,**<br>ಪ್ರಾಂಶುಪಾಲರು, ಬಿ.ಎಂ.ಎಸ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜು,<br>ಹುಳಿಯಾರು.<br>ಚಿಕ್ಕನಾಯಕನಹಳ್ಳಿ ತಾ. ತುಮಕೂರು ಜಿಲ್ಲೆ–572 218. | **ಸದಸ್ಯರು** | 09.04.2019 ರಿಂದ 08.04.2020 |
| 8 | **ಪ್ರೊ. ಜಗದೀಶ್ ಎನ್.ಹೆಚ್.**<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಳ್ಳಾವಿ,<br>ತುಮಕೂರು ತಾ.<br>ತುಮಕೂರು ಜಿಲ್ಲೆ–572 224. | **ಸದಸ್ಯರು** | 09.04.2019 ರಿಂದ 08.04.2020 |
| 9 | **ಪ್ರೊ.ಶಿವಾನಂದಯ್ಯ ಎನ್.ಪಿ.**<br>ಪ್ರಾಂಶುಪಾಲರು, ಶ್ರೀ ಹೊನ್ನಾದೇವಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,<br>ದಂಡಿನಶಿವರ,<br>ತುರುವೇಕೆರೆ ತಾ. ತುಮಕೂರು ಜಿಲ್ಲೆ–572 215. | **ಸದಸ್ಯರು** | 09.04.2019 ರಿಂದ 08.04.2020 |
| 10 | **ಡಾ. ಆನಂದ ಕುಮಾರಿ,**<br>ಪ್ರಾಂಶುಪಾಲರು, ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ತುಮಕೂರು. | **ಸದಸ್ಯರು** | 09.04.2019 ರಿಂದ 08.04.2020 |

**ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಆರು ಜನ ಖ್ಯಾತ ಶಿಕ್ಷಣ ತಜ್ಞರು, ಅವರಲ್ಲಿ–**

1) **ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಒಬ್ಬರು;**
2) **ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ಒಬ್ಬರು;**
3) **ಮಹಿಳೆಯರು ಒಬ್ಬರು;**
4) **ಧಾರ್ಮಿಕ ಅಲ್ಪಸಂಖ್ಯಾತರಿಗೆ ಸೇರಿದ ಒಬ್ಬರು;**
5) **ಇತರೆ ಇಬ್ಬರು**

| | | | |
|---|---|---|---|
| 11 | **ಶ್ರೀ ಸುನಿಲ್‌ಪ್ರಸಾದ್ ಟಿ.ಎಸ್.**<br>'ನಂಜುಂಡೇಶ್ವರ ನಿಲಯ' ಹೆಚ್.ಪಿ.ಎಸ್. ರಸ್ತೆ,<br>ಶಿವಮೂಕಾಂಬಿಕ ನಗರ, **ತುಮಕೂರು–572102.** | **ಸದಸ್ಯರು** | 10.12.2019 ರಿಂದ 09.12.2022 ಅಥವಾ ಮುಂದಿನ ಆದೇಶದವರೆಗೆ |
| 12 | **ಶ್ರೀ ಪ್ರಸನ್ನಕುಮಾರ್**<br>ನಂ. 126, ಅಮರ್ ಟವರ್ಸ್, 1ನೇ ಅಡ್ಡರಸ್ತೆ,<br>ಗಾಂಧಿನಗರ, **ಬೆಂಗಳೂರು–560009.** | **ಸದಸ್ಯರು** | |
| 13 | **ಶ್ರೀಮತಿ ಭಾಗ್ಯಲಕ್ಷ್ಮೀ ಹಿರೇಂದ್ರ ಶಾ**<br>ನಂ. 472, 'ಶ್ರೀ ನಿರ್ಮಲ ನಿಲಯ',<br>2ನೇ ಸಿ ಮುಖ್ಯರಸ್ತೆ, 11ನೇ ಬ್ಲಾಕ್, 2ನೇ ಹಂತ,<br>ನಾಗರಭಾವಿ, **ಬೆಂಗಳೂರು–560072.** | **ಸದಸ್ಯರು** | |
| 14 | **ಶ್ರೀಮತಿ ಎಂ.ಎಸ್. ಭವ್ಯ,**<br>ವಿಲ್ಲಾ ನಂ.12, ಕೃಷ್ಣ ನಾರ್ಥ್‌ವುಡ್ಸ್,<br>ಚೊಕ್ಕಣ ಹಳ್ಳಿ ವಿಲೇಜ್, ಜಕ್ಕೂರು ಪೋಸ್ಟ್,<br>**ಬೆಂಗಳೂರು–560064.** | **ಸದಸ್ಯರು** | |
| 15 | **ಶ್ರೀ ರಾಜು**<br>ನಂ.734/2, ಗೋವಿನಪುರ ರಸ್ತೆ,<br>ಕೆ.ಆರ್. ಬಡಾವಣೆ, 8ನೇ ಅಡ್ಡರಸ್ತೆ, ಚರ್ಚ್ ಕಾಂಪೌಂಡ್ ಪಕ್ಕ,<br>ತಿಪಟೂರು–572201. **ತುಮಕೂರು ಜಿಲ್ಲೆ.** | **ಸದಸ್ಯರು** | 10.12.2019 ರಿಂದ 09.12.2022 ಅಥವಾ ಮುಂದಿನ ಆದೇಶದವರೆಗೆ |
| 16 | **ಶ್ರೀ ಟಿ.ಡಿ. ವಿನಯ್,**<br>'ನೇಮಿ ನಿವಾಸ' 5ನೇ ಅಡ್ಡರಸ್ತೆ, ಗೋಕಾಕ ರಸ್ತೆ,<br>ಸರಸ್ವತಿಪುರಂ, ದೇವರಾಜ ಅರಸ್ ರಸ್ತೆ, **ತುಮಕೂರು–572105.** | **ಸದಸ್ಯರು** | |
| **ರಾಜ್ಯ ಸರ್ಕಾರದ ಅನುಮೋದನೆಯೊಂದಿಗೆ ಕುಲಪತಿಯು ಜೇಷ್ಠತೆ ಗನುಸಾರವಾಗಿ, ಸರದಿಯ ಮೇಲೆ ಒಂದು ವರ್ಷದ ಅವಧಿಗೆ ನಾಮ ನಿರ್ದೇಶನ ಮಾಡಿದ ಸ್ನಾತಕೋತ್ತರ ಅಧ್ಯಯನಗಳ ಒಬ್ಬ ಪ್ರಾಧ್ಯಾಪಕ;** | | | |
| 17 | **ಪ್ರೊ. ಪಿ. ಪರಮಶಿವಯ್ಯ**<br>ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ,<br>ತುಮಕೂರು. | **ಸದಸ್ಯರು** | 31.12.2019 ರಿಂದ 30.12.2020 |
| 18 | ವೈದ್ಯಕೀಯ ಶಿಕ್ಷಣದ ನಿರ್ದೇಶಕರು ಅಥವಾ ಜಂಟಿ ನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ ಅವರ ನಾಮನಿರ್ದೇಶಿತರು; | **ಸದಸ್ಯರು** | **ಕ.ರಾ.ವಿ. ಅಧಿನಿಯಮ 2000 ಅನ್ವಯ ಹುದ್ದೆಯು ಶಾಶ್ವತ ಸದಸ್ಯರು** |
| 19 | ಸಾರ್ವಜನಿಕ ಶಿಕ್ಷಣದ ಆಯುಕ್ತರು ಅಥವಾ ಜಂಟಿ ನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ ಅವರ ನಾಮನಿರ್ದೇಶಿತರು; | **ಸದಸ್ಯರು** | **ಕ.ರಾ.ವಿ. ಅಧಿನಿಯಮ 2000 ಅನ್ವಯ ಹುದ್ದೆಯು ಶಾಶ್ವತ ಸದಸ್ಯರು** |
| 20 | ಪದವಿ ಪೂರ್ವ ಶಿಕ್ಷಣದ ನಿರ್ದೇಶಕರು ಅಥವಾ ಜಂಟಿ ನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ ಅವರ ನಾಮ ನಿರ್ದೇಶಿತರು; | **ಸದಸ್ಯರು** | **ಕ.ರಾ.ವಿ. ಅಧಿನಿಯಮ 2000 ಅನ್ವಯ ಹುದ್ದೆಯು ಶಾಶ್ವತ ಸದಸ್ಯರು** |
| 21 | **ಕುಲಸಚಿವರು (ಮೌಲ್ಯಮಾಪನ)**<br>ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | **ಸದಸ್ಯರು** | **ಕ.ರಾ.ವಿ. ಅಧಿನಿಯಮ 2000 ಅನ್ವಯ ಹುದ್ದೆಯು ಶಾಶ್ವತ ಸದಸ್ಯರು** |
| 22 | **ಕುಲಸಚಿವರು,**<br>ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | **ಸದಸ್ಯ ಕಾರ್ಯದರ್ಶಿ** | **ಕ.ರಾ.ವಿ. ಅಧಿನಿಯಮ 2000 ಅನ್ವಯ ಹುದ್ದೆಯು ಶಾಶ್ವತ ಸದಸ್ಯರು** |

f. **ವ್ಯಾಪ್ತಿ : ತುಮಕೂರು ಜಿಲ್ಲೆ**

g. **ಜಮೀನು/ ಕಟ್ಟಡಗಳು ಮತ್ತು ಆಡಳಿತಾತ್ಮಕ ವ್ಯವಸ್ಥೆಗಳೊಂದಿಗೆ ಕ್ಯಾಂಪಸ್/ ಸ್ನಾತಕೋತ್ತರ ಕೇಂದ್ರಗಳ ಸಂಖ್ಯೆ:**

| ಕ್ರಮ ಸಂಖ್ಯೆ | ಕ್ಯಾಂಪಸ್ ವಿವರ | ವಿಸ್ತೀರ್ಣ | ಒಟ್ಟು ನಿರ್ಮಾಣಗೊಂಡಿರುವ ವಿಸ್ತೀರ್ಣ |
|---|---|---|---|
| 01 | ಬಿದರಕಟ್ಟೆ ನೂತನ ಕ್ಯಾಂಪಸ್ | 240 ಎಕರೆ 10 ಗುಂಟೆಗಳು | ಇಲ್ಲ |
| 02 | ತುಮಕೂರು ವಿಶ್ವವಿದ್ಯಾನಿಲಯ, ಬಿ.ಎಚ್. ರಸ್ತೆ, ತುಮಕೂರು | 69 ಎಕರೆ 35 ಗುಂಟೆಗಳು | 17807 ಚದರ ಮೀ. |
| | | | |

| ಸ್ನಾತಕೋತ್ತರ ಕೇಂದ್ರಗಳು | | | |
|---|---|---|---|
| 01 | ಬುವನಹಳ್ಳಿ, ಸಿರಾ ತಾಲ್ಲೂಕು, ತುಮಕೂರು ಜಿಲ್ಲೆ | 25 ಎಕರೆ | ಇಲ್ಲ |
| 02 | ರಂಗಾಪುರ ಗ್ರಾಮ, ತಿಪಟೂರು ತಾಲ್ಲೂಕು | 15 ಎಕರೆ | ಇಲ್ಲ |
| 03 | ತುಮಕೂರು ತಾಲ್ಲೂಕು, ಕಸಬಾ ಹೋಬಳಿ, ಮೆಳೆಕೋಟೆ ಗ್ರಾಮ. | 566.81 ಚ.ಮೀ | ಇಲ್ಲ |

h. **ನಿಕಾಯಗಳ/ಳು**

**ನಿಕಾಯಗಳ ಸಂಖ್ಯೆ: 05**

1. ಕಲಾ ನಿಕಾಯ
2. ವಿಜ್ಞಾನ ನಿಕಾಯ
3. ವಾಣಿಜ್ಯ ಮತ್ತು ನಿರ್ವಹಣೆ ನಿಕಾಯ
4. ಶಿಕ್ಷಣ ನಿಕಾಯ
5. ಕಾನೂನು ನಿಕಾಯ

i. **ವಿಭಾಗಗಳ ಸಂಖ್ಯೆ:**

**ಸ್ನಾತಕೋತ್ತರ ವಿಭಾಗಗಳು : 22**

1) **ಡಾ. ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ**
2) **ಇಂಗ್ಲೀಷ್ ಅಧ್ಯಯನ ಮತ್ತು ಸಂಶೋಧನಾ ವಿಭಾಗ**
3) **ಇತಿಹಾಸ ಮತ್ತು ಪ್ರಾಕ್ತನಃಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ**
4) **ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ**
5) ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
6) **ಸಾರ್ವಜನಿಕ ಆಡಳಿತ ಅಧ್ಯಯನ ಮತ್ತು ಸಂಶೋಧನಾ ವಿಭಾಗ**
7) **ಸಮಾಜಕಾರ್ಯ ಅಧ್ಯಯನ ಮತ್ತು ಸಂಶೋಧನಾ ವಿಭಾಗ**
8) **ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ**
9) ಭೌತ್ತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
10) ಜೀವರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
11) **ಸಸ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ**
12) **ಪ್ರಾಣಿಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ**
13) **ಗಣಿತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ**
14) **ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ**
15) **ವ್ಯವಹಾರ ಆಡಳಿತ ಅಧ್ಯಯನ ಮತ್ತು ಸಂಶೋಧನಾ ವಿಭಾಗ**
16) **ಸಾವಯವ ರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ**
17) **ಜೈವಿಕ ತಂತ್ರಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ**
18) ಸ್ನಾತಕೋತ್ತರ ಗಣಕವಿಜ್ಞಾನ ಅನ್ವಯಿಕ ಅಧ್ಯಯನ ಮತ್ತು ಸಂಶೋಧನಾ ವಿಭಾಗ (ಎಂಸಿಎ)
19) **ಮನಃಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ**
20) **ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ಮತ್ತು ಸಂಶೋಧನಾ ವಿಭಾಗ**
21) **ಸ್ನಾತಕೋತ್ತರ ಸೂಕ್ಷ್ಮಜೀವಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ**
22) **ಸ್ನಾತಕೋತ್ತರ ಎಂ.ಕಾಂ. (ಮಾಹಿತಿ ವ್ಯವಸ್ಥೆ)**

j. **ಸ್ನಾತಕೋತ್ತರ ಕೋರ್ಸುಗಳು ಮತ್ತು ಸಂಶೋಧನಾ ಕೇಂದ್ರಗಳನ್ನೊಳಗೊಂಡ ಕಾಲೇಜುಗಳ (ವಿಶ್ವವಿದ್ಯಾನಿಲಯ ಆಡಳಿತ/ ಸಂಯೋಜಿತ ಕಾಲೇಜುಗಳು/ ಸ್ವಾಯತ್ತತ ಕಾಲೇಜುಗಳು/ ಘಟಕ ಕಾಲೇಜು) ಒಟ್ಟು ಸಂಖ್ಯೆ:**

**ಒಟ್ಟು ಕಾಲೇಜುಗಳ ಸಂಖ್ಯೆ: 90**

| | | |
|---|---|---|
| ಘಟಕ ಕಾಲೇಜುಗಳು | : | 02 |
| ವಿಶ್ವವಿದ್ಯಾನಿಲಯದ ಆಡಳಿತದ ಕಾಲೇಜುಗಳು | : | 00 |
| ಸ್ವಾಯತ್ತತ ಕಾಲೇಜು | : | 01 |
| ಸಂಯೋಜಿತ ಕಾಲೇಜುಗಳು | : | 87 |
| ಸ್ನಾತಕೋತ್ತರ ಕೋರ್ಸುಗಳ ಸ್ನಾತಕೋತ್ತರ ಕೇಂದ್ರಗಳು | : | 04 |

k. **ಒಟ್ಟು ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳು:**

| ಸ್ನಾತಕ – 09 | ಸ್ನಾತಕೋತ್ತರ – 06 |
|---|---|
| 1. ಬಿ.ಎ | 1. ಎಂ.ಎ |
| 2. ಬಿ.ಎಸ್ಸಿ | 2. ಎಂ.ಎಸ್ಸಿ |
| 3. ಬಿ.ಕಾಂ | 3. ಎಂ.ಕಾಂ |
| 4. ಬಿ.ಬಿ.ಎಂ | 4. ಎಂ.ಬಿ.ಎ |
| 5. ಬಿ.ಎಸ್.ಡಬ್ಲ್ಯೂ | 5. ಎಂ.ಎಸ್.ಡಬ್ಲ್ಯೂ |
| 6. ಬಿ.ಸಿ.ಎ | 6. ಎಂ.ಸಿ.ಎ |
| 7. ಬಿ.ವೋಕ್ | |
| 8. ಬಿ.ಇ.ಡಿ | |
| 9. ಬಿ.ಪಿ.ಇ.ಡಿ. | |

l. **ಸ್ನಾತಕ/ ಸ್ನಾತಕೋತ್ತರ/ ಎಂ.ಫಿಲ್/ ದೂರಶಿಕ್ಷಣ (ಪುರುಷ/ಮಹಿಳಾ/ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ) – ಸಮುದಾಯವಾರು ಒಟ್ಟು ವಿದ್ಯಾರ್ಥಿಗಳ ಸಂಖ್ಯೆ:**

| | ಪ/ಜಾ | | ಪ/ಪಂ | | ಹಿಂ/ವ | | ಸಾಮಾನ್ಯ | | ಒಟ್ಟು | | ಒಟ್ಟು |
|---|---|---|---|---|---|---|---|---|---|---|---|
| ಸ್ನಾತಕ | ಗಂ | ಹೆ | ಗಂ | ಹೆ | ಗಂ | ಹೆ | ಗಂ | ಹೆ | ಗಂ | ಹೆ | |
| | 3088 | 3738 | 1203 | 1633 | 9820 | 15923 | 428 | 733 | 14539 | 22027 | **36566** |
| ಸ್ನಾತಕೋತ್ತರ | 374 | 406 | 149 | 214 | 800 | 1626 | 38 | 90 | 1361 | 2336 | **3697** |

**2. ವಿಶ್ವವಿದ್ಯಾನಿಲಯದ ಅಧಿಕಾರಗಳು :**

**a. ಸಕಾರಾತ್ಮಕ ಮತ್ತು ನಕಾರಾತ್ಮಕ ಅಂಶಗಳು, ಸವಾಲುಗಳು ಮತ್ತು ಸಾಧ್ಯತೆಗಳು ಕೈಗೊಳ್ಳಲಾದ ವಿಶ್ಲೇಷಣೆಗಳು ಹಾಗೂ ಮಾರ್ಗೋಪಾಯಗಳು:**

**ಸಕಾರಾತ್ಮಕ ಅಂಶಗಳು :**

- ವೈ–ಫೈ ಸೌಲಭ್ಯ ಹೊಂದಿರುವ ತುಮಕೂರು ವಿ.ವಿ. ಆವರಣ
- ಸದಾ ಸಕ್ರಿಯವಾಗಿರುವ ವಿವಿ ಆಡಳಿತಾಂಗ, ಬದ್ಧರಾಗಿರುವ ಬೋಧಕ ಸಿಬ್ಬಂದಿ ಹಾಗೂ ಗ್ರಾಮೀಣ ಹಿನ್ನೆಲೆ ಹೊಂದಿರುವ ಚೇತನಶೀಲ ವಿದ್ಯಾರ್ಥಿಗಳು
- ಸರ್ಕಾರದ ಸ್ಮಾರ್ಟ ಸಿಟಿ ಪರಿಕಲ್ಪನೆಗೆ ಇಂಬು ನೀಡುವ ನಿಟ್ಟಿನಲ್ಲಿ ಸಾಮಾಜಿಕ ಮತ್ತು ವೈಜ್ಞಾನಿಕ ಪುರೋಗತಿಗಾಗಿ ವಿಶ್ವವಿದ್ಯಾನಿಲಯ ಪಾಲ್ಗೊಳ್ಳುವಿಕೆ.
- ನ್ಯಾಕ್ ಮಂಡಳಿಯಿಂದ "ಬಿ" ಶ್ರೇಯಾಂಕ.
- ಫಲಾನುಭವಿಗಳಿಗೆ ಪಾರದರ್ಶಕವಾದ ತ್ವರಿತ ಸೇವೆಯನ್ನು ಒದಗಿಸುವ "ಸಕಾಲ".
- ಆಂತರಿಕವಾದ ಪರೀಕ್ಷಾ ನಿರ್ವಹಣಾ ವ್ಯವಸ್ಥೆ.
- 12 ವಿಜ್ಞಾನ ವಿಷಯಗಳು, 10 ಕಲಾ ಮತ್ತು ಲಲಿತಕಲಾ ನಿಕಾಯಗಳು, 2 ವಾಣಿಜ್ಯ ಮತ್ತು ನಿರ್ವಹಣಾ ವಿಭಾಗಗಳ ಹೊರತಾಗಿ 2019–20ನೆಯ ಸಾಲಿನಲ್ಲಿ 10 ಹೊಸ ಸ್ನಾತಕೋತ್ತರ ಪದವಿಗಳನ್ನು ಆರಂಭಿಸಲಾಗಿದೆ.
- ವಿದ್ಯಾರ್ಥಿಗಳ ಪ್ರವೇಶಾತಿ– ಬಹುಪಾಲು ವಿದ್ಯಾಥಿಗಳು ಗ್ರಾಮೀಣ ಹಿನ್ನೆಲೆಯಿಂದ ಬರುವ ಆಸಕ್ತ ವಿದ್ಯಾರ್ಥಿಗಳು
- ಶೈಕ್ಷಣಿಕ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಶ್ರೇಷ್ಠತೆಯನ್ನು ಹೊಂದಲು ಹಾಗೂ ಆವಿಷ್ಕಾರಗಳನ್ನು ಉತ್ತೇಜಿಸಲು ವಿಶೇಷ ಒಲವು ಮತ್ತು ಉತ್ತೇಜನ.
- ಎಲ್ಲಾ ಫಲಾನುಭವಿಗಳೊಂದಿಗೆ ಸಾಮರಸ್ಯ ಮತ್ತು ಸೌಹಾರ್ದಯುತ ಸಂಬಂಧ.

- ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಸಹಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳಿಂದ ಉತ್ತಮವಾದ ಪಾಲ್ಗೊಳ್ಳುವಿಕೆ.
- ಎಲ್ಲಾ ಹಂತಗಳಲ್ಲೂ ಪಿಹೆಚ್.ಡಿ ಹೊಂದಿದ ನುರಿತ ಬೋಧಕ ವರ್ಗದ ಲಭ್ಯತೆ.
- ಬೋಧನಾ– ಕಲಿಕಾ ಮೂಲಭೂತ ಸೌಕರ್ಯಗಳು–ಐಸಿಟಿ ಸೌಲಭ್ಯ ಹೊಂದಿದ ಬೋಧನಾ ಕೊಠಡಿಗಳು, ಇತರೆ ಆಧುನಿಕ ಬೋಧನಾ ಉಪಕರಣಗಳು.
- ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಉಪಯುಕ್ತ ಗ್ರಂಥಗಳು ಹೊಂದಿದ ಗ್ರಂಥಾಲಯ ವ್ಯವಸ್ಥೆ.
- ಧನಸಹಾಯ ಪಡೆದಿರುವ ಸಂಶೋಧನಾ ಯೋಜನೆಗಳು– ವಿಶ್ವವಿದ್ಯಾನಿಲಯದ ವಿವಿಧ ಸಂಶೋಧನಾರ್ಥಿಗಳು DST-SERB, VGST, ICHR ಹಾಗೂ UGC ಇವೇ ಮುಂತಾದ ಪ್ರತಿಷ್ಠಿತ ಸಂಸ್ಥೆಗಳ ಪ್ರಾಯೋಜಿತ ಸಂಶೋಧನಾ ಯೋಜನೆಗಳಲ್ಲಿ ತೊಡಗಿಸಿಕೊಂಡಿದ್ದಾರೆ.
- ಬೋಧಕ ವರ್ಗದಿಂದ ಉತ್ತಮ ಸಂಶೋಧನಾ ಸಾಧನೆ, ಉತ್ತಮ ಪರಿಣಾಮ ಶೇಯಾಂಕ(5–16) ಹೊಂದಿರುವ ನಿಯತಕಾಲಿಕೆಗಳಲ್ಲಿ ವಿವಿಧ ಅಧ್ಯಾಪಕರುಗಳ ಸಂಶೋಧನಾ ಪ್ರಬಂಧಗಳು ಪ್ರಕಟಣೆಗೊಂಡಿವೆ.
- ಎಲ್ಲಾ ವಿಭಾಗಗಳು ರಾಷ್ಟ್ರೀಯ–ಅಂತರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣಗಳನ್ನು ಆಯೋಜಿಸುತ್ತಿವೆ.
- ವಿದ್ಯಾರ್ಥಿಗಳ ಉಪಯುಕ್ತತೆಗಾಗಿ ವೈ–ಫೈ ಮತ್ತು ಸ್ಥಳಿಯ ಸಂಪರ್ಕಜಾಲ ವ್ಯವಸ್ಥೆ ಹೊಂದಿರುವ 8–10 ಗಣಕಯಂತ್ರಗಳನ್ನು ಪ್ರತಿ ವಿಭಾಗದಲ್ಲೂ ಲಭ್ಯಗೊಳಿಸಲಾಗಿದೆ.
- ಸಾಕಷ್ಟು ಗಣಕಯಂತ್ರ ಮತ್ತು ಪೂರಕ ತಂತ್ರಾಂಶಗಳನ್ನು ಹೊಂದಿರುವ ಭಾಷಾ ಪ್ರಯೋಗಾಲಯ.
- 25 ಗಣಕಯಂತ್ರಗಳನ್ನು ಹೊಂದಿರುವ ಅಂತರ್ಜಾಲ ಸೇವಾ ಕೇಂದ್ರ.
- ಆನ್‌ಲೈನ್ ಮುಖಾಂತರವೇ ಪ್ರವೇಶಾತಿ ಪ್ರಕ್ರಿಯೆ, ಶುಲ್ಕ ಪಾವತಿ.
- ಕೌಶಲ್ಯಾಭಿವೃದ್ಧಿ ಕೇಂದ್ರದ ಮುಖಾಂತರ ವಿದ್ಯಾರ್ಥಿಗಳಿಗೆ ಕೌಶಲ್ಯ ಅಭಿವೃದ್ಧಿಗೊಳಿಸುವ ತರಬೇತಿ ಕಾರ್ಯಕ್ರಮಗಳು.
- ನೇಮಕಾತಿ ಘಟಕದ ಮುಖಾಂತರ ನೇರ ಉದ್ಯೋಗ ಪಡೆಯುವ ಅವಕಾಶ ಕಲ್ಪಿಸುವಿಕೆ.
- SCP/TSP ಘಟಕದ ಮುಖಾಂತರ ಕೆಎಎಸ್/ಐಎಎಸ್/ಐಪಿಎಸ್/ಯುಜಿಸಿ–ಸಿಎಸ್‌ಐಆರ್/ ಎನ್‌ಇಟಿ/ಕೆ–ಸೆಟ್/ಕೆಎಎಸ್/ಬ್ಯಾಂಕಿಂಗ್ ಇತ್ಯಾದಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಲಾಗುತ್ತಿದೆ. ಈ ಘಟಕವು ಎಸ್ಸಿ/ಎಸ್‌ಟಿ ಬುಕ್ ಬ್ಯಾಂಕ್ ಯೋಜನೆಯ ಮುಖಾಂತರ ವಿವಿಧ ವಿಭಾಗಗಳಿಗೆ ಗ್ರಂಥಗಳನ್ನು ನೀಡುತ್ತಿದೆ. ಸಂಶೋಧನಾರ್ಥಿಗಳಿಗೆ ಲ್ಯಾಪ್‌ಟಾಪ್, ಆರಂಭಿಕ ವಿದ್ಯಾರ್ಥಿ ವೇತನ, ಸಂಶೋಧನಾ ವೇತನಗಳನ್ನು ಕೊಡುವ ಮುಖಾಂತರ ವಿದ್ಯಾರ್ಥಿಗಳಲ್ಲಿ ಕಲಿಕೆ ಮತ್ತು ಸಂಶೋಧನೆಗೆ ಉತ್ತೇಜನ ನೀಡುತ್ತಿದೆ.
- ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿದ್ಯಾರ್ಥಿಕ್ಷೇಮಾಭಿವೃದ್ಧಿ ಅಧಿಕಾರಿಯನ್ನು ನೇಮಿಸಲಾಗಿದೆ.
- ಸಾಮಾಜಿಕ ಅಭಿವೃದ್ಧಿ ಮತ್ತು ಸಂಶೋಧನೆಗಳಿಗಾಗಿ ವಿವಿಧ ಅಧ್ಯಯನ ಪೀಠಗಳನ್ನು ಸ್ಥಾಪಿಸಲಾಗಿದೆ.
- ವಿವಿಧ ವಿಶೇಷ ದಿನಾಚರಣೆಗಳನ್ನು ಆಚರಿಸುವ ಮೂಲಕ ಸಾಮಾಜಿಕ, ಮಾನವೀಯ. ರಾಷ್ಟ್ರೀಯ ಮತ್ತು ಪ್ರಗತಿಪರ ಮೌಲ್ಯಗಳನ್ನು ಉಳಿಸಿ ಬೆಳೆಸುವ ಕೆಲಸವೂ ನಡೆಯುತ್ತಿದೆ.

**ನಕಾರಾತ್ಮಕ ಅಂಶಗಳು:**

- ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವ, ವಿಶ್ಲೇಷಣಾ ಮನೋಭಾವದ ಕೊರತೆ.
- ಸಾಕಷ್ಟು ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಹೊಂದಲು ಸ್ಥಳಾವಕಾಶದ ಕೊರತೆ.
- ಸ್ಥಳಾವಕಾಶ, ಮೂಲಭೂತ ಸೌಕರ್ಯ ಹಾಗೂ ಪ್ರಚಲಿತ ತಂತ್ರಜ್ಞಾನದ ಅಭಿವೃದ್ಧಿಯಾಗಬೇಕಿದೆ.
- ಯುಜಿಸಿ ಮಾನದಂಡಗಳಿಗನುಗುಣವಾದ ಸಿಬ್ಬಂದಿ ವರ್ಗದ ಸಂಖ್ಯೆಯ ಕೊರತೆ.
- ಸಂಶೋಧನೆಗೆ ಪೂರಕವಾದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಯಾಗಬೇಕಿದೆ.
- ನೇಮಕಾತಿ ಘಟಕವು ಸುಧಾರಣೆಯಾಗಬೇಕಿದೆ.
- ಉದ್ಯಮಗಳ ಜೊತೆಗೆ ಪಾಲುದಾರಿಕೆಯ ಮುಖಾಂತರ ಅನುವಾದ ಸಂಶೋಧನೆಯ ಉತ್ತೇಜನ ನಡೆಯಬೇಕಿದೆ.

**ಅವಕಾಶಗಳ ಲಭ್ಯತೆ:**

- ವೈ–ಫೈ ಸುಸಜ್ಜಿತ ಕ್ಯಾಂಪಸ್.
- ತುಮಕೂರು ಒಂದು ಕೈಗಾರಿಕಾ ಕೇಂದ್ರವಾಗಿ ವಿಕಸನ ಹೊಂದಿತ್ತಿರುವುದರಿಂದ ವಿವಿಯ ಇರುವಿಕೆಯು ಉತ್ತಮ ಅವಕಾಶಗಳನ್ನು ಸೃಷ್ಟಿಸಿದೆ.
- ಸ್ನಾತಕೋತ್ತರ ಪಠ್ಯಕ್ರಮದಲ್ಲಿ ಸಿಬಿಸಿಎಸ್ ಪದ್ಧತಿಯನ್ನು ಅಳವಡಿಸಿರುವುದರಿಂದ ವಿದ್ಯಾರ್ಥಿಗಳಿಗೆ ಇತರೆ ಕ್ಷೇತ್ರಗಳ ವಿಷಯಗಳನ್ನು ಅಭ್ಯಸಿಸಲು ಅವಕಾಶ ದೊರತಿದೆ.
- ರಾಷ್ಟ್ರ ಮತ್ತು ಜಾಗತಿಕ ಮಟ್ಟದಲ್ಲಿ ಪ್ರಾಮುಖ್ಯತೆ ಪಡೆದಿರುವ ಅನೇಕ ಸಂಶೋಧನಾ ಸಂಸ್ಥೆಗಳು ಸಮೀಪದ ಬೆಂಗಳೂರಿನಲ್ಲೇ ಇರುವುದು ವಿದ್ಯಾರ್ಥಿಗಳ ಕಲಿಕೆ ಮತ್ತು ಸಂಶೋಧನೆಗೆ ಸಹಕಾರಿಯಾಗಿದೆ.
- ತುಮಕೂರು ಒಂದು ಕೈಗಾರಿಕಾ ಕ್ಷೇತ್ರವಾಗಿದ್ದು ಹೊಂದಿದ್ದು, ಅನೇಕ ಕೈಗಾರಿಕೆಗಳು ಈಗಾಗಲೇ ಸ್ಥಾಪಿತಗೊಂಡಿವೆ. ಇನ್ನೂ ಅನೇಕ ಉದ್ದಿಮೆಗಳು ತುಮಕೂರಿನಲ್ಲಿ ಸ್ಥಾಪಿತವಾಗುವ ನಿರೀಕ್ಷೆಯಿರುವುದರಿಂದ ವಿಶ್ವವಿದ್ಯಾನಿಲಯದ ಫಲಾನುಭವಿಗಳಾಗಿರುವ ವಿದ್ಯಾರ್ಥಿ ಸಮೂಹಕ್ಕೆ ಉದ್ಯೋಗವಕಾಶಗಳು ಹೆಚ್ಚು ಹೆಚ್ಚು ದೊರೆಯುವಂತಹ ವರದಾನವಾಗಿದೆ.
- ತುಮಕೂರಿಗೆ ಸನಿಹವಾಗಿಯೇ ಇರುವ ಮೂರು ಮುಖ್ಯ ಕೈಗಾರಿಕಾ ಪ್ರದೇಶಗಳು– ದಾಬಸ್‌ಪೇಟೆ (20 ಕಿಮಿ), ನೆಲಮಂಗಲ (40 ಕಿಮಿ) ಹಾಗೂ ಪೀಣ್ಯ (60ಕಿಮಿ)– ತುಮಕೂರಿಗೆ ಸನಿಹದಲ್ಲಿ ಇರುವುದು ಪದವೀದರ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ.
- ಅನೇಕ ರಾಷ್ಟ್ರೀಯ, ಅಂತರಾಷ್ಟ್ರೀಯ ವಿಚಾರ ಸಂಕಿರಣ, ಕಾರ್ಯಗಾರಗಳನ್ನು ನಿಯಮಿತವಾಗಿ ಏರ್ಪಡಿಸುತ್ತಿರುವುದು, ವಿದ್ಯಾರ್ಥಿಗಳಿಗೆ, ಸಂಶೋನಾರ್ಥಿಗಳಿಗೆ ಮತ್ತು ಅಧ್ಯಾಪಕರುಗಳಿಗೆ, ಸಂಪನ್ಮೂಲ ವ್ಯಕ್ತಿಗಳೊಂದಿಗೆ ವಿಚಾರ ವಿನಿಮಯದ ಅವಕಾಶ ಕಲ್ಪಿಸಿಕೊಡುತ್ತಿದೆ.

**ಸವಾಲುಗಳು:**

- ಬೆಳೆಯುತ್ತಿರುವ ಕೈಗಾರಿಕಾ ರಂಗದಿಂದಾಗಿ ಸ್ನಾತಕೋತ್ತರ ಮತ್ತು ಸಂಶೋಧನಾ ಪದವಿಗಳಿಗೆ ವಿದ್ಯಾರ್ಥಿಗಳ ಸಂಖ್ಯೆಯನ್ನು ಕಡಿತಗೊಳಿಸಬಹುದು.
- ಭವಿಷ್ಯದಲ್ಲಿ ಉತ್ತಮ ವಿಮರ್ಶಾ ಸಾಮರ್ಥ್ಯ ಹೊಂದಿರುವ ವಿದ್ಯಾರ್ಥಿಗಳ ಸಂಖ್ಯೆಯು ಕಡಿಮೆಯಾಗುವ ಸಾಧ್ಯತೆ ಇರುವುದರಿಂದ ಉತ್ತಮ ಸಂಶೋಧನಾ ವಿದ್ಯಾರ್ಥಿಗಳು ದೊರೆಯುವುದು ದುರ್ಬಲವಾಗಬಹುದು.

**b. ಅಲ್ಪಾವಧಿ ಮತ್ತು ದೀರ್ಘಾವಧಿಯ ಯೋಜನೆಗಳು–ಕೈಗೊಳ್ಳಲಾದ ಆಡಳಿತಾತ್ಮಕ ಮಾರ್ಗೋಪಾಯಗಳು, ಬೋಧಕೇತರ ಸಿಬ್ಬಂಧಿಗೆ ನೀಡಲಾದ ತರಬೇತಿ.**

**ಅಲ್ಪಾವಧಿ ಯೋಜನೆಗಳು:**

- ಕೆಲವು ವಿಭಾಗಗಳನ್ನು ಕಲಿಕಾ ಸಾಮರ್ಥ್ಯದ ಶ್ರೇಷ್ಠತೆಯನ್ನು ಹೊಂದಿರುವ ವಿಭಾಗಗಳೆಂದು ಗುರುತಿಸುವತ್ತ ವಿಶ್ವವಿದ್ಯಾನಿಲಯವು ಕಾರ್ಯೋನ್ಮುಕವಾಗಿದೆ.
- ದೂರಸಂಪರ್ಕ ಇಲಾಖೆ, ಭಾರತ ಸರಕಾರ, ಇದರ ಪ್ರಾಯೋಜಕತ್ವ ಮತ್ತು ಸಹಭಾಗಿತ್ವದಲ್ಲಿ I-MADE ತಂತ್ರಾಂಶದ ಮುಖಾಂತರ ಡಿಜಿಟಲ್ ಕ್ಯಾಂಪಸ್‌ನ್ನು ರೂಪಿಸುವುದಕ್ಕಾಗಿ ವಿವಿಯ ದಾಪುಗಾಲು ಹಾಕುತ್ತಿದೆ.
- ಕೆಲವು ವಿಷಯಗಳಲ್ಲಿ ಡಿಪ್ಲೊಮೊ ಮತ್ತು ಸ್ನಾತಕೋತ್ತರ ಡಿಪ್ಲೊಮೊಗಳನ್ನು ಪ್ರಾರಂಭಿಸುವುದು– ತೆಂಗಿನ ತೋಟಗಾರಿಕೆ ಮತ್ತು ನಿರ್ವಹಣೆ, ಸಾವಯವ ಕೃಷಿ, ಕಾಂಪೊಸ್ಟ್ ತಯಾರಿ, ಅಣಬೆ ಕೃಷಿ, ಮೃದು ಕೌಶಲ್ಯಗಳು, ನಿರ್ವಹಣೇ, ವಾಣಿಜ್ಯಶಾಸ್ತ್ರ ಮತ್ತು ಸಮಾಜಶಾಸ್ತ್ರ.
- **ನಿರ್ದಿಷ್ಟ ಕೌಶಲ್ಯಗಳಲ್ಲಿ ತರಬೇತಿ:** ಪದವಿ ಪೂರ್ವ ಪರೀಕ್ಷೆ ಪಾಸಾದವರಿಗಾಗಿ ಕೌಶಲ್ಯಾಧಾರಿತ ಪ್ರಮಾಣಪತ್ರ ಕೋರ್ಸಗಳು, ಪದವಿ ವಿದ್ಯಾರ್ಥಿಗಳಿಗಾಗಿ ಮತ್ತು ಶಿಕ್ಷಣ ಮೊಟಕುಗೊಳಿಸಿದವರಿಗಾಗಿ ಅಂತರ್ಗತ ಕೀಟ ನಿರ್ವಹಣಾ ತರಬೇತಿ, ಸಾವಯವ ಗೊಬ್ಬರ ಮತ್ತು ಕೀಟನಾಶಕ ತಯಾರಿ, ವಿಷಕಾರಿ, ಕೀಟನಾಶಕ ಮತ್ತು ಕೈಗಾರಿಕಾ ತ್ಯಾಜ್ಯಗಳ ನಿರ್ವಹಣೆಗಾಗಿ ಸೂಕ್ಷ್ಮಾಣು ತಂತ್ರಜ್ಞಾನದ ತರಬೇತಿ.

- "ಸ್ವಯಂ" ಎನ್ನುವ ಭಾರತ ಸರ್ಕಾರದ ಕಲಿಕಾ ಯೋಜನೆಯ ಮುಖಾಂತರ ವಿದ್ಯಾರ್ಥಿಗಳನ್ನು ಮತ್ತು ಸಿಬ್ಬಂದಿ ವರ್ಗದವರನ್ನು ಆನ್‌ಲೈನ್ ಪದವಿ ಮತ್ತು ಡಿಪ್ಲೊಮೊ ಕೋರ್ಸುಗಳಲ್ಲಿ ಭಾಗವಹಿಸುವಂತೆ ಉತ್ತೇಜನ ನೀಡಲಾಗುತ್ತಿದೆ.
- ಈಗಾಗಲೇ ಸ್ನಾತಕೋತ್ತರ ಮತ್ತು ಪಿಹೆಚ್‌ಡಿ ಪದವಿಗಳನ್ನು ನೀಡುತ್ತಿರುವ 25 ವಿಭಾಗಗಳಿಗೆ ಹೊರತಾಗಿ 2019–20ನೆಯ ಸಾಲಿನಿಂದ 10 ಹೊಸ ಸ್ನಾತಕೋತ್ತರ ಪದವಿಗಳನ್ನು ಆರಂಭಿಸುವ ಬಗ್ಗೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
- ಬೋಧಕೇತರ ಸಿಬ್ಬಂದಿಗಳಿಗೆ ಗಣಕಯಂತ್ರವನ್ನು ಉಪಯೋಗಿಸುವ ಬಗ್ಗೆ ಪ್ರಾಯೋಗಿಕ ತರಬೇತಿಯನ್ನು ನೀಡುವುದು.
- ಇ–ಆಡಳಿತವನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಬೋಧಕೇತರ ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡುವುದು.

**ದೀರ್ಘಾವಧಿ ಯೋಜನೆಗಳು:**

- ಏಕಪ್ರಕಾರವಾದ ಸಂಶೋಧನೆಯ ಮುಖಾಂತರ ಶ್ರೇಷ್ಠವಾದ ಬೋಧನಾ ಕಲಿಕೆ ಮತ್ತು ಸಂಶೋಧನಾ ಸೌಲಭ್ಯಗಳನ್ನು ರೂಪಿಸುವಂತೆ ವಿಜ್ಞಾನಿ/ಸಂಶೋಧನಾರ್ಥಿಗಳನ್ನು ವಿಶ್ವವಿದ್ಯಾನಿಲಯವು ಉತ್ತೇಜಿಸುತ್ತಿದೆ.
- ಸಂಶೋಧನೆ ಮತ್ತು ವಾಣಿಜ್ಯೋದ್ಯಮಿಗಳ ವಿಕಸನಕ್ಕೆ ಉತ್ತೇಜಿಸುವುದು.
- ಸ್ಥಳವಕಾಶ ಕೊರತೆಯಿರುವುದರಿಂದ ಹೊಸ ಕ್ಯಾಂಪಸ್ ಮತ್ತು ಕಟ್ಟಡಗಳ ನಿರ್ಮಾಣ.
- ವಿಶ್ವವಿದ್ಯಾನಿಲಯ ವಿಜ್ಞಾನ ಪರಿಕರ ಕೇಂದ್ರ ಯುಎಸ್‌ಐಸಿಯ ಅಭಿವೃದ್ಧಿ.
- ತಂತ್ರಾಧಾರಿತ ಉದ್ಯಮ ಉಗಮ ಕೇಂದ್ರದ ಅಭಿವೃದ್ಧಿ.
- ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಸಹಭಾಗಿತ್ವ ಸಂಶೋಧನೆ.

**ಕೈಗೊಳ್ಳಲಾದ ಆಡಳಿತಾತ್ಮಕ ಕಾರ್ಯಗಳು:**

- ಶೈಕ್ಷಣಿಕ ಮತ್ತು ಆಡಳಿತಾತ್ಮಕ ವಿಷಯಗಳ ಗಣಕೀಕರಣ.
- ಸಕಾಲ ಯೋಜನೆಯ ಮುಖಾಂತರ ಆಡಳಿತದಲ್ಲಿ ಪಾರದರ್ಶಕತೆ.
- ಭಾರತ ಸರ್ಕಾರದ I-MADE ಎಂಬ ಶೈಕ್ಷಣಿಕ ಮತ್ತು ಆಡಳಿತಾತ್ಮಕ ವ್ಯವಸ್ಥೆಯ ಕುರಿತು ತರಬೇತಿ.
- ಸಂಪೂರ್ಣವಾಗಿ ಗಣಕೀಕರಣಗೊಂಡ ಅಂತರ್ಗತ ಪರೀಕ್ಷಾ ನಿರ್ವಹಣಾ ವ್ಯವಸ್ಥೆ.

**c. ನ್ಯಾಕ್ ಮತ್ತು ಶೈಕ್ಷಣಿಕ ಹಾಗೂ ಆಡಳಿತ ಲೆಕ್ಕ ಪರಿಶೋಧಕ ಸಮಿತಿಯ ಶಿಫಾರಸ್ಸುಗಳಿಗನುಗುಣವಾಗಿ ಕೈಗೊಳ್ಳಲಾದ ಆಡಳಿತಾತ್ಮಕ ಮತ್ತು ಶೈಕ್ಷಣಿಕ ಸುಧಾರಣೆಗಳು:**

ಶೈಕ್ಷಣಿಕ ಹಾಗೂ ಆಡಳಿತ ಲೆಕ್ಕ ಪರಿಶೋಧಕ ಸಮಿತಿ (AAA) ಯು ತುಮಕೂರು ವಿವಿಗೆ ದಿನಾಂಕ:09.04.2019ರ ನಡುವೆ ಭೇಟಿ ನೀಡಿ ಹಲವಾರು ಶಿಫಾರಸ್ಸುಗಳನ್ನು ಮಾಡಿದೆ. ವಿಶ್ವವಿದ್ಯಾನಿಲಯವು ಈ ಶಿಫಾರಸ್ಸುಗಳನ್ನು ಪಾಲಿಸಲು ಅಗತ್ಯ ಕ್ರಮಗಳನ್ನು ಕೈಗೊಂಡಿದ್ದು, ನ್ಯಾಕ್ ಸಮಿತಿಯ ಮರು ಮೌಲ್ಯಾಂಕನದ ಪರಿಶೀಲನೆಗೊಳಪಡಿಸಿಕೊಳ್ಳಲು ಸಿದ್ಧತೆಗಳನ್ನು ಮಾಡುತ್ತಿದೆ.

**d. ಸ್ನಾತಕೋತ್ತರ ಅಧ್ಯಯನ ಕೇಂದ್ರಗಳು, ಹೆಚ್ಚುವರಿ ಕ್ಯಾಂಪಸ್ ಅಭಿವೃದ್ಧಿಗೆ ಕೈಗೊಳ್ಳಲಾದ ಆಡಳಿತಾತ್ಮಕ ಕ್ರಮಗಳು:**

ತುಮಕೂರು ನಗರದಲ್ಲಿರುವ ವಿವಿ ಕ್ಯಾಂಪಸ್‌ಗೆ ಹೊರತಾಗಿ ಬಿದರಕಟ್ಟೆಯಲ್ಲಿ ರಾಜ್ಯ ಸರಕಾರವು ನಿಗದಿ ಮಾಡಿರುವ 240 ಎಕೆರೆ ಜಾಗದಲ್ಲಿ ಹಲವಾರು ಕಟ್ಟಡ ನಿರ್ಮಾಣ ಕಾಮಗಾರಿಗಳು–ಪುರುಷ–ಮಹಿಳಾ ವಸತಿನಿಲಯ, ಕಲಾಭವನ, ಪರೀಕ್ಷಾ ಪೂರ್ವ ತರಬೇತಿ ಕೇಂದ್ರ, ಹಾಗೂ ಮುಖ್ಯದ್ವಾರದ ನಿರ್ಮಾಣ, ಇದಲ್ಲದೆ ಒಬ್ಬರು ಸಂಯೋಜಕರನ್ನು ನಿಯಮಿಸಿ ತಿಪಟೂರಿನಲ್ಲಿ ಸ್ನಾತಕೋತ್ತರ ವಾಣಿಜ್ಯ ಅಧ್ಯಯನ ಕೇಂದ್ರವನ್ನು ಸ್ಥಾಪಿಸಲಾಗಿದೆ.

**e. ಸಾಮಾಜಿಕವಾಗಿ ಪ್ರಸ್ತುತವಾಗಿರುವ, ಪ್ರಭಾವಿಶಾಲಿ ಸಂಶೋಧನೆಗಳಿಗೆ ಉತ್ತೇಜನ:**

ಸಾಮಾಜಿಕವಾಗಿ ಪ್ರಸ್ತುತವಾಗುವ ಜನರನ್ನು ಪ್ರಭಾವಿಸಬಲ್ಲ, ಉಪಯುಕ್ತ ಸಂಶೋಧನೆಗಳನ್ನು ಕೈಗೊಳ್ಳುವಂತೆ ವಿಶ್ವವಿದ್ಯಾನಿಲಯವು ಸಂಶೋಧನಾರ್ಥಿಗಳನ್ನು ಸದಾ ಉತ್ತೇಜಿಸುತ್ತಿದೆ. ಇದರ ಹೊರತಾಗಿ ಸಮಾಜ ಮುಖಿಯಾಗಿರುವ ಸಂಶೋಧನಾ ಯೋಜನೆಗಳನ್ನು ಕೈಗೊಳ್ಳುವಂತೆ ಬೋಧಕ ಸಿಬ್ಬಂಧಿಗಳನ್ನು ವಿಶ್ವವಿದ್ಯಾನಿಲಯದ ಆಡಳಿತ ವರ್ಗ ಸದಾಕಾಲವೂ ಉತ್ತೇಜಿಸುತ್ತದೆ.

ವಿಶ್ವವಿದ್ಯಾನಿಲಯದ ವಿಜ್ಞಾನ ನಿಕಾಯವು ಕೃಷಿ ಕ್ರಮಗಳನ್ನು ಸಕಾರಾತ್ಮಕ ಅಭಿವೃದ್ಧಿಗಾಗಿ ಇನ್‌ಕ್ಯೂಬೇಷನ್ ಸೆಂಟರ್ ಅನ್ನು ಪ್ರಾರಂಭಿಸಿದ್ದು, ಸಾಮಾಜಿಕವಾಗಿ ಪ್ರಸ್ತುತವಾಗುವ ಅನೇಕ ಪಿಹೆಚ್.ಡಿ. ಪ್ರಬಂಧಗಳನ್ನು ಮಂಡಿಸಲಾಗಿದೆ. ಬರ, ಬೆಳೆನಿರ್ವಹಣೆ, ಕ್ಯಾನ್ಸರ್, ಸಕ್ಕರೆ ಕಾಯಿಲೆ ಹಾಗೂ ಶ್ವಾಸಕೋಶ ಸಂಬಂಧಿ ಕಾಯಿಲೆಗಳು.

ಸಮಾಜ ವಿಜ್ಞಾನ ನಿಕಾಯದ ಸಿಬ್ಬಂದಿಗಳು ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ರಂಗದಲ್ಲಾಗುತ್ತಿರುವ ನೂತನ ಬೆಳವಣಿಗೆಗಳು, ರಾಜಕೀಯ ಮತ್ತು ಚಾರಿತ್ರಿಕ ಹಿನ್ನೆಲೆಗಳು ಹಾಗೂ ಅಂತರಾಷ್ಟ್ರೀಯ ಆಯಾಮಗಳಲ್ಲಿ ಸಂಶೋಧನೆಗಳಲ್ಲಿ ನಿರತರಾಗಿರುವರು.

**f. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಉನ್ನತಿಯನ್ನು ಪಡೆಯಲು ಶ್ರಮ:**

ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಉನ್ನತಿಯನ್ನು ಪಡೆಯುವುದಕ್ಕಾಗಿ ತುಮಕೂರು ವಿಶ್ವವಿದ್ಯಾನಿಲಯವು ಸಂಶೋಧನೆ, ಪಠ್ಯಕ್ರಮ ಅಭಿವೃದ್ಧಿ ಹಾಗೂ ವಿಸ್ತರಣಾ ಚಟುವಟಿಕೆಗಳಲ್ಲಿ ಹಲವಾರು ಉನ್ನತ ಅಭಿವೃದ್ಧಿಶೀಲ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಯುಜಿಸಿ ನಿಯಮಾವಳಿಗಳು ಹಾಗೂ ಉದ್ಯೋಗಕ್ಷೇತ್ರದ ಅಗತ್ಯಗಳನ್ನು ಆಧರಿಸಿ ವಿವಿಧ ನಿಕಾಯಗಳ ಪಠ್ಯಕ್ರಮಗಳನ್ನು ಪರಿಷ್ಕರಿಸಲಾಗಿದೆ, ವೃತ್ತಿ ಮೌಲ್ಯಗಳನ್ನು, ವಿಚಾರ ಸಂಕಿರಣಗಳನ್ನು, ಕಾರ್ಯಗಾರಗಳನ್ನು ಆಯೋಜಿಸುತ್ತಿದೆ.

ಮೊದಲ ಬಾರಿಗೆ ಶೈಕ್ಷಣಿಕವಾದ ಹಾಗೂ ಆಡಳಿತಾತ್ಮಕವಾದ ಲೆಕ್ಕ ಪರಿಶೋಧನೆಯನ್ನು ನಡೆಸಲಾಗಿದೆ. AAA ಸಮಿತಿಯಿ ನೀಡಿದ ಶಿಫಾರಸ್ಸುಗಳ ಅನ್ವಯ ವಿಶ್ವವಿದ್ಯಾನಿಲಯವು ಅಗತ್ಯವಿರುವ ಎಲ್ಲಾ ಆಡಳಿತಾತ್ಮಕವಾದ ಹಾಗೂ ಶೈಕ್ಷಣಿಕವಾದ ಸುಧಾರಣೆಗಳಿಗಾಗಿ ಸೂಕ್ತ ಕ್ರಮಗಳನ್ನು ಕೈಗೊಂಡಿದೆ.

GER ಅನ್ನು ಸುಧಾರಿಸುವುದಕ್ಕಾಗಿ ವಿಶ್ವವಿದ್ಯಾನಿಲಯವು 5 ಹೊಸ ಕೋರ್ಸುಗಳನ್ನು ಆರಂಭಿಸಿದೆ. ಜೀವತಂತ್ರಜ್ಞಾನ, ಮನಃಶಾಸ್ತ್ರ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ, ಸ್ನಾತಕೋತ್ತರ ಗಣಕ ವಿಜ್ಞಾನ ಅನ್ವಯಿಕ ವಿಭಾಗ, ಸಾವಯವ ರಸಾಯನಶಾಸ್ತ್ರ ಕೆಲವು ವಿಭಾಗಗಳ ದಾಖಲಾತಿ ಸಂಖ್ಯೆಯನ್ನು ಹೆಚ್ಚಿಸಲಾಗಿದೆ.

RUSA ಯೋಜನೆಯ ಅಡಿಯಲ್ಲಿ ದೊರೆತ ಧನಸಹಾಯವನ್ನು ವಿನಿಯೋಗಿಸಿ ಅಧ್ಯಾಪಕರುಗಳಿಗೆ, ವಿದ್ಯಾರ್ಥಿಗಳಿಗೆ ಹಾಗೂ ಸಂಶೋಧನಾ ವಿದ್ಯಾರ್ಥಿಗಳಿಗೆ ಅನುಕೂಲಕರವಾಗುವಂತಹ ಮೂಲಭೂತ ಸೌಕರ್ಯಗಳನ್ನು, ICT ಸೇವೆಗಳನ್ನು ಒದಗಿಸಿಕೊಡಲಾಗಿದೆ.

ಉನ್ನತ ಶಿಕ್ಷಣದಲ್ಲಿ ಉತ್ಕೃಷ್ಟತೆಯನ್ನು ಪಡೆಯುವ ಸಲುವಾಗಿ ಆಂತರಿಕ ಗುಣಮಟ್ಟ ಖಾತರಿ ಸಮಿತಿಯು (IQAC) ಸಂಶೋಧನಾ ಫಲಿತಾಂಶಗಳ ಕುರಿತಾಗಿ ಸಾಮರ್ಥ್ಯ ಹೆಚ್ಚಿಸುವ ಕಾರ್ಯಗಾರಗಳನ್ನು, ಬದಲಾವಣೆ ನಿರ್ವಹಣಾ ಆವಿಷ್ಕಾರಗಳ ಕುರಿತು ಹಲವಾರು ಕಮ್ಮಟಗಳನ್ನು, ತರಬೇತಿ ಕಾರ್ಯಕ್ರಮಗಳನ್ನು, ನ್ಯಾಕ್ ಪುನರ್ ಪರಿಶೀಲನೆಗೊಳಪಡುವ ಸಂಬಂಧ ಸ್ವಯಂ ಅಧ್ಯಯನ ವರದಿ (SSR) ರೂಪಿಸಲು ಕಾರ್ಯಾಗಾರಗಳನ್ನು ಆಯೋಜಿಸಿದೆ. ಬೋಧಕ ವರ್ಗದಲ್ಲಿ ಸಂಶೋಧನಾ ಮನೋಭಾವನೆಯನ್ನು ಬೆಳೆಸುವ ಸಲುವಾಗಿ 20 ಬೋಧಕ ಸಿಬ್ಬಂದಿಗಳಿಗೆ ಆರಂಭಿಕ ಧನಸಹಾಯವನ್ನು ಒದಗಿಸಲಾಗಿದೆ.

**g. ವಿಶ್ವವಿದ್ಯಾನಿಲಯದ ಸರ್ವತೋಮುಖ ಅಭಿವೃದ್ಧಿಗಾಗಿ ಕೈಗೊಂಡಿರುವ ಕ್ರಮಗಳು:**

- ಸಾಮಾಜಿಕ ಬದ್ಧತೆಯನ್ನು ಹಾಗೂ ಸುಧಾರಣೆಯನ್ನು ತರುವುದಕ್ಕಾಗಿ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ವಿಷಯಗಳ ಕುರಿತು ಅಧ್ಯಾಪಕರುಗಳು,ವಿದ್ಯಾರ್ಥಿಗಳು, ಸಂಶೋಧನಾರ್ಥಿಗಳಲ್ಲಿ ಅರಿವು ಮತ್ತು ಆಸಕ್ತಿಯನ್ನು ಮೂಡಿಸುವುದಕ್ಕಾಗಿ ವಿಶ್ವವಿದ್ಯಾನಿಲಯವು 6 ಅಧ್ಯಯನ ಪೀಠಗಳನ್ನು ಸ್ಥಾಪಿಸಿದೆ.
- ಪರೀಕ್ಷಾ ಪ್ರಕ್ರಿಯೆಯ ನಿರ್ವಹಣೆಗಾಗಿ ವಿಶ್ವವಿದ್ಯಾನಿಲಯವು NIC ಉನ್ನತ ಶಿಕ್ಷಣ ಪರಿಷತ್ತು, ಕರ್ನಾಟಕ ಸರ್ಕಾರ ಅಭಿವೃದ್ಧಿ ಪಡಿಸಿದ EMS ತಂತ್ರಾಂಶವನ್ನು ಅಳವಡಿಸಿದೆ.
- ತುಮಕೂರು ವಿಶ್ವವಿದ್ಯಾನಿಲಯವು ವಿದ್ಯಾರ್ಥಿಗಳಿಗೆ/ ಸಂಶೋಧನಾರ್ಥಿಗಳಿಗೆ ಅನುಕೂಲವಾಗುವಂತೆ ಹಲವಾರು ಪ್ರಯೋಗಾಲಯಗಳನ್ನು ಸ್ಥಾಪಿಸಿದೆ ಹಾಗೂ ನವೀಕರಿಸಿದೆ. RUSA ಮುಖಾಂತರ ಸರ್ಕಾರದ ನಿರ್ದೇಶನದ ಅನುಸಾರ ಹಲವಾರು ಸ್ಮಾರ್ಟ್ ಬೋಧನಾ ಕೊಠಡಿಗಳನ್ನು ರೂಪಿಸಲಾಗಿದೆ.
- ಪ್ರಸ್ತುತ ತುಮಕೂರು ನಗರದಲ್ಲಿರುವ ಸಿಟಿ ಕ್ಯಾಂಪಸ್‌ನಿಂದ 20 ಕಿಮೀ ದೂರದ ಬಿದರಕಟ್ಟೆ ಎಂಬಲ್ಲಿ ವಿಶಾಲವಾದ ನೂತನ ಕಟ್ಟಡಗಳಿಂದ ಸುಸಜ್ಜಿತವಾದ ಕ್ಯಾಂಪಸ್ ನಿರ್ಮಿಸಲಾಗುತ್ತಿದೆ.

- **ಐದು ಹೊಸ ಸ್ನಾತಕೋತ್ತರ ತರಗತಿಗಳನ್ನು ಪ್ರಾರಂಭಿಸಲಾಗಿದೆ.**– ಜೀವತಂತ್ರಜ್ಞಾನ, ಮನಃಸಾಸ್ತ್ರ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ, ಸ್ನಾತಕೋತ್ತರ ಗಣಕವಿಜ್ಞಾನ ಅನ್ವಯಿಕ ವಿಭಾಗ ಹಾಗೂ ಸಾವಯವ ರಸಾಯನಶಾಸ್ತ್ರ, ಹಾರ್ಡವೇರ್ ಮತ್ತು ಜಾಲ ನಿರ್ವಹಣೆಗೆ ಸಂಬಂಧಿಸಿ B.Voc ಕೋರ್ಸ್‌ಗಳನ್ನು UGC ಮುಖಾಂತರ ಕೌಶಲ್ಯ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.
- NIC, ಕರ್ನಾಟಕ ಸರಕಾರವು ಅಭಿವೃದ್ಧಿ ಪಡಿಸಿರುವ ಜ್ಞಾನ ಸಂಗಮ ತಂತ್ರಾಂಶದ ಮುಖಾಂತರ ಪೇಪರ್ ರಹಿತ ಆಡಳಿತಕ್ಕೆ ವಿಶ್ವವಿದ್ಯಾನಿಲಯವು ಮೊದಲು ಮಾಡಿದೆ.
- ಭಾರತ ಸರಕಾರವು ಅಭಿವೃದ್ಧಿ ಪಡಿಸಿದ e-office ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಕ್ರಮಗಳನ್ನು ಕೈಗೊಳ್ಳಲಾಗಿದೆ..
- ಕರ್ನಾಟಕ ಸರಕಾರದ ಇ–ಆಡಳಿತ ಕೋಶದ ಸೂಚನೆಯಂತೆ ವಿಶ್ವವಿದ್ಯಾನಿಲಯವು ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ (HRMS)ನ್ನು ಅಳವಡಿಸಲು ಕಾರ್ಯೋನ್ಮುಖವಾಗಿದೆ.
- ಕರ್ನಾಟಕ ಸರಕಾರವು ಜಾರಿಗೆ ತಂದ ಸೇವಾ ಸಿಂಧು ಇ–ಆಡಳಿತ ವ್ಯವಸ್ಥೆಯನ್ನು ಜಾರಿಗೆ ತಂದ ಮೊದಲ ವಿಶ್ವವಿದ್ಯಾನಿಲಯ–ತುಮಕೂರು ವಿಶ್ವವಿದ್ಯಾನಿಲಯ.
- ವಿಶ್ವವಿದ್ಯಾನಿಲಯದ ಹಳೆ ವಿದ್ಯಾರ್ಥಿಗಳನ್ನು ಆನ್‌ಲೈನ್‌ನಲ್ಲಿ ನೊಂದಾಯಿಸಲು ಹಳೆವಿದ್ಯಾರ್ಥಿಗಳ ಅಂಕಣವನ್ನು ವಿವಿ ಜಾಲತಾಣದಲ್ಲಿ ರೂಪಸಲಾಗಿದೆ.
- ವಿಶ್ವವಿದ್ಯಾನಿಲಯದ ಚರಾಸ್ತಿಗಳ ನಿರ್ವಹಣೆಗಾಗಿ ಆಸ್ತಿ ನಿರ್ವಹಣಾ ತಂತ್ರಾಂಶವನ್ನು ರೂಪಿಸಲಾಗಿದೆ.
- LAN ಮತ್ತು Wi-Fi ಮುಖಾಂತರ ಇ–ಕಲಿಕಾ ವಿಧಾನಕ್ಕೆ ಉತ್ತೇಜನ.
- ಉತ್ತಮ ಕಲಿಕಾ ಮತ್ತು ಆಡಳಿತಕ್ಕೆ ಅನುವಾಗುವ ರೀತಿಯಲ್ಲಿ DoT, GoI ಹಾಗೂ IMADE ತಂತ್ರಾಂಶಗಳನ್ನು ಅಳವಡಿಸಲಾಗಿದೆ.
- ಉನ್ನತ ಶಿಕ್ಷಣಕ್ಕೆ ವಿದ್ಯಾರ್ಥಿಗಳ ದಾಖಲೀಕರಣವನ್ನು ಹೆಚ್ಚಿಸಲು ಸ್ನಾತಕೋತ್ತರ ವಿಭಾಗಗಳಲ್ಲಿ ಹಾಗೂ ಘಟಕ ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲಾಗಿದೆ.
- ವಿದ್ಯುನ್ಮಾನ ಮತ್ತು ಗಣಕೀಕೃತ ಬೋಧನಾ ಸಲಕರಣೆಗಳ ಮುಖಾಂತರ ಆಧುನಿಕ ಬೋಧನಾ ತರಗತಿಗಳನ್ನು ರೂಪಿಸಲಾಗಿದೆ.
- ಉತ್ತಮ ಫಲಿತಾಂಶವನ್ನು ಪಡೆಯಲು ರಾಷ್ಟ್ರಿಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಸಂಶೋಧನಾ ಸಂಸ್ಥೆಗಳೊಂದಿಗೆ ಸಹಭಾಗಿತ್ವ.
- ವಿದ್ಯಾರ್ಥಿಗಳಲ್ಲಿ ನೆಲ, ಜಲ, ವಾತಾವರಣ, ಮಾಲಿನ್ಯ, ಸಾಮಾಜಿಕ–ಆರ್ಥಿಕ ಸಂತುಲನೆಯನ್ನು ಕಾಪಾಡುವ ಮನೋಭಾವನೆ ಸಾಂಸ್ಕೃತಿಕ ಪ್ರಜ್ಞೆ, ಸಬಲೀಕರಣ ಇತ್ಯಾದಿಗಳನ್ನು ವೃದ್ಧಿಸುವ ಸಲುವಾಗಿ ಪೂರಕವಾದ ವಾತಾವರಣವನ್ನು ವಿಶ್ವವಿದ್ಯಾನಿಲಯವು ಕಲ್ಪಿಸಿಕೊಟ್ಟಿದೆ.
- ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರುಗಳಿಗಾಗಿ ಉತ್ತಮ ಗ್ರಂಥಾಲಯ ಸೌಲಭ್ಯವನ್ನು ಒದಗಿಸಿ ಕೊಡಲಾಗಿದೆ.
- ಮಳೆ ನೀರನ್ನು ಇಂಗಿಸುವುದು, ಸಮರ್ಪಕ ತ್ಯಾಜ್ಯ ನಿರ್ವಹಣೆ ಹಾಗೂ ಸೌರಶಕ್ತಿಯ ಮುಖಾಂತರ ವಿದ್ಯುತ್ ಉತ್ಪಾದನಾ ವ್ಯವಸ್ಥೆಗಳನ್ನು ಅಳವಡಿಸಲಾಗಿದೆ.

**h. ಮಹಿಳೆಯರ/ ಪ.ಜಾ/ ಪ.ಪಂ/ ಹಿ.ವ/ ಅಂಗವಿಕಲ ಕಲ್ಯಾಣಕ್ಕಾಗಿ ಕ್ರಮಗಳು ವಿಶೇಷ ಘಟಕ ಯೋಜನೆ/ಎಸ್‌ಸಿಪಿ/ಟಿಎಸ್‌ಪಿ:**

**ವಿಶೇಷ ಘಟಕ ಯೋಜನೆ/ ಗಿರಿಜನ ಉಪಯೋಜನೆ (ಎಸ್‌ಸಿಪಿ/ ಟಿಎಸ್‌ಪಿ)**

**2019–20ನೇ ಸಾಲಿನಲ್ಲಿ ಹಮ್ಮಿಕೊಳ್ಳಲಾದ ಕಾರ್ಯಕ್ರಮಗಳ ವಿವರ**

- **ವಿಶೇಷ ಘಟಕ ಯೋಜನೆ** ಅಡಿಯಲ್ಲಿ 18.11.2019 ರಿಂದ 23.11.2019 ರವರೆಗೆ ಜರುಗಿದ NET, K-SET ಪರೀಕ್ಷಾ ಪೂರ್ವ ತರಬೇತಿಗೆ ಸಂಬಂಧಿಸಿದಂತೆ ಆರು ದಿನದ ಕಾರ್ಯಕ್ರಮ ಆಯೋಜಿಸಲಾಯಿತು.
- ವಿಶೇಷ ಘಟಕ ಯೋಜನೆ ವತಿಯಿಂದ 08 ಪಿ.ಹೆಚ್.ಡಿ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾಹೆ 8000–00 ರೂ ಗಳನ್ನು ಶಿಷ್ಯವೇತನ ನೀಡಲಾಗುತ್ತಿದೆ.

- ವಿಶೇಷ ಘಟಕ ಯೋಜನೆ ವತಿಯಿಂದ ವಿದ್ಯಾರ್ಥಿನಿಲಯದ ಅಡಿಗೆ ಅನಿಲ ಹಾಗು ಭೋಜನಾ ವೆಚ್ಚ ಮತ್ತು ಇತರೆ ಖರ್ಚು ನೀಡಲಾಗಿದೆ.
- **ಗಿರಿಜನ ಉಪಯೋಜನೆ ಅಡಿಯಲ್ಲಿ** 18.11.2019 ರಿಂದ 23.11.2019 ರವರೆಗೆ ಜರುಗಿದ NET, K-SET ಪರೀಕ್ಷಾ ಪೂರ್ವ ತರಬೇತಿಗೆ ಸಂಬಂಧಿಸಿದಂತೆ ಆರು ದಿನದ ಕಾರ್ಯಕ್ರಮ ಆಯೋಜಿಸಲಾಯಿತು.
- ಗಿರಿಜನ ಉಪಯೋಜನೆ ವತಿಯಿಂದ 02 ಪಿ.ಹೆಚ್.ಡಿ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾಹೆ 8000–00 ರೂ ಗಳನ್ನು ಶಿಷ್ಯವೇತನ ನೀಡಲಾಗುತ್ತಿದೆ.
- ಗಿರಿಜನ ಉಪಯೋಜನೆ ವತಿಯಿಂದ ವಿದ್ಯಾರ್ಥಿನಿಲಯದ ಅಡಿಗೆ ಅನಿಲ ಮತ್ತು ಇತರೆ ಖರ್ಚು ನೀಡಲಾಗಿದೆ
- **SC Book Bank**
  ವಿಭಾಗವಾರು 3,00,000 ಲಕ್ಷ ಹಾಗೂ ಕೇಂದ್ರ ಗ್ರಂಥಲಾಯಕ್ಕೆ 55,555–00 ರೂಗಳಂತೆ ಪುಸ್ತಕಗಳನ್ನು ವಿಭಾಗವಾರು ನೀಡಲಾಗಿದೆ.

**ವಿಶೇಷ ಘಟಕ ಯೋಜನೆ 2019–20**

| ಕ್ರ. ಸಂ. | ವೆಚ್ಚದ ವಿವರ | ಮೊತ್ತ |
|---|---|---|
| 01 | ಭೋಜನ ಮತ್ತು ಸಿಲಿಂಡರ್ ಹುಂಡಿಯ ವೆಚ್ಚ | 1509741-00 |
| 02 | ಪಿಎಚ್.ಡಿ. ಶಿಷ್ಯವೇತನ ಮತ್ತು ಡೆಸರ್ಟೇಷನ್ | 626452-00 |
| 03 | ಕಚೇರಿ ಸಿಬ್ಬಂದಿಯ ವೇತನ | 405658-00 |
| 04 | ಖರೀದಿ | 9741648-00 |
| 05 | ಇತರೆ | 607794-00 |
| | ಒಟ್ಟು | 12891293-00 |

**ಗಿರಿಜನ ಉಪಯೋಜನೆ 2019–20**

| ಕ್ರ. ಸಂ. | ವೆಚ್ಚದ ವಿವರ | ಮೊತ್ತ |
|---|---|---|
| 01 | ಭೋಜನ ಮತ್ತು ಸಿಲಿಂಡರ್ ಹುಂಡಿಯ ವೆಚ್ಚ | 1288846-00 |
| 02 | ಪಿಎಚ್.ಡಿ. ಶಿಷ್ಯವೇತನ ಮತ್ತು ಡೆಸರ್ಟೇಷನ್ | 172599-00 |
| 03 | ಶೈಕ್ಷಣಿಕ ಅಭಿವೃದ್ಧಿಯ ವೆಚ್ಚ | 30000-00 |
| 05 | ಇತರೆ | 153-00 |
| | ಒಟ್ಟು | 1491598-00 |

**ಇತರೆ ಹಿಂದುಳಿದ ವರ್ಗಗಳ ಕೋಶ:** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಕೋಶದ ಅಭಿವೃದ್ಧಿಗಾಗಿ 5 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಈ ಸಂಬಂಧ 2019–20ರಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ.

**ಅಲ್ಪಸಂಖ್ಯಾತರು:** ತುಮಕೂರು ವಿಶ್ವವಿದ್ಯಾನಿಲಯವು ಹಣಕಾಸಿನ ನೆರವನ್ನು ಕೋರಿ ಜಿಲ್ಲಾಡಳಿತಕ್ಕೆ ಮನವಿಯನ್ನು ಸಲ್ಲಿಸಿದೆ. ವಿಶ್ವವಿದ್ಯಾನಿಲಯದ ಅಲ್ಪಸಂಖ್ಯಾತ ಘಟಕದ ಸಂಯೋಜಕರು ಅನುದಾನಕ್ಕಾಗಿ ಜಿಲ್ಲಾಡಳಿತಕ್ಕೆ ಮತ್ತೊಮ್ಮೆ ಮನವಿ ಮಾಡಿಕೊಂಡಿರುತ್ತಾರೆ.

**ಮಹಿಳಾ ಅಧ್ಯಯನ ಕೇಂದ್ರ:**

ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು (ಯು.ಜಿ.ಸಿ) ಭಾರತೀಯ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಲಿಂಗ ಸಮಾನತೆಯನ್ನು ಪ್ರೋತ್ಸಾಹಿಸುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದ್ದು, ಮಹಿಳಾ ಸಮಸ್ಯೆಗಳ ಕುರಿತಾದ ಅಧ್ಯಯನ ಮತ್ತು ಸಂಶೋಧನೆಯನ್ನು ಉತ್ತೇಜಿಸುವ ಸಲುವಾಗಿ 1986 ರಿಂದ ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಮಹಿಳಾ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುತ್ತಿದೆ, ತುಮಕೂರು ವಿಶ್ವವಿದ್ಯಾನಿಲಯದ ಮಹಿಳಾ ಅಧ್ಯಯನ ಕೇಂದ್ರವು ಯು.ಜಿ.ಸಿ ಅನುದಾನದೊಂದಿಗೆ 2016–17 ರಿಂದ ಕಾರ್ಯ ನಿರ್ವಹಿಸುತ್ತಿದೆ.

## ಮಹಿಳಾ ಅಧ್ಯಯನ ಕೇಂದ್ರದ ಧ್ಯೇಯೊದ್ದೇಶಗಳು

**ದರ್ಶನ:**

ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಗುಣಮಟ್ಟದ ಶೈಕ್ಷಣಿಕ ಸೇವೆಗಳೊಂದಿಗೆ ಮಹಿಳಾ ಅಧ್ಯಯನ ಮತ್ತು ಸಂಶೋಧನೆಯನ್ನು ಜಾಗತಿಕವಾಗಿ ಬೆಂಬಲಿಸುವುದು ಮತ್ತು ಪ್ರೋತ್ಸಾಹಿಸುವುದು ಹಾಗೂ ಸಮಾಜದಲ್ಲಿ ಲಿಂಗ ಸಮಾನತೆ ಮತ್ತು ಮಹಿಳಾ ಮಾನವ ಹಕ್ಕುಗಳ ಬಗ್ಗೆ ವೈಜ್ಞಾನಿಕ ಅರಿವು ಮೂಡಿಸುವುದರೊಂದಿಗೆ ಅನುಕರಣೆಯನ್ನು ಉತ್ತೇಜಿಸುವುದು.

**ಧ್ಯೇಯ;**

1. ಮಹಿಳಾ ಅಧ್ಯಯನಕ್ಕೆ ಸಂಬಂಧಿಸಿದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.
2. ಮಹಿಳಾ ಅಧ್ಯಯನಕ್ಕೆ ಸಂಬಂಧಿಸಿದ ವಿಚಾರಗಳ ಸಂಶೋಧನೆಗೆ ಒತ್ತು ನೀಡುವುದು.
3. ಮಹಿಳಾ ಅಧ್ಯಯನ ಪ್ರಸ್ತುತೆಯನ್ನು ಚರ್ಚಿಸಲು ಮತ್ತು ಪ್ರಕಟಿಸಲು ಅನುವು ಮಾಡಿಕೊಡುವುದು ಮತ್ತು ವಿಚಾರಧಾರೆಗಳನ್ನು ವಿಸ್ತರಣಾ ಚಟುವಟಿಕೆಗಳ ಮೂಲಕ ಸಮಾಜಕ್ಕೆ ತಲುಪುವಂತೆ ಮಾಡುವುದು.
4. ಮಹಿಳಾ ಸಬಲೀಕರಣ ಲಿಂಗ ತಾರತಮ್ಯ, ಅಸಮಾನತೆ ಇವುಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು.

<u>ಕಾರ್ಯಕ್ರಮಗಳ ವಿವರ</u>

1. ದಿನಾಂಕ 04.09.2019 ಕಾರ್ಯಕ್ರಮದ ಹೆಸರು: National Education Policy 2019: A Feminist Perspective ಮುಖ್ಯ ಅತಿಥಿಗಳು: ಡಾ. ಆರ್. ಇಂದಿರಾಸಮಾಜಶಾಸ್ತ್ರ ಪ್ರಾಧ್ಯಾಪಕರು(ನಿ) ಹಾಗೂ ಅಧ್ಯಕ್ಷರು ರಾಷ್ಟ್ರೀಯ ಸಮಾಜಶಾಸ್ತ್ರ ಸಂಘ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅಧ್ಯಕ್ಷರು ಪ್ರೊ. ವೈ.ಎಸ್. ಸಿದ್ದೇಗೌಡ ತುಮಕೂರು ವಿಶ್ವವಿದ್ಯಾನಿಲಯ ತುಮಕೂರು ಮತ್ತು ಸಂಯೋಜಕರು ಡಾ. ಜ್ಯೋತಿ ಮಹಿಳಾ ಅಧ್ಯಯನ ಕೇಂದ್ರ ತುಮಕೂರು ವಿಶ್ವವಿದ್ಯಾನಿಲಯ ತುಮಕೂರು ಹಾಜರಿದ್ದರು.

2. **ದಿನಾಂಕ:26.09.2019"ಉದ್ಯೋಗಸ್ಥ ಮಹಿಳೆಯರ ತಲ್ಲಣಗಳು: ಚಿಂತನೆ ಮತ್ತು ಪರಿಹಾರ" ಎನ್ನುವ ವಿಷಯದ ಕುರಿತು ವಿಚಾರಗೋಷ್ಠಿ ಮತ್ತು ಸಂವಾದ** ಎನ್ನುವ ವಿಷಯದ ಕುರಿತು ವಿಚಾರಗೋಷ್ಠಿ ಮತ್ತು ಸಂವಾದವನ್ನು ವಿಶ್ವವಿದ್ಯಾನಿಲಯದ ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ಆಯೋಜಿಸಲು ಮತ್ತು ಸಂಪನ್ಮೂಲ ವ್ಯಕ್ತಿಗಳಾಗಿ ಮಹಿಳಾ ಅಧ್ಯಯನ ಕೇಂದ್ರ ನಾಡಿನ ಹೆಸರಾಂತ ಮಹಿಳಾ ಚಿಂತಕರು, ಬರಹಗಾರರು ಮತ್ತು ಹೋರಾಟಗಾರರಾದ ಶ್ರೀಮತಿ ಅಂಜಲಿ ರಾಮಣ್ಣ , ಖ್ಯಾತ ವಕೀಲರು ಮತ್ತು ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರು , ಬೆಂಗಳೂರು ಹಾಗೂ ನಾಡಿನ ಖ್ಯಾತ ಲೇಖಕಿ ಇವರುಗಳು ಹಾಜರಿದ್ದರು.

3. **ದಿನಾಂಕ: 03.12.2019 ರಂದು** ತುಮಕೂರು ವಿಶ್ವವಿದ್ಯಾನಿಲಯ ಮಹಿಳಾ ಅಧ್ಯಯನ ಕೇಂದ್ರವು, ವಿಶ್ವವಿದ್ಯಾನಿಲಯ ಕಲಾ ಕಾಲೇಜಿನ ಸಹಯೋಗದೊಂದಿಗೆ ಪ್ರಸ್ತುತ ,"ಸಾವಿತ್ರಿಬಾಯಿ ಪುಲೆ ನೆನಪು" ಎನ್ನುವ ಕಾರ್ಯಕ್ರಮ ತುಮಕೂರು ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು ಮತ್ತು ಸಂಪನ್ಮೂಲ ವ್ಯಕ್ತಿಯಾಗಿ ಶ್ರೀಮತಿ ಮಲ್ಲಿಕಾ ಬಸವರಾಜು, ಲೇಖಕಿ ,ಮಹಿಳಾ ಪರ ಚಿಂತಕರು, ಇವರುಗಳು ಹಾಜರಿದ್ದರು.

4. **ದಿನಾಂಕ: 17.1.2020 ರಂದು ಮಧ್ಯಾಹ್ನ 3.00 ಘಂಟೆ** ," ಮಾನಸಿಕ ಅಸ್ವಸ್ಥತೆಯ ವೈವಿಧ್ಯ ಆಯಾಮಗಳು ಮತ್ತು ಸಮಾಜದಲ್ಲಿ ಅದಕ್ಕಂಟಿದ ಪೂರ್ವಗ್ರಹಗಳ ಬಗ್ಗೆ ತಮ್ಮ ಏಕವ್ಯಕ್ತಿ ಪ್ರದರ್ಶನ" ಎನ್ನುವ ಕಾರ್ಯಕ್ರಮ ತುಮಕೂರು ವಿಶ್ವವಿದ್ಯಾನಿಲಯದ ಸರ್.ಎಂ ವಿಶ್ವೇಶರಯ್ಯ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು ಮತ್ತು ಸಂಪನ್ಮೂಲ ವ್ಯಕ್ತಿಯಾಗಿ ಡಾ.ಆರ್ ಪೂರ್ಣಿಮಾ ನಿವೃತ್ತ ಆಂಗ್ಲ ಭಾಷಾ ಪ್ರಾಧ್ಯಪಕರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇವರುಗಳು ಹಾಜರಿದ್ದರು.

5. ದಿನಾಂಕ:08.03.2020 ರಂದು 'ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು' ಮಹಿಳಾ ಮತ್ತು ಮಕ್ಕಳ ಇಲಾಖೆ ತುಮಕೂರು ಇವರ ಸಹಯೋಗದೊಂದಿಗೆ, ವಿಶ್ವವಿದ್ಯಾನಿಲಯದ ಸರ್. ಎಂ. ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ಆಯೋಜಿಸಲಾಯಿತು, ಈ ಕಾರ್ಯಕ್ರಮದಲ್ಲಿ ಖ್ಯಾತ ಪರಿಸರ ಪ್ರೇಮಿ ಪದ್ಮ ಶ್ರೀ ವಿಜೇತೆ ಶ್ರೀಮತಿ ತುಳಸಿಗೌಡ ಮತ್ತು ಶಿಕ್ಷಣ ಪ್ರೇಮಿ ಶ್ರೀ ಹರೆಕಳ ಹಾಜಬ್ಬ ರವರನ್ನು ಸನ್ಮಾನಿಸಲಾಯಿತು ಮತ್ತು ಸಂಪನ್ಮೂಲ ವ್ಯಕ್ತಿಯಾಗಿ ಪ್ರೊ.ವಸಂತಮ್ಮ ಭಾಗವಹಿಸಿದ್ದರು .

**ವಿಕಲಚೇತನರು:**

ಭಾರತದ ಸರ್ವೋಚ್ಚ ನ್ಯಾಯಲಯ ಹಾಗೂ 2016ರ ವಿಕಲಚೇತನರ ಕಾಯಿದೆಯ ಅನುಸಾರ ತುಮಕೂರು ವಿಶ್ವವಿದ್ಯಾನಿಲಯವು ದಾಖಲಾತಿಯಲ್ಲಿ ಎಲ್ಲಾ ವಿಭಾಗಗಳಲ್ಲೂ ಶೇ. 5% ಮಿಸಲಾತಿಯನ್ನು ನೀಡುತ್ತಿದೆ. ಇದರೊಂದಿಗೆ ದಿವ್ಯಾಂಗನರಿಗಾಗಿ ವಿಶೇಷ ಸೌಲಭ್ಯಗಳನ್ನು ಏರ್ಪಡಿಸಿದೆ. ಇದರೊಂದಿಗೆ ಬೋಧನಾ ಸಲಕರಣೆಗಳಿಗೂ ಅಗತ್ಯವಾದ ಸಹಾಯವನ್ನು ನೀಡುತ್ತಿದೆ.

**i. ಎಲ್ಲಾ ರೀತಿಯಲ್ಲಿ ಕನ್ನಡ ಬಳಕೆಗೆ ಉತ್ತೇಜನ:**
ರಾಜ್ಯ ಸರ್ಕಾರದ ನಿರ್ದೇಶನದ ಮೇರೆಗೆ ವಿಶ್ವವಿದ್ಯಾನಿಲಯ ಆಡಳಿತ ಹಾಗೂ ಸಂವಹನಕ್ಕಾಗಿ ಕನ್ನಡ ಬಳಕೆ ಮಾಡುತ್ತಿದೆ.

**j. ಖಾಸಗಿ ಸಹಭಾಗಿತ್ವ, ಹಳೆ ವಿದ್ಯಾಥಿ ಸಂಘ, ಇತ್ಯಾದಿಗಳ ಮುಖಾಂತರ ನಿಧಿ ಸಂಗ್ರಹಿಸುವ ಸಂಬಂಧ ಕಾರ್ಯಗಳು:**

- ತುಮಕೂರು ವಿಶ್ವವಿದ್ಯಾನಿಲಯ ಹಾಗೂ ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಸಂಸ್ಥೆಯ ನಡುವೆ ಕೌಶಲ್ಯ ನಗರ ಯೋಜನೆಯ ಒಂಡಂಬಡಿಕೆಯು ಏರ್ಪಟ್ಟಿದ್ದು ಅದರಂತೆ ಹಲವಾರು ಕೌಶಲ್ಯಾಭಿವೃದ್ಧಿ ಯೋಜನೆಗಳನ್ನು ಪ್ರಾರಂಭಿಸಲಾಗಿದೆ. 3 ವರ್ಷಗಳ ಅವಧಿಗೆ 441 ಲಕ್ಷ ರೂಪಾಯಿಗಳ ಡಿ.ಪಿ.ಆರ್ ನ್ನು ಸಲ್ಲಿಸಲಾಗಿದೆ.
- ತುಮಕೂರು ಹೆಚ್‌ಆರ್ ಫೋರಂನ ಅಧ್ಯಕ್ಷರ ಉತ್ತೇಜನದೊಂದಿಗೆ ಸಿ.ಎಸ್.ಆರ್ ನಿಧಿಯನ್ನು ವಿಶ್ವವಿದ್ಯಾನಿಲಯಕ್ಕೆ ಕೊಡಮಾಡಿಸುವುದು. ಇತರೆ ಉದ್ಯೋಗಿಗಳ ಸಂಘವು ನಿಧಿ ಸಂಗ್ರಹಿಸುವ ಕುರಿತು ವಿಶ್ವವಿದ್ಯಾನಿಲಯಕ್ಕೆ ಧನಾತ್ಮಕವಾಗಿ ಸ್ಪಂದಿಸಿದೆ.
- ಶೈಕ್ಷಣಿಕ ಮತ್ತು ಆಡಳಿತ ಸೌಧ ನಿರ್ಮಾಣಕ್ಕಾಗಿ ಓಎನ್‌ಜಿಸಿ ಸಂಸ್ಥೆಗೆ ಧನ ಸಹಾಯ ಕೋರಿ ಮನವಿ ಸಲ್ಲಿಸಲಾಗಿದೆ,
- 92 ಸಂಯೋಜಿತ ಕಾಲೇಜುಗಳ ಮುಖಾಂತರ ಹಳೆ ವಿದ್ಯಾರ್ಥಿಗಳನ್ನು ಸಂಪರ್ಕಿಸಿ ಅವರ ಮುಖಾಂತರ ಧನ ಸಹಾಯ ಸಂಗ್ರಹಿಸಲು ಅನುಕೂಲವಾಗುವಂತೆ ಹಳೆ ವಿದ್ಯಾರ್ಥಿಗಳ ಸಂಘವನ್ನು ಸ್ಥಾಪಿಸಿ ನೊಂದಣಿ ಮಾಡಿಕೊಳ್ಳಲಾಗಿದೆ.
- ವಿವಿಧ ಸರ್ಕಾರೇತರ ಸಂಸ್ಥೆಗಳನ್ನು ಸಂಪರ್ಕಿಸಿ ಅವುಗಳೊಂದಿಗೆ ಸಹಭಾಗಿತ್ವದ ಮುಖಾಂತರ ನಿಧಿ ಸಂಗ್ರಹಿಸಲು ವಿಶ್ವವಿದ್ಯಾನಿಲಯದ ಸಿಬ್ಬಂದಿವರ್ಗ ಶ್ರಮಿಸುತ್ತಾ ಬರುತ್ತಿದೆ.

**k. ಮುಂದಿನ ಸೆಮಿಸ್ಟರ್‌ನ ತರಗತಿಗಳು ಪ್ರಾರಂಭವಾಗುವುದಕ್ಕೂ ಮುಂಚಿತವಾಗಿ ಫಲಿತಾಂಶ ಘೋಷಣೆ ಮಾಡಲು ಕೈಗೊಂಡ ಕ್ರಮಗಳು:**
ವಿಶ್ವವಿದ್ಯಾನಿಲಯದ ಪರೀಕ್ಷಾಂಗವು ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳ ಫಲಿತಾಂಶವನ್ನು ತ್ವರಿತವಾಗಿ ಬಿಡುಗಡೆ ಮಾಡಲು ಈ ಕೆಳಗಿನ ಕ್ರಮಗಳನ್ನು ಕೈಗೊಂಡಿದೆ:

- ಪರೀಕ್ಷೆ ಪ್ರಾರಂಭವಾದ ದಿನದಿಂದಲೇ ಉತ್ತರ ಪತ್ರಿಕೆಗಳ ಕೋಡಿಂಗ್ ಕಾರ್ಯ ಆರಂಭ.
- ಮೌಲ್ಯ ಮಾಪಕರಿಂದಲೇ ಆಯಾ ಪತ್ರಿಕೆಗಳ ಅಂಕಪಟ್ಟಿಗಳನ್ನು ಪರಾಮರ್ಶೆಗೆ ಅಂದೇ ಒಳಪಡಿಸುವುದು.
- ಅಂಕಗಳನ್ನು ಭರ್ತಿಮಾಡಿದ ನಂತರ ಕೂಡಲೇ ಉತ್ತರ ಪತ್ರಿಕೆಗಳ ಡಿ–ಕೋಡಿಂಗ್ ಕಾರ್ಯ.
- NIC ತಂತ್ರಾಂಶದ ಮುಖಾಂತರ ಮೌಲ್ಯಮಾಪನ ಮುಗಿದ ಒಂದೆರಡು ದಿನಗಳಲ್ಲೆ ಫಲಿತಾಂಶ ಘೋಷಣೆಗೆ ಕ್ರಮ.

**l. ಶೈಕ್ಷಣಿಕ ಮಂಡಲಿಯಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ: ಇಲ್ಲ**

## 3. ದರ್ಶನ ಮತ್ತು ಧ್ಯೇಯ:

**ದರ್ಶನ:** ಜಾಗತಿಕ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಬಲ್ಲ ಶ್ರೇಷ್ಠ ಮಾನವ ಸಂಪನ್ಮೂಲವನ್ನು ರೂಪಿಸುವುದು.

**ಧ್ಯೇಯ:**

- ಮಾರ್ಗದರ್ಶಕವಾಗಿರುವ ದರ್ಶನವಾಕ್ಯವನ್ನು ಕಾರ್ಯರೂಪಕ್ಕಿಳಿಸಲು ಪ್ರಾಮಾಣಿಕ ವೃತ್ತಿಪರತೆ ಹೊಂದಿರುವ ಶಿಕ್ಷಕ ವರ್ಗದ ಮುಖಾಂತರ ಕಾರ್ಯೋನ್ಮುಖವಾಗುವುದು.
- ಸಮಾಜದ ಸರ್ವತೋಮುಖ ಏಳಿಗೆಗಾಗಿ ಉತ್ತಮ ಗುಣಮಟ್ಟದ ಸಂಶೋಧನೆಯನ್ನು ನಡೆಸುವುದು.

- ಶೈಕ್ಷಣಿಕ ಜ್ಞಾನ ಮತ್ತು ವೃತ್ತಿಕೌಶಲ್ಯಗಳ ನಡುವಿನ ಅಂತರವನ್ನು ಕಡಿಮೆ ಮಾಡಲು ಶ್ರಮಿಸವುದು.
- ಉತ್ತಮ ಸಾಧನೆಗಾಗಿ ಅಗತ್ಯವಿರುವ ಶೈಕ್ಷಣಿಕ ಮತ್ತು ಭೌತಿಕ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವುದು.
- ಸಮಾಜದ ಅವಕಾಶವಂಚಿತ ವರ್ಗಗಳನ್ನು ತಲುಪುವಂತಹ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಶೈಕ್ಷಣಿಕ ಗುಣಮಟ್ಟದ ಏರಿಕೆಗಾಗಿ ಹಾಗೂ ಜ್ಞಾನ ಪ್ರಸರಣಕ್ಕಾಗಿ ಸಾಂಸ್ಥಿತ ಜಾಲವನ್ನು ಏರ್ಪಡಿಸುವುದು.
- ಪಾರದರ್ಶಕತೆ, ಪ್ರಾಮಾಣಿಕತೆ ಮತ್ತು ಬದ್ಧತೆಗಳ ಮುಖಾಂತರ ವಿಶ್ವಾಸಾರ್ಹ ಆಡಳಿತ ವ್ಯವಸ್ಥೆಯನ್ನು ಸಾಂಸ್ಥಿಕರಿಸಲು ಪ್ರಯತ್ನಿಸುವುದು.
- ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸಲು ವಿದ್ಯಾರ್ಥಿ ಸ್ನೇಹಿ ಯೋಜನೆಗಳನ್ನು ಸಾಕಷ್ಟು ಉತ್ತೇಜಿಸುವುದು.
- ಉದ್ಯೋಗ ಮಾರ್ಗದರ್ಶಿ, ಜೀವನ ಕೌಶಲ್ಯ, ವೊಕೇಷನ್ ಕೋರ್ಸುಗಳನ್ನು ಅಭಿವೃದ್ಧಿ ಪಡಿಸುವುದು.
- ವಿಶ್ವವಿದ್ಯಾನಿಲಯವು ಸಮರ್ಪಕವಾಗಿ ಕಾರ್ಯ ನಿರ್ವಹಿಸಲು ಬೇಕಾಗುವ ಎಲ್ಲಾ ಅಗತ್ಯದ ಕ್ರಮಗಳನ್ನು ಕೂಗೊಳ್ಳುವುದು.

**4. ಆಡಳಿತ ಮತ್ತು ಸಂಘಟಿಸುವಿಕೆ:**

**a. ಕ್ಯಾಂಪಸ್‌ನ ಒಳಗೆ ಮತ್ತು ಹೊರಗೆ ಆಡಳಿತ ವ್ಯವಸ್ಥೆ ನಿರ್ವಹಿಸಲು ಕೈಗೊಂಡ ಕ್ರಮಗಳು.**

ತುಮಕೂರು ವಿಶ್ವವಿದ್ಯಾನಿಲಯದ ಆಡಳಿತಾಂಗವು ಕ್ಯಾಂಪಸ್ ಒಳಗಡೆಯೇ ಸ್ಥಾಪಿತವಾಗಿರುವುದರಿಂದ, ಎಲ್ಲಾ ಪ್ರಕ್ರಿಯೆಗಳು ಹಾಗೂ ವಿಧಾನಗಳು ಸಕಾರಾತ್ಮಕವಾಗಿ ಹಾಗೂ ನಿರಂತರವಾಗಿ ಸಾಗುತ್ತಿವೆ.

**b. ಖಾಲಿ ಇರುವ ಆಡಳಿತಾತ್ಮಕ ತಾಂತ್ರಿಕ ಹಾಗೂ ಸಹಾಯಕ ಸಿಬ್ಬಂದಿಗಳ ಹುದ್ದೆಗಳನ್ನು ಭರ್ತಿ ಮಾಡುವ ಕ್ರಮಗಳನ್ನು ಕುರಿತು.**

ಪ್ರಸ್ತುತ ವಿಶ್ವವಿದ್ಯಾನಿಲಯದಲ್ಲಿ 166 ಹುದ್ದೆಗಳು ಖಾಲಿಯಿದ್ದು, ಈ ಹುದ್ದೆಗಳು ಬಡ್ತಿ ಹಾಗೂ 371 (J) ರ ಮೀಸಲಾತಿ ಅಡಿಯಲ್ಲಿ ಬರುವ ಹುದ್ದೆಗಳಾಗಿವೆ. ಖಾಲಿಯಿರುವ ಹುದ್ದೆಗಳೊಂದಿಗೆ 62 ತಾತ್ಕಾಲಿಕ ನೌಕರರು ಸಂಚಿತವೇತನದಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರದ ನಿರ್ದೇಶನದ ಅನುಸಾರವಾಗಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ವಿಶ್ವವಿದ್ಯಾನಿಲಯವು ಸೂಕ್ತಕ್ರಮವನ್ನು ತೆಗೆದುಕೊಂಡಿದೆ.

**c. ವಿಶ್ವವಿದ್ಯಾನಿಲಯ ಆವರಣದ ಭದ್ರತೆ ಮುಖ್ಯ ಹಾಗೂ ಇತರೆ ಆವರಣಗಳು:**

ವಿಶ್ವವಿದ್ಯಾನಿಲಯದ ಆವರಣದ ಭದ್ರತೆಯನ್ನು ಗುತ್ತಿಗೆಯ ಆಧಾರದ ಮೇರೆಗೆ ನಿಯೋಜಿಸಲ್ಪಟ್ಟಂತಹ ಸಂಸ್ಥೆಗಳ ನೌಕರರು ನಿರ್ವಹಿಸುತ್ತಿದ್ದು, ಗುತ್ತಿಗೆ ಸಂಸ್ಥೆಯನ್ನು ಸದರಿ ಸಂಸ್ಥೆಯು ಸಲ್ಲಿಸಿದ ದರಪಟ್ಟಿಯ ಆಧಾರದ ಮೇಲೆ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಪ್ರಸುತ್ತ 2 ಮೇಲ್ವಿಚಾರಕರು ಹಾಗೂ ಮೂವತ್ತು ಜನ ಗಾರ್ಡ್‌ಗಳು 10 ಕಡೆಗಳಲ್ಲಿ ಕಾರ್ಯನಿರ್ವಯಿಸುತ್ತಿದ್ದಾರೆ ಮತ್ತು ಅವರ ವೇತನವನ್ನು ಕಾರ್ಮಿಕ ಇಲಾಖೆಯು ನಿಗದಿ ಪಡಿಸಿದಂತೆ ಪಾವತಿಮಾಡಲಾಗುತ್ತಿದೆ. 28 ಸಿಸಿಟಿವಿಗಳನ್ನು ಭದ್ರತಾ ದೃಷ್ಟಿಯಿಂದ ವಿಶ್ವವಿದ್ಯಾನಿಲಯದ ಆವರಣದಲ್ಲಿ ಸ್ಥಾಪಿಸಲಾಗಿದೆ.

**d. ಭೋಧಕ ಹಾಗೂ ಭೋಧಕೇತರ ಸಿಬ್ಬಂದಿಯ ಕ್ಷೇಮಾಭಿವೃದ್ಧಿ ಯೋಜನೆಗಳು.**

ಮಾನವ ಸಂಪನ್ಮೂಲ ಅಭಿವೃದ್ಧಿ ವಿಭಾಗವು ವಿಶ್ವವಿದ್ಯಾನಿಲಯದ ಅವಿಭಾಜ್ಯ ಅಂಗವಾಗಿದ್ದು, ಯುಜಿಸಿ ಹಾಗೂ ಕರ್ನಾಟಕ ಸರ್ಕಾರವು ನಿಗದಿ ಪಡಿಸಿದ ನಿಯಮಾನುಸಾರವಾಗಿ ಭೋಧಕ ಹಾಗೂ ಭೋಧಕೇತರ ಹುದ್ದೆಗಳಿಗೆ ನೇಮಕಾತಿಯನ್ನು ವಿಭಾಗವು ಮಾಡುತ್ತಾ ಬಂದಿದೆ. ನೌಕರರ ನೇಮಕಾತಿ ಹಾಗೂ ಬಡ್ತಿಗಳು ಚಾಲ್ತಿಯಲ್ಲಿರುವ ರೋಸ್ಟರ್ ಸಿಸ್ಟಮ್‌ಗೆ ಅನುಗುಣವಾಗಿ ನಡೆಯುತ್ತಾ ಬಂದಿದೆ. ಯುಜಿಸಿ ಹಾಗೂ ಕರ್ನಾಟಕ ಸರ್ಕಾರದ ನಿಯಮಾನುಸಾರವಾಗಿ ವೇತನ ನಿಗದಿ, ವಾರ್ಷಿಕ ಬಡ್ತಿ, ವೈದ್ಯಕೀಯ ವೆಚ್ಚದ ಮರುಪಾವತಿ, ಸೇವಾ ದಿನವಹಿಗಳ ನಿರ್ವಹಣೆ, ನೇಮಕಾತಿ ಮೊದಲಾದ ವಿಷಯಗಳಿಗೆ ಸಂಬಂಧಿಸಿದ ನಿಯಮಗಳ ರಚನೆಯನ್ನು ಮಾಡಲಾಗುತ್ತಿದೆ.

ವಿಶ್ವವಿದ್ಯಾನಿಲಯವು ನಿಗದಿ ಪಡಿಸಿರುವ ಬಜೆಟ್‌ನ ಅನುಸಾರವಾಗಿ ಅಧ್ಯಾಪಕರು ತಮ್ಮ ಸಂಶೋಧನಾ ಪ್ರಬಂಧಗಳನ್ನು ರಾಷ್ಟ್ರೀಯ ಅಂತರರಾಷ್ಟ್ರೀಯ ವಿಚಾರಸಂಕಿರಣ, ಕಾರ್ಯಾಗಾರ ಹಾಗೂ ಸಮ್ಮೇಳನಗಳಲ್ಲಿ ಮಂಡಿಸುವ ಸಂಬಂಧ ಹಣಕಾಸು ಸಹಾಯವನ್ನು ವಿಶ್ವವಿದ್ಯಾನಿಲಯವು ಒದಗಿಸುತ್ತಾ ಬಂದಿದೆ. ತನ್ನ ಸಿಬ್ಬಂದಿಯ ಅನುಕೂಲಕ್ಕಾಗಿ ವೈದ್ಯಕೀಯ ಕೇಂದ್ರ, ಅಂಚೆ ಕಛೇರಿ ಮೊದಲಾದ ವ್ಯವಸ್ಥೆಯನ್ನು ಸಹಾ ಕಲ್ಪಿಸಿದೆ.

**5. ಯುಜಿಸಿ 2010 ನಿಯಮಾನುಸಾರ ಆತಂರಿಕ ಗುಣಮಟ್ಟ ಖಾತ್ರಿ ಕೋಶ (IQAC)ದ ರಚನೆ ಹಾಗೂ ಅದರ ಕಾರ್ಯನಿರ್ವಹಣೆ**

UGC / NAAC ನ ಮಾರ್ಗಸೂಚಿಗಳ ಅನುಸಾರವಾಗಿ ಉಪಕುಲಪತಿಗಳ ಅಧ್ಯಕ್ಷತೆಯಲ್ಲಿ ಆಂತರಿಕ ಗುಣಮಟ್ಟ ಖಾತ್ರಿ ಕೋಶವನ್ನು ರಚಿಸಲಾಗಿದೆ. ಸದರಿ ಕೋಶವು ದಸ್ತಾವೇಜುಗಳನ್ನು ದಾಖಲಿಸುವ ಕಾರ್ಯದೊಂದಿಗೆ ಯು.ಜಿ.ಸಿ ಯು ನಿಗದಿಪಡಿಸಿರುವ API ಮಾನದಂಡಗಳ ಅಭಿವೃದ್ಧಿಗೊಳ್ಳಲು ಸಹಾಯಕವಾಗಿ ಕಾರ್ಯನಿರ್ವಹಿಸುತ್ತಿದೆ. ಬೋಧಕರನ್ನು ಕುರಿತು ವಿದ್ಯಾರ್ಥಿಗಳ ಪ್ರತಿಕ್ರಿಯೆಗಳನ್ನು ದಾಖಲಿಸುವಂತಹ ಕಾರ್ಯವನ್ನು ನ್ಯಾಕ್‌ನ ನಿಯಮಾನುಸಾರವಾಗಿ ಮಾಡುತ್ತಿದೆ. ಶೈಕ್ಷಣಿಕ ಹಾಗೂ ಆಢಳಿತಾತ್ಮಕ ಕಾರ್ಯ ಕ್ಷಮತೆಯನ್ನು ಹೆಚ್ಚಿಸುವ ಮುಖ್ಯ ಉದ್ದೇಶವನ್ನು ಹೊಂದಿರುವ (IQAC) ಈ ದಿಶೆಯಲ್ಲಿ ಅನೇಕ ರಚನಾತ್ಮಕವಾದಂತಹ ಮತ್ತು ವ್ಯವಸ್ಥಿತವಾದಂತಹ ಕಾರ್ಯಕ್ರಮಗಳನ್ನು ರೂಪಿಸಿದೆ.

**6. ಕಾರ್ಯಕ್ರಮಗಳ ಮೇಲ್ವಿಚಾರಣೆ ಹಾಗೂ ಮೌಲ್ಯಮಾಪನ ಮಂಡಳಿಯ ರಚನೆ ಮತ್ತು ಕಾರ್ಯನಿರ್ವಹಣೆ.**
ಕಾರ್ಯಕ್ರಮಗಳ ಮೇಲ್ವಿಚಾರಣಾ ಹಾಗೂ ಮೌಲ್ಯಮಾಪನ ಮಂಡಳಿಯನ್ನು ಕರ್ನಾಟಕ ವಿಶ್ವ ವಿದ್ಯಾನಿಲಯಗಳ ಕಾಯ್ದೆಯ ಅನ್ವಯ ರಚಿಸಲಾಗಿದ್ದು, ಸದರಿ ಮಂಡಳಿಯ ವಿಶ್ವವಿದ್ಯಾನಿಲಯದ ಅಗತ್ಯತೆಗೆ ಅನುಗುಣವಾಗಿ ಕಾರ್ಯನಿರ್ವಹಿಸುತ್ತಿದೆ

**7. ಕುಲಾಧಿಪತಿಗಳ ಹಾಗೂ ಸರ್ಕಾರದ ನಿರ್ದೇಶನಗಳ ಅನುಸರಣೆ:**
ಘನತೆವೆತ್ತ ಕುಲಾಧಿಪತಿಗಳ ಹಾಗೂ ಕರ್ನಾಟಕದ ರಾಜ್ಯಪಾಲರ ಮತ್ತು ಸರ್ಕಾರದ ನಿರ್ದೇಶನಗಳಿಗೆ ಅನುಸಾರವಾಗಿ ಕಾರ್ಯನಿರ್ವಹಿಸುವ ಎಲ್ಲಾ ಕ್ರಮಗಳನ್ನು ವಿಶ್ವವಿದ್ಯಾನಿಲಯವು ತೆಗೆದುಕೊಂಡಿದ್ದು, ಘನತೆವೆತ್ತ ರಾಜ್ಯಪಾಲರು ಹಾಗೂ ಕುಲಾಧಿಪತಿಗಳು ಮತ್ತು ಕರ್ನಾಟಕ ಸರ್ಕಾರವು ಕಾಲಕಾಲಕ್ಕೆ ಅಪೇಕ್ಷಿಸುವ ಎಲ್ಲಾ ಮಾಹಿತಿಯನ್ನು ಒದಗಿಸುವಲ್ಲಿ ವಿಶ್ವವಿದ್ಯಾನಿಲಯದ ಆಡಳಿತ ವರ್ಗವು ಕಾರ್ಯತತ್ಪರವಾಗಿದೆ.

**8. ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ ಸಲಹೆಗೆ ಅನುಸಾರವಾಗಿ ಸರ್ಕಾರವು ಹೊರಡಿಸುವ ಅಧಿಸೂಚನೆಗಳ ಅನುಪಾಲನೆ.**
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ ಸಲಹೆ ಮತ್ತು ಶಿಫಾರಸ್ಸಿಗೆ ಅನುಗುಣವಾಗಿ ಕರ್ನಾಟಕ ರಾಜ್ಯ ಸರ್ಕಾರವು ಹೊರಡಿಸುವ ಅಧಿಸೂಚನೆಗಳ ಅನುಪಾಲನೆಗೆ ಎಲ್ಲಾ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಮತ್ತು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಮತ್ತು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಪೇಕ್ಷಿಸುವಂತಹ ಮಾಹಿತಿಯನ್ನು ಒದಗಿಸುವಲ್ಲಿ ವಿಶ್ವವಿದ್ಯಾನಿಲಯವು ಕಾರ್ಯತತ್ಪರವಾಗಿದೆ.

**9. ಸಾಮಾಜಿಕ ಹೊರಗಿಡುವಿಕೆ ಮತ್ತು ಸೇರ್ಪಡೆ ನೀತಿಗಳ ಕೇಂದ್ರ ಮತ್ತು ಅದರ ಕಾರ್ಯ ನಿರ್ವಹಣಾ ವರದಿ– ಇಲ್ಲ**

**10. ಸಂಸ್ಥೆಯ ಸಾಮಾಜಿಕ ಜವಾಬ್ದಾರಿಯ ನಿರ್ವಹಣೆಯಲ್ಲಿ ಗಾಂಧಿ ಅಧ್ಯಯನ ಕೇಂದ್ರ ಹಾಗೂ ಡಾ. ಬಿ ಆರ್ ಅಂಬೇಡ್ಕರ್ ಅಧ್ಯಯನ ಕೇಂದ್ರಗಳ ಬಳಕೆ:**
ವಿಶ್ವವಿದ್ಯಾನಿಲಯವು ಗಾಂಧಿ ಅಧ್ಯಯನ ಕೇಂದ್ರವನ್ನು ಸ್ಥಾಪಿಸಬೇಕಾಗಿದೆ. ಡಾ. ಬಿ ಆರ್ ಅಂಬೇಡ್ಕರ್ ಅಧ್ಯಯನ ಕೇಂದ್ರವು ರಾಷ್ಟ್ರೀಯ ಸೇವಾ ಯೋಜನೆ (NSS) ಸಹಯೋಗದೊಂದಿಗೆ ಸಾಮಾಜಿಕ ಹೊಣೆಗಾರಿಕೆಯನ್ನು ನಿರ್ವಹಿಸಿರುವ ಕಾರ್ಯನಿರ್ವಹಣಾ ವರದಿ ಈ ಕೆಳಕಂಡಂತಿದೆ :

**ಡಾ. ಬಿ ಆರ್ ಅಂಬೇಡ್ಕರ್ ಅಧ್ಯಯನ ಕೇಂದ್ರದ ಕಾರ್ಯನಿರ್ವಹಣಾ ವರದಿ:**

ಮಹಾಮಾನವತಾವಾದಿ ಭಾರತ ಕಂಡ ಅದ್ವೀತಿಯ ನಾಯಕ, ಅಪ್ರತಿಮ ಹೋರಾಟಗಾರ, ಸಾಮಾಜಿಕ ಪರಿವರ್ತನೆಯ ಹರಿಕಾರ ಹಾಗೂ ನವ ಭಾರತ ಕಂಡ ಅಗ್ರಗಣ್ಯ ನಾಯಕ, ಭಾರತರತ್ನ ಸಂವಿಧಾನ ಶಿಲ್ಪಿಯಾದ ಡಾ.ಬಿ.ಆರ್ ಅಂಬೇಡ್ಕರ್‌ರವರ ತತ್ವಾದರ್ಶಗಳನ್ನು ಹಾಗು ಅವರ ಸಮಸಮಾನತೆಯ ಸಮಾಜ ನಿರ್ಮಾಣ ಮಾಡುವ ದೂರದೃಷ್ಟಿಯಂತೆ ದಲಿತ, ಹಿಂದುಳಿದ, ಮತೀಯ ಅಲ್ಪ ಸಂಖ್ಯಾತ ಹಾಗೂ ಶೋಷಿತ ಸಮುದಾಯದ ವಿದ್ಯಾರ್ಥಿಗಳ ಶೈಕ್ಷಣಿಕ ಮತ್ತು ತುಮಕೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ, ಸಿಬ್ಬಂದಿಗಳ ಸರ್ವತೋಮುಖ ಅಭಿವೃದ್ಧಿಯನ್ನು ಆದ್ಯತೆಯನ್ನಾಗಿಸಿಕೊಂಡು ಡಾ.ಬಿ.ಆರ್ ಅಂಬೇಡ್ಕರ್ ಅಧ್ಯಯನ ಕೇಂದ್ರದಿಂದ ಮೌಲ್ಯಯುತವಾದ ಹತ್ತು–ಹಲವು ಕಾರ್ಯಕ್ರಮಗಳನ್ನು ಆಯೋಜಿಸಿಕೊಂಡು ಬರಲಾಗುತ್ತಿದೆ.

**ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರದ ಉದ್ದೇಶಗಳು**

- ಡಾ.ಬಿ.ಆರ್.ಆರ್ ಅಂಬೇಡ್ಕರರ ವಿಚಾರಗಳು ಮತ್ತು ಆಲೋಚನೆಗಳನ್ನು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳಿಗೆ ಪ್ರಚಾರಪಡಿಸುವುದು.
- ಡಾ. ಅಂಬೇಡ್ಕರ್ ತತ್ತ್ವಸಿದ್ಧಾಂತ ಮತ್ತು ಆಲೋಚನೆಯ ರೇಖೆಯಲ್ಲಿ ಸಂಶೋಧನಾ / ಕೋರ್ಸ್ ಮಾಡ್ಯೂಲ್ / ಪಠ್ಯಕ್ರಮವನ್ನು ಕೈಗೊಳ್ಳಲು ಶಿಕ್ಷಕ ಮತ್ತು ವಿದ್ಯಾರ್ಥಿಗಳಿಗೆ ಬೆಂಬಲ ನೀಡುವುದು.
- ಸಮೀಪ ಪ್ರದೇಶದ ಜನರು ಮತ್ತು ಸಮಾಜದ ಬಡ ಮತ್ತು ದುರ್ಬಲ / ಅಂಚಿನಲ್ಲಿರುವ ಸಮುದಾಯದ ಸುಧಾರಣೆಗಾಗಿ ಡಾ. ಅಂಬೇಡ್ಕರ್ ಅವರ ವಿಚಾರಗಳ ಪ್ರಸ್ತುತತೆ ಬಗ್ಗೆ ಜನರನ್ನು ಸಂವೇದನೆಗೊಳಿಸುವುದು.
- ಕೇಂದ್ರವು ಸೈದ್ಧಾಂತಿಕ ಮತ್ತು ಕಾರ್ಯ ಆಧಾರಿತ ಸಂಶೋಧನೆಗಳನ್ನು ಸಂಬಂಧಿತ ವಿಷಯಗಳ ಮೇಲೆ ತೆಗೆದುಕೊಳ್ಳುತ್ತದೆ.
- ಚಳುವಳಿಗಾರ/ ಬರಹಗಾರರ ಕೊಡುಗೆಗಳನ್ನು ಗುರುತಿಸಿ, ಸಮಾಜದ ಅಂಚಿನಲ್ಲಿರುವ ಸಮುದಾಯವನ್ನು ಒಟ್ಟುಗೂಡಿಸುವ ಹಾಗು ತಮ್ಮ ಆಲೋಚನೆಗಳನ್ನು ಮತ್ತು ಅನುಭವಗಳನ್ನು ಹಂಚಿಕೊಳ್ಳಲು ವೇದಿಕೆಯನ್ನು ಒದಗಿಸುವುದು.

**ಫೋಟೋಗ್ಯಾಲರಿ (ಮ್ಯೂಸಿಯಂ):**

| 22 | ಸಸ್ಯಶಾಸ್ತ್ರ | 02/01/2020 | 12/02/2020 |
| 23 | ಸಾವಯವ ರಸಾಯನಶಾಸ್ತ್ರ | 23/12/2019 | 12/02/2020 |
| 24 | ಎಂ.ಸಿ.ಎ | 31/01/2020 | 20/03/2020 |
| 25 | ಮನ:ಶಾಸ್ತ್ರ | 02/01/2020 | 04/05/2020 |
| 26 | ಕೋಕೋನಟ್ ಪ್ಲಾಂಟೇಷನ್ ಮ್ಯಾನ್ಬೆಜ್‌ಮೆಂಟ್... (ಸ್ನಾತಕೋತ್ತರ ಡಿಪ್ಲೊಮ) | 18/12/2019 | 12/02/2020 |
| 27 | ಎನ್ವಿರಾನ್‌ಮೆಂಟಲ್ ಇಂಪ್ಯಾಕ್ಟ್ ಅಸೆಸ್‌ಮೆಂಟ್... (ಸ್ನಾತಕೋತ್ತರ ಡಿಪ್ಲೊಮ) | 20/12/2019 | 29/02/2020 |

**2019 ನೇಸಾಲಿನ ದ್ವಿತೀಯ ಮತ್ತು ಚತುರ್ಥ ಸೆಮಿಸ್ಟರ್ ನ ಸ್ನಾತಕೋತ್ತರ ಪದವಿ ಪರೀಕ್ಷೆಗಳ ವಿವರ**

| | | | |
|---|---|---|---|
| 1 | ಇಂಗ್ಲೀಷ್ | 01/06/2019 | 13/08/2019 |
| 2 | ಕನ್ನಡ | 04/06/2019 | 12/07/2019 |
| 3 | ಇತಿಹಾಸ | 01/06/2019 | 15/07/2019 |
| 4 | ಅರ್ಥಶಾಸ | 04/06/2019 | 08/08/2019 |
| 5 | ರಾಜ್ಯಶಾಸ್ತ್ರ | 07/06/2019 | 10/07/2019 |
| 6 | ಸಾರ್ವಜನಿಕ ಆಡಳಿತ | 01/06/2019 | 10/07/2019 |
| 7 | ಸಮಾಜಕಾರ್ಯ | 04/06/2019 | 08/08/2019 |
| 8 | ಸಮಾಜಶಾಸ್ತ್ರ | 01/06/2019 | 08/08/2019 |
| 9 | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ | 04/06/2019 | 08/08/2019 |
| 10 | ವಾಣಿಜ್ಯ ಶಾಸ್ತ್ರ | 01/07/2019 | 10/07/2019 |
| 11 | ಎಂ.ಬಿ.ಎ. | 07/06/2019 | 30/08/2019 |
| 12 | ಗಣಿತಶಾಸ್ತ್ರ | 01/06/2019 | 08/08/2019 |
| 13 | ಜೀವರಸಾಯನಶಾಸ್ತ್ರ | 01/06/2019 | 10/07/2019 |
| 14 | ಜೀವತಂತ್ರಜ್ಞಾನ | 01/06/2019 | 30/08/2019 |
| 15 | ಎಲೆಕ್ಟ್ರಾನಿಕ್ ಮೀಡಿಯಾ | 04/06/2019 | 30/08/2019 |
| 16 | ರಸಾಯನಶಾಸ್ತ್ರ | 01/06/2019 | 08/08/2019 |
| 17 | ಭೌತಶಾಸ್ತ್ರ | 04/06/2019 | 15/07/2019 |
| 18 | ಎಂ.ಎಸ್.ಕಮ್ಯುನಿಕೇಶನ್ | 04/06/2019 | 30/08/2019 |
| 19 | ಪರಿಸರವಿಜ್ಞಾನ | 07/06/2019 | 08/08/2019 |
| 20 | ಇನ್‌ಆರ್ಗ್ಯಾನಿಕ್ ಕೆಮಿಸ್ಟ್ರಿ | 07/06/2019 | 30/08/2019 |
| 21 | ಮನಃಶಾಸ್ತ್ರ | 07/06/2019 | 08/08/2019 |

**f. ಪಿಎಚ್.ಡಿ. ಮಹಾ ಪ್ರಬಂಧ ಮತ್ತು ಎಂ.ಫಿಲ್. ಪ್ರಬಂಧಗಳ ಮೌಲ್ಯಮಾಪನ ಮತ್ತು ಫಲಿತಾಂಶವನ್ನು ಹೊರಡಿಸಲು ತೆಗೆದುಕೊಳ್ಳುವ ಕಾಲಾವಧಿ:**

ಪಿಎಚ್.ಡಿ. ಮಹಾಪ್ರಬಂಧ ಸಲ್ಲಿಕೆಯ ದಿನದಿಂದ ಸರಾಸರಿ 6 ರಿಂದ 8 ತಿಂಗಳುಗಳು.

**g. Ph.D Cource Work ಪರೀಕ್ಷೆಯ ಕಾರ್ಯವಿಧಾನಗಳು;**

- 6 ತಿಂಗಳು ಕಡ್ಡಾಯ
- ಕನಿಷ್ಟ 75% ಹಾಜಾರಾತಿ , ಹಾಜಾರಾತಿಯನ್ನು ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವುದು.
- Pre-PhD ಗಾಗಿ BOE ರಚನೆ
- ಸಂಬಂಧಿಸಿದ BOE ಯಿಂದ ಮೂರು ಸೆಟ್ ಪ್ರಶ್ನೆ ಪತ್ರಿಕೆಗಳನ್ನು ಸಿದ್ದಪಡಿಸುವುದು.
- ಪರೀಕ್ಷೆಯ ಅವಧಿ 3 ಗಂಟೆಗಳು
- ಆಂತರಿಕ ಮತು ಬಾಹ್ಯ ಮೌಲ್ಯಮಾಪನ
- ಫಲಿತಾಂಶ ಘೋಷಣೆ

- Ph.D ವ್ಯಾಸಂಗ ಮಾಡಲು ಅರ್ಹತೆಗಾಗಿ ಒಟ್ಟು ಅಂಕಗಳಲ್ಲಿ ಕನಿಷ್ಟ 50% ಪಡೆದಿರಬೇಕು.(ಆಂತರಿಕ ಅಂಕಗಳು ಸೇರಿದಂತೆ) 75 Theory & 25 IA)

**h. ಪರೀಕ್ಷಾ ಸಂಬಂಧಿತ ಸಾಮಗ್ರಿಗಳಾದ ಉತ್ತರ ಪತ್ರಿಕೆಗಳು, ಅಂಕಪಟ್ಟಿ ಪದವಿ ಪ್ರಮಾಣಪತ್ರ, ರ್ಯಾಂಕ್ ಪ್ರಮಾಣಪತ್ರ, ತಾತ್ಕಾಲಿಕ ಪ್ರಮಾಣಪತ್ರಗಳನ್ನು ಸಂಗ್ರಹಿಸುವ (ಖರೀದಿ) ನೀತಿ.**

ಪರೀಕ್ಷಾ ಸಂಬಂಧಿತ ಸಾಮಗ್ರಿಗಳಾದ ಉತ್ತರ ಪತ್ರಿಕೆಗಳು, ಅಂಕಪಟ್ಟಿ ಪದವಿ ಪ್ರಮಾಣಪತ್ರ, ರ್ಯಾಂಕ್ ಪ್ರಮಾಣಪತ್ರಗಳನ್ನು ಕರ್ನಾಟಕ ಸರ್ಕಾರ KTPP ಕಾಯ್ದೆಯ ಪ್ರಕಾರ ಇ–ಖರೀದಿ ವ್ಯವಸ್ಥೆ (e-procurement system) ಮೂಲಕ ಮತು ಸರ್ಕಾರದ ನಿರ್ದೇಶನದಂತೆ ಮಾಡಲಾಗಿದೆ.
ಸಕಾಲ ಮೂಲಕ ವಿದ್ಯಾರ್ಥಿಗಳಿಗೆ ನೀಡಲಾಗುವ ತಾತ್ಕಾಲಿಕ ಪ್ರಮಾಣಪತ್ರವನ್ನು (Provisional Certificate) ನೇರವಾಗಿ ಸಾಫ್ಟ್‌ವೇರ್ (EMS) ಮೂಲಕ ತಯಾರಾಗುತ್ತದೆ.

**i. ಸಾಫ್ಟ್‌ವೇರ್ ಮತ್ತು ಅಥವಾ ಶೇಖರಣಾ/ಪ್ರಕ್ರಿಯೆ ಸಮಸ್ಯೆಗಳಿಂದಾಗಿ ಸಾಮಗ್ರಿಗಳ ವ್ಯರ್ಥ: ಪರಿಣಾಮವಾಗಿ ಆದ ಆರ್ಥಿಕ ನಷ್ಟ ಒದಗಿಸಬೇಕಾದ ಪ್ರತಿಯೊಂದು ದಾಖಲೆಯ ವಿವರಗಳು.**

**ಸಾಫ್ಟ್‌ವೇರ್ ವಿಭಾಗ:**
ಲೆಸ್ಸ್ ಪೇಪರ್ ಆಫಿಸ್ ಪೋರ್ಟಲ್ NIC ಮತ್ತು ಉನ್ನತ ಶಿಕ್ಷಣ ಇಲಾಖೆ ಕರ್ನಾಟಕ ಸರ್ಕಾರ ಅಭಿವೃದ್ಧಿ ಪಡಿಸುತ್ತಿದೆ. ಪತ್ರ ನಿರ್ವಹಣಾ ವ್ಯವಸ್ಥೆ ಮತ್ತು ಫೈಲ್ ಮಾನಿಟರಿಂಗ್ ಸಿಸ್ಟಮ್ (FMS) Gnanasangama Karnataka.gov.in ಕಚೇರಿ ಸೂಟ್‌ನ ಮುಖ್ಯ ಅಂಶವಾಗಿದೆ. ಇದನ್ನು ತುಮಕೂರು ವಿಶ್ವವಿದ್ಯಾನಿಲಯವು 2015ರಿಂದ ಜಾರಿಗೆ ತಂದಿದೆ. ಈ ಪೋರ್ಟಲ್‌ನ್ನು ಬಳಸುವುದರಿಂದ ಆರ್ಥಿಕ ನಷ್ಟ ಮತ್ತು ವಸ್ತುಗಳ (ಸಾಮಾಗ್ರಿಗಳ) ನಷ್ಟವಾಗುವುದಿಲ್ಲ.

ಅದೇ ರೀತಿ, In-House Software Asst Management ಅನ್ನು ಸರಿಯಾದ ಆಸ್ತಿ ನಿರ್ವಹಣೆ ಮತ್ತು ಮೇಲ್ವಿಚಾರಣೆಗಾಗಿ ಅಭಿವೃದ್ಧಿ ಪಡಿಸಲಾಗುತ್ತಿದೆ. ಈ Software ಪೀಠೋಪಕರಣ, ಸಲಕರಣೆ ICT items ಇತ್ಯಾದಿಗಳಂತಹ ಪ್ರತಿ ಚರಾಸ್ಥಿ (moveable asset) ಗಾಗಿ ವಿಶೇಷ ಆಸ್ತಿ ಸಂಖ್ಯೆ (Unique asset number) ಯನ್ನು ಉತ್ಪಾದಿಸುತ್ತದೆ.

ಅತಿಥಿ ಉಪನ್ಯಾಸಕರ ಆಯ್ಕೆಗಳಿಗಾಗಿ ಆನ್‌ಲೈನ್ ಅನ್ನು ಸಹ ಇನ್ ಹೌಸ್‌ನಲ್ಲಿ ಅಭಿವೃದ್ಧಿ ಪಡಿಸಲಾಗಿದೆ. ಅಭ್ಯರ್ಥಿಗಳು ಅತಿಥಿ ಉಪನ್ಯಾಸಕರ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಸಂದರ್ಶನಕ್ಕೆ ಹಾಜಾರಾಗುತ್ತಾರೆ/ ಅಪ್ ಲೋಡ್ ಮಾಡಲಾದ ಅಗತ್ಯ ದಾಖಲೆಗಳನ್ನು ನಿರ್ವಾಹಕರ ಮಟ್ಟದಲ್ಲಿ ವೀಕ್ಷಿಸಲಾಗುತ್ತದೆ ಮತು ಪರಿಶೀಲಿಸಲಾಗುತ್ತಿದೆ. ಕಾಗದರಹಿತ ಸಂಸ್ಕರಣೆಗೆ ಸಂಬಂಧಿಸಿದಂತೆ ಇದು ಉತ್ತಮ ಅಭ್ಯಾಸವಾಗಿದೆ.

**j. ಪ್ರತಿ ಪರೀಕ್ಷಾ ದಾಖಲೆಗಳಲ್ಲಿ ಸಂಯೋಜಿಸಲಾದ ಭದ್ರತಾ ಕ್ರಮಗಳು**
ತುಮಕೂರು ವಿಶ್ವವಿದ್ಯಾನಿಲಯವು ಪರೀಕ್ಷಾ ದಾಖಲೆಗಳ ಸುರಕ್ಷತೆಯನ್ನು ಸುಧಾರಿಸಲು ಈ ಕೆಳಗಿನ ಕ್ರಮಗಳನ್ನು ಕೈಗೊಂಡಿದೆ.

1. Parchment paper shade white
2. 105 GSM
3. Variable ಡೇಟಾ ಮುದ್ರಣಕ್ಕಾಗಿ ಕಾಗದವನ್ನು ಯಾವುದೇ ಯಂತ್ರದಿಂದ ಲೇಸರ್/ಲೈನ್ ಮುದ್ರಿಸಬಹುದಾಗಿದೆ.
4. ಹೆಚ್ಚುವರಿ ರಕ್ಷಣೆಗಾಗಿ ಬಳಕೆದಾರರಿಂದ ಅಂತಹ ಯಾವುದೇ ಅಗತ್ಯವಿದ್ದರೆ ಈ ಕಾಗದವನ್ನು ಲ್ಯಾಮಿನೇಟ್ ಮಾಡಲು ಸಾಧ್ಯವಾಗುತ್ತದೆ.
5. ಮೈಕ್ರೋಲಿನ್ / ಮೈಕ್ರೋ ಲೆಟರ್ ಬಾರ್ಡರ್
6. ಆಂಟಿ ಕಾಪಿ
7. ಮಧ್ಯದಲ್ಲಿ ಮುದ್ರಿತ ವಾಟರ್ ಮಾರ್ಕ್ ಲೋಗೊ
8. Invisible UV Logo
9. ಹೋಲೋಗ್ರಾಮ್ ಸ್ಟ್ಯಾಂಪಿಂಗ್ (Original authenticate hologram)
10. Fusion Screen
11. Guilloche design
12. ಗೋಥಿಕ್ (Gothic) ಸರಣಿ ಸಂಖ್ಯೆ

13. Scanned letter
14. Rainbow Printing
15. Scan ಮಾಡಿದ ವಿನ್ಯಾಸ
16. High Resolution Border
17. Thermochromic ಶಾಯಿ
18. Currency Strip
19. Double Ghost
20. 2- d Bar code
21. QR Code
22. Pictograph Numbering
23. Variable Fusion Screen (Rol, No, Adhar No,)

**ಅಂಕಪಟ್ಟಿಗಳಲ್ಲಿ ಸಂಯೋಜಿಸಲಾದ ಭದ್ರತಾ ಕ್ರಮಗಳು**

1. High Resolution security border
2. Govt- Foil Stamping _Gold
3. Security Software designed purposeful spelling mistake
4. Penetrating ink numbering / Security numbering
5. Prismatic Printing
6. Micro-line printing
7. Security software (ಭದ್ರತಾ ಸಾಫ್ಟ್ ವೇರ್) ವಿನ್ಯಾಸ ಪಡಿಸಿದ ವಿಶಿಷ್ಠ ಡುಯಲ್ ಹಿಡನ್ ಇಮೇಜ್
8. Positive and negative Guilohe Design

**k. ಗಡುವನ್ನು ಪೂರೈಸಲು ನವೀನ ಅಭ್ಯಾಸಗಳನ್ನು ಪರಿಚಯಿಸಲಾಗಿದೆ**

- ಪರೀಕೆ ಪ್ರಾರಂಭವಾದ ದಿನದಂದೇ ಉತ್ತರ ಪತ್ರಕೆಗಳ Coding procedure ಅನ್ನು ಪ್ರಾರಂಭಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.
- ಆಯಾ (ಸಂಬಂಧಿತ) ಮೌಲ್ಯಮಾಪಕರು ಸಿದ್ದಪಡಿಸಿದ ಮುದ್ರಿತ ಅಂಕ ಪಟ್ಟಿಗಳನ್ನು, ಉತ್ತರಪತ್ರಿಕೆ ಮೌಲ್ಯಮಾಪನ ಮಾಡಿದ ದಿನದಂದೇ ಪರಿಶೀಲನೆ ಮತ್ತು ಊರ್ಜಿತಗೊಳಿಸಲಾಗುವುದು.
- ಅಂಕಗಳನ್ನು ದಾಖಲು ಮಾಡಿದ ನಂತರ ಏಕಕಾಲದಲ್ಲಿ ಕೋಡೆಡ್ ಉತ್ತರ ಪತ್ರಿಕೆಗಳ ಡಿ–ಕೋಡಿಂಗ್ ಮಾಡಲಾಗುತ್ತದೆ. ಈ ಮೂಲಕ ಆಯಾ ಕೋರ್ಸ್/ಸೆಮಿಸ್ಟಾರ್‌ಗಳ ಫಲಿತಾಂಶಗಳನ್ನು ಮೌಲ್ಯಮಾಪನ ಪೂರ್ಣಗೊಂಡ ಒಂದು ಅಥವಾ ಎರಡು ದಿನಗಳಲ್ಲಿ ನೀಡಲಾಗುತ್ತದೆ.

**l. ಪರೀಕ್ಷಾ ಸಾಫ್ಟ್‌ವೇರ್‌ಗಳಲ್ಲಿ ಪರಿಚಯಿಸಲಾದ ಭದ್ರತೆಗಳು:**

ಸರ್ಕಾರದ ಆದೇಶದಂತೆ ತುಮಕೂರು ವಿಶ್ವವಿದ್ಯಾಲಯವು ಅಭಿವೃದ್ದಿಪಡಿಸಿರುವ EMS Software ನ್ನು 2015 ರಿಂದ ಬಳಸುತ್ತಿದೆ. ಮೇಲಿನ ಸಾಫ್ಟ್‌ವೇರ್‌ಗಾಗಿ, ಸರ್ಕಾರವೇ ಸುರಕ್ಷಿತ ಸರ್ವರ್ ಮತು ಶೇಖರಣಾ ಸೌಲಭ್ಯವನ್ನು ಒದಗಿಸಿದೆ.

**m. ಬಾಹ್ಯ ತಜ್ಞ –ಲೆಕ್ಕಪರಿಶೋಧನೆ**

ಸಾಫ್ಟ್‌ವೇರ್ ನ ಬಾಹ್ಯ ತಜ್ಞ –ಲೆಕ್ಕಪರಿಶೋಧನೆ ನಡೆಸಲಾಗಿದೆಯೆ ಮತ್ತು ಭದ್ರತಾ ಪ್ರಮಾಣ ಪತ್ರವನ್ನು ಪಡೆಯಲಾಗಿದೆಯೆ? ಹೌದು ಎಂದಾದರೆ, ವಿವರಗಳು – **ಇಲ್ಲ**

**23. ಘಟಿಕೋತ್ಸವ: 13 ನೇ ವಾರ್ಷಿಕ ಘಟಿಕೋತ್ಸವ (2019–20)ವನ್ನು ನಡೆಸಲಾಗಿದೆ.**

ಪ್ರೊ. ಮಾಣಿಕ್‌ರಾವ್ ಎಂ ಸಾಲುಂಕೆ, ಅಧ್ಯಕ್ಷರು, ಅಸೋಸಿಯೇಷನ್ ಆಫ್ ಇಂಡಿಯನ್ ಯೂನಿವರ್ಸಿಟೀಸ್, ನವದೆಹಲಿ ಇವರು ಮುಖ್ಯ ಅತಿಥಿಗಳಾಗಿ, 13ನೇ ವಾರ್ಷಿಕ ಘಟಿಕೋತ್ಸವದ ಭಾಷಣವನ್ನು ಮಾಡಿದರು.

**ಈ ಕೆಳಕಂಡ 13ನೇ ವಾರ್ಷಿಕ ಘಟಿಕೋತ್ಸವದ ವರದಿಯನ್ನು ಮಾನ್ಯ ಕುಲಪತಿಗಳು ಘನತೆವೆತ್ತ ಕುಲಾಧಿಪತಿಗಳಿಗೆ ಸಲ್ಲಿಸಿದರು:**

## ಮಾನ್ಯ ಕುಲಪತಿಗಳ ಭಾಷಣ ಮತ್ತು ಪ್ರಸಕ್ತ ಸಾಲಿನ ಶೈಕ್ಷಣಿಕ ಚಟುವಟಿಕೆಗಳ ವರದಿ

ಕರ್ನಾಟಕದ ಘನತೆವೆತ್ತ ರಾಜ್ಯಪಾಲರು ಹಾಗೂ ತುಮಕೂರು ವಿಶ್ವವಿದ್ಯಾನಿಲಯದ ಕುಲಾಧಿಪತಿಗಳಾದ ಶ್ರೀ ವಜೂಭಾಯಿ ವಾಲಾ ಜೀ ಅವರನ್ನು ವಿಶ್ವವಿದ್ಯಾನಿಲಯದ ಹದಿಮೂರನೆಯ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಹೆಮ್ಮೆಯಿಂದ ಸ್ವಾಗತಿಸುತ್ತೇನೆ.

ಕರ್ನಾಟಕ ಸರ್ಕಾರದ ಗೌರವಾನ್ವಿತ ಉಪ ಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ, ಐಟಿ, ಬಿಟಿ ಸಚಿವರು ಹಾಗೂ ತುಮಕೂರು ವಿಶ್ವವಿದ್ಯಾನಿಲಯದ ಸಮಕುಲಾಧಿಪತಿಗಳಾದ ಡಾ. ಸಿ. ಎನ್. ಅಶ್ವತ್ಥ ನಾರಾಯಣ ಅವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಇಂದಿನ ಘಟಿಕೋತ್ಸವ ಸಮಾರಂಭದ ಮುಖ್ಯ ಅತಿಥಿಗಳು, ನವದೆಹಲಿಯ ಭಾರತೀಯ ವಿಶ್ವವಿದ್ಯಾಲಯಗಳ ಸಂಘದ ಅಧ್ಯಕ್ಷರಾದ ಪ್ರೊ. ಮಾಣಿಕರಾವ್ ಎಂ. ಸಾಲುಂಖೆ ಅವರನ್ನು ಸ್ವಾಗತಿಸಲು ನಾನು ಹರ್ಷಿಸುತ್ತೇನೆ.

ವೈಜ್ಞಾನಿಕ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ಅನನ್ಯ ಕೊಡಿಗೆಯನ್ನು ನೀಡಿ, ತುಮಕೂರು ವಿಶ್ವವಿದ್ಯಾನಿಲಯದಿಂದ ಇಂದು ಗೌರವ ಡಾಕ್ಟರೇಟ್ ಸ್ವೀಕರಿಸಲಿರುವ ಮಹನೀಯರುಗಳನ್ನು ಗೌರವಪೂರ್ವಕವಾಗಿ ಸ್ವಾಗತಿಸುತ್ತೇನೆ.

ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್‌ನ ಮಾನ್ಯ ಸದಸ್ಯರುಗಳು, ವಿವಿಧ ನಿಕಾಯಗಳ ಡೀನರುಗಳು, ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರು, ಬೋಧಕವೃಂದ, ಘಟಕ ಕಾಲೇಜುಗಳ ಹಾಗೂ ವಿವಿಧ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳು ಮತ್ತು ಪ್ರತಿನಿಧಿಗಳನ್ನು ಈ ಸಮಾರಂಭಕ್ಕೆ ಅತ್ಯಂತ ಸಂತೋಷದಿಂದ ಸ್ವಾಗತಿಸುತ್ತೇನೆ.

ಜನಪ್ರತಿನಿಧಿಗಳಾದ ವಿಧಾನಸಭೆ, ವಿಧಾನ ಪರಿಷತ್ ಹಾಗೂ ಲೋಕಸಭೆಯ ಮಾನ್ಯ ಸದಸ್ಯರುಗಳಿಗೆ, ಜಿಲ್ಲಾಧಿಕಾರಿಗಳಿಗೆ, ಪೊಲೀಸ್ ವರಿಷ್ಠಾಧಿಕಾರಿಗಳು ಹಾಗೂ ಜಿಲ್ಲಾಡಳಿತದ ಇತರೆ ಆಹ್ವಾನಿತರಿಗೆ, ಬೋಧಕೇತರ ವರ್ಗಕ್ಕೆ, ಪೋಷಕರಿಗೆ, ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮದ ಬಂಧುಗಳಿಗೆ ಹಾಗೂ ಎಲ್ಲ ವಿಶೇಷ ಆಹ್ವಾನಿತರಿಗೆ ಹಾರ್ದಿಕ ಸ್ವಾಗತ.

ಎಲ್ಲಕ್ಕಿಂತ ಮುಖ್ಯವಾಗಿ ಇಂದು ಪದವಿಗಳನ್ನು ಸ್ವೀಕರಿಸಲಿರುವ ಪದವೀಧರರಿಗೆ ನಾನು ವಿಶೇಷವಾಗಿ ಸ್ವಾಗತವನ್ನು ಬಯಸುತ್ತೇನೆ.

### ತುಮಕೂರು ವಿಶ್ವವಿದ್ಯಾನಿಲಯದ ಕಾರ್ಯಚಟುವಟಿಕೆಗಳ ವರದಿ

ತುಮಕೂರು ವಿಶ್ವವಿದ್ಯಾನಿಲಯದ ಹದಿಮೂರನೆಯ ವಾರ್ಷಿಕ ಘಟಿಕೋತ್ಸವದ ಈ ಶುಭಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಪ್ರಸಕ್ತ ಶೈಕ್ಷಣಿಕ ವರ್ಷದ ಕಾರ್ಯಚಟುವಟಿಕೆಗಳ ವರದಿಯನ್ನು ಅತ್ಯಂತ ಹೆಮ್ಮೆ ಮತ್ತು ಧನ್ಯತಾಭಾವದಿಂದ ತಮ್ಮ ಮುಂದಿಡುತ್ತಿದ್ದೇನೆ. ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ನಿರ್ದೇಶನದಂತೆ ಇಂದು ಪದವಿ ಸ್ವೀಕರಿಸುತ್ತಿರುವ ಎಲ್ಲ ವಿದ್ಯಾರ್ಥಿಗಳು ಹಾಗೂ ಬೋಧಕರು ಖಾದಿ ವಸ್ತ್ರ ಧರಿಸಿದ್ದಾರೆ ಎಂಬುದು ಗಮನಾರ್ಹ ಸಂಗತಿ. ಖಾದಿವಸ್ತ್ರವು ರಾಷ್ಟ್ರೀಯತೆಯ ದಿವ್ಯ ಸಂಕೇತವೂ, ನಮ್ಮ ಯುವಜನತೆಗೆ ಮಹಾತ್ಮ ಗಾಂಧೀಜಿಯವರು ಮುನ್ನಡೆಸಿದ ಸ್ವದೇಶೀ ಚಳವಳಿಯನ್ನು ನೆನಪಿಸುವ ಸಾಧನವೂ ಆಗಿದೆ.

ತುಮಕೂರು ವಿಶ್ವವಿದ್ಯಾನಿಲಯ: ಒಂದು ವಿಶಿಷ್ಟ ವಿಶ್ವವಿದ್ಯಾಲಯ ರಾಷ್ಟ್ರೀಯ ಜ್ಞಾನ ಆಯೋಗದ "ಜಿಲ್ಲೆಗೊಂದು ವಿಶ್ವವಿದ್ಯಾನಿಲಯ" ಎಂಬ ಆಶಯದಡಿ ತುಮಕೂರು ವಿಶ್ವವಿದ್ಯಾನಿಲಯವು 20 ಮಾರ್ಚ್ 2004ರಂದು ಸ್ಥಾಪಿತಗೊಂಡಿತು. ಬೆಂಗಳೂರು–ಹೊನ್ನಾವರ ರಾಷ್ಟ್ರೀಯ ಹೆದ್ದಾರಿಯ ತುಮಕೂರು ನಗರದ ಹೃದಯಭಾಗದಲ್ಲಿರುವುದು ನಮ್ಮ ವಿಶ್ವವಿದ್ಯಾನಿಲಯದ ವೈಶಿಷ್ಟ್ಯಗಳಲ್ಲೊಂದು. ಹಸಿರು ಪರಿಸರದಲ್ಲಿ ವಿಶಾಲ ಕಟ್ಟಡಗಳನ್ನು ಹೊಂದಿರುವ ವಿಶ್ವವಿದ್ಯಾನಿಲಯದ ಆವರಣವು ಕಲಿಕೆಗೆ ಪೂರಕ ವಾತಾವರಣವನ್ನು ನಿರ್ಮಿಸಿದೆ. ಶಿಕ್ಷಣವನ್ನು ಜ್ಞಾನ, ವಿವೇಕ ಮತ್ತು ಮೌಲ್ಯಗಳ

ಸಮಮಿಶ್ರಣದೊಂದಿಗೆ ನೀಡಿ ಉತ್ಕೃಷ್ಟತೆಯನ್ನು ಸಾಧಿಸುವಲ್ಲಿ ವಿಶ್ವವಿದ್ಯಾನಿಲಯವು ಅವಿರತ ಶ್ರಮಿಸುತ್ತಿದೆ. ಭಾರತವನ್ನು 'ಜ್ಞಾನ ಸಮಾಜ'ವನ್ನಾಗಿ ಪರಿವರ್ತಿಸುವಲ್ಲಿ ತಮ್ಮ ಮಹತ್ತರ ಪಾತ್ರವನ್ನು ಅರಿತು ಸತತವಾಗಿ ಅದಕ್ಕೆ ಶ್ರಮಿಸುತ್ತಿರುವ ನನ್ನ ಬೋಧಕವೃಂದವನ್ನು ನಾನು ಈ ಸಂದರ್ಭದಲ್ಲಿ ಅಭಿನಂದಿಸಲು ಇಚ್ಛಿಸುತ್ತೇನೆ. ವಿದ್ಯಾರ್ಥಿಗಳು ಸ್ವಾವಲಂಬಿಗಳಾಗಲು ತಾವೇ ಮಾದರಿಯಾಗಿ, ತಮ್ಮ ಸನ್ನಡತೆಯ ಮೂಲಕ ಅಗತ್ಯ ಬುನಾದಿಯನ್ನು ನಮ್ಮ ಬೋಧಕರು ಹಾಕಿದ್ದಾರೆ. ಮಾಹಿತಿ ಯುಗದಲ್ಲಿ ಜೀವಿಸುತ್ತಿರುವ ನಾವು ವಿವಿಧ ಮೂಲಗಳ ಮೂಲಕ ದೊರೆಯುವ ಅಗಾಧ ಮಾಹಿತಿಯನ್ನು ಸಮರ್ಥವಾಗಿ ನಿರ್ವಹಿಸಲು ಹಾಗೂ ಬಳಸಿಕೊಳ್ಳಲು ಅಗತ್ಯ ವಾತಾವರಣವನ್ನು ನಿರ್ಮಿಸಿದ್ದೇವೆ. ಪಠ್ಯಕ್ರಮದ ಮೂಲಕ ಜ್ಞಾನ ಸೃಜನೆ ಮತ್ತು ಪ್ರಸಾರಕಾರ್ಯವನ್ನು ಮಾಡುವುದು ಮಾತ್ರವಲ್ಲದೆ, ಬೋಧಕರ ವೈಯಕ್ತಿಕ ವೃತ್ತಿ ಬೆಳವಣಿಗೆಗೆ ಪ್ರೋತ್ಸಾಹ ನೀಡುತ್ತಾ ಅವರನ್ನು ಸದಾ ಗಮನಿಸುವ, ಅನುಸರಿಸುವ ವಿದ್ಯಾರ್ಥಿವೃಂದದ ಮೇಲೆ ಧನಾತ್ಮಕ ಪ್ರಭಾವ ಬೀರುತ್ತಿರುವುದು ವಿಶ್ವವಿದ್ಯಾನಿಲಯದ ಒಂದು ವೈಶಿಷ್ಟ್ಯ.

**ಶೈಕ್ಷಣಿಕ ವಿವರ**

- ಇಪ್ಪತ್ತು ಸ್ನಾತಕೋತ್ತರ ಅಧ್ಯಯನ ವಿಭಾಗಗಳು
- ಲಲಿತಕಲೆ ಮತ್ತು ದೃಶ್ಯಕಲಾ ವಿಷಯದಲ್ಲಿ ಸ್ನಾತಕ ಪದವಿ ಕೋರ್ಸ್
- ಹಾರ್ಡ್‌ವೇರ್ ತಂತ್ರಜ್ಞಾನ ಮತ್ತು ನೆಟ್‌ವರ್ಕಿಂಗ್‌ನಲ್ಲಿ ಬಿ.ವೋಕ್
- ಒಟ್ಟು ಹತ್ತೊಂಬತ್ತು ಕೋರ್ಸ್‌ಗಳುಳ್ಳ ಎರಡು ಘಟಕ ಕಾಲೇಜುಗಳು
- ತೊಂಬತ್ತು ಸಂಯೋಜಿತ ಕಾಲೇಜುಗಳು
- ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಪ್ರವೇಶ ಪಡೆದ 3172 ಸ್ನಾತಕೋತ್ತರ ವಿದ್ಯಾರ್ಥಿಗಳು ಹಾಗೂ 303 ಪಿಎಚ್.ಡಿ. ಸಂಶೋಧನಾರ್ಥಿಗಳು

ತನ್ನೆಲ್ಲ ಭಾಗೀದಾರರ ಅನುಕೂಲಕ್ಕಾಗಿ ಸಾಮಾಜಿಕ ಶಿಷ್ಟಾಚಾರವನ್ನು ಮೈಗೂಡಿಸಿಕೊಂಡ ಒಂದು ಉನ್ನತ ಶಿಕ್ಷಣ ಸಂಸ್ಥೆಯಾಗಿ ತುಮಕೂರು ವಿಶ್ವವಿದ್ಯಾನಿಲಯವು ಸರಿಯಾದ ದಾರಿಯಲ್ಲಿ ಮುನ್ನಡೆಯುತ್ತಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಇದರ ಜೊತೆಗೆ ಹೊಸ ಶಿಕ್ಷಣ ನೀತಿಯಲ್ಲಿ ಅಡಕವಾಗಿರುವ ಶಿಫಾರಸುಗಳನ್ನು ಪರಿಗಣನೆಗೆ ತೆಗೆದುಕೊಂಡು ವಿದ್ಯಾರ್ಥಿಗಳ ಸಮಗ್ರ ಬೆಳವಣಿಗೆ – "ಆದಿಯಿಂದ ಸಮಾಧಿಯವರೆಗೆ" (womb to tomb) ಕಲಿಕೆಯ ಭರವಸೆಯನ್ನು ನೀಡುತ್ತಿದೆ.

**ಕೋರ್ಸ್‌ಗಳು ಮತ್ತು ಸೌಲಭ್ಯಗಳು**

ಮಾನವಿಕ ವಿಜ್ಞಾನಗಳು, ಭಾಷಾ ವಿಜ್ಞಾನಗಳು, ಸ್ವಾಭಾವಿಕ ವಿಜ್ಞಾನಗಳು, ಸಾಮಾಜಿಕ ವಿಜ್ಞಾನಗಳು ಹಾಗೂ ವಾಣಿಜ್ಯ–ನಿರ್ವಹಣಾ ವಿಷಯಗಳಲ್ಲಿ ವಿಶಾಲವ್ಯಾಪ್ತಿಯುಳ್ಳ 20 ಕೋರ್ಸ್‌ಗಳನ್ನು ವಿಶ್ವವಿದ್ಯಾನಿಲಯವು ಕೊಡಮಾಡುತ್ತಿದೆ. ಕಲಿಕೆ ಮತ್ತು ಸಂಶೋಧನೆಯಲ್ಲಿ ಸಹಭಾಗಿತ್ವ ಮತ್ತು ಸಹಕಾರದ ತತ್ತ್ವಗಳನ್ನು ಎಲ್ಲ ವಿಭಾಗಗಳೂ ಅಳವಡಿಸಿಕೊಂಡಿವೆ. ಯುಜಿಸಿಯ ಪಠ್ಯಕ್ರಮದ ಶಿಫಾರಸುಗಳು ಹಾಗೂ ತನ್ನದೇ ಆದ ಮುಕ್ತ ಆಯ್ಕೆಯ ಶ್ರೇಯಾಂಕ ಪದ್ಧತಿ (Choice Based Credit System)ಯ ಆಧಾರದ ಮೇಲೆ ಎಲ್ಲಾ ವಿಭಾಗಗಳು ತಮ್ಮ ಪಠ್ಯಕ್ರಮವನ್ನು ಅಭಿವೃದ್ಧಿಪಡಿಸಿವೆ. ಯಶಸ್ವೀ ವಿದ್ಯಾರ್ಥಿಗಳ ಸಂಖ್ಯೆಯು ಗಣನೀಯವಾಗಿ ಏರಿಕೆಯಾಗುತ್ತಿರುವುದು ನಮ್ಮ ಬೋಧನಾಕ್ರಮದ ಶಕ್ತಿಯನ್ನು ಸೂಚಿಸುತ್ತದೆ. ಎಲ್ಲ ವಿಭಾಗಗಳು ವಿದ್ಯಾರ್ಥಿಗಳ, ಕೈಗಾರಿಕೋದ್ಯಮಿಗಳ, ವೃತ್ತಿಪರರ ಹಾಗೂ ಶಿಕ್ಷಣತಜ್ಞರುಗಳ ಅಭಿಪ್ರಾಯವನ್ನು ಪಡೆದು ಕಾಲಕಾಲಕ್ಕೆ ಪಠ್ಯಕ್ರಮವನ್ನು ಪರಿಷ್ಕರಿಸುತ್ತಿವೆ.

ಮೌಲ್ಯವರ್ಧಿತ ಕೋರ್ಸ್‌ಗೂ, ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳು ಹಾಗೂ ಕ್ಷೇತ್ರಕಾರ್ಯ ಆಧಾರಿತ ಯೋಜನೆಗಳಲ್ಲಿ ವಿದ್ಯಾರ್ಥಿಗಳು ತಮ್ಮನ್ನು ತೊಡಗಿಸಿಕೊಳ್ಳುವಂತೆ ಬೋಧಕರು ಪ್ರೋತ್ಸಾಹಿಸುತ್ತಾರೆ. ಈ ರೀತಿಯ ಪ್ರತಿ ಕೋರ್ಸ್‌ನಲ್ಲಿ ಮೌಲ್ಯಾಧಾರಿತ ಶಿಕ್ಷಣ ಹಾಗೂ ಸಾಮಾಜಿಕ ಜವಾಬ್ದಾರಿಯ ಪಾತ್ರವನ್ನು ಅಳವಡಿಸಲಾಗಿದೆ. ಲಿಂಗ ಸಮಾನತೆಯ ಪ್ರಾಮುಖ್ಯತೆ ಬಗ್ಗೆಯೂ ನಮಗೆ ಅರಿವಿದ್ದು, ಅದನ್ನು ನಮ್ಮ ಕೋರ್ಸ್‌ಗಳಲ್ಲಿ ನಾವು ಪ್ರಜ್ಞಾಪೂರ್ವಕವಾಗಿ

ಅಳವಡಿಸಿಕೊಂಡಿದ್ದೇವೆ. ಬೋಧನೆಯ ಜೊತೆಗೆ ವಿದ್ಯಾರ್ಥಿಗಳ ವೈಯಕ್ತಿಕ ಮತ್ತು ಶೈಕ್ಷಣಿಕ ಕುಂದುಕೊರತೆಗಳನ್ನು ಆಲಿಸಿ, ಪರಿಹಾರ ಸೂಚಿಸುವ ಆಪ್ತ ಸಮಾಲೋಚನೆಯು ನಮ್ಮ ವಿಶ್ವವಿದ್ಯಾನಿಲಯದ ಎಲ್ಲ ಕೋರ್ಸ್‌ಗಳಲ್ಲಿ ಅವಿಭಾಜ್ಯ ಅಂಗವಾಗಿದೆ.

**ಆಡಳಿತ**

ರಾಜ್ಯದ ಶಾಸಕಾಂಗವು ಅನುಮೋದಿಸಿದ ಅಧಿನಿಯಮಕ್ಕೆ ಬದ್ಧವಾಗಿರುವ ವಿಶ್ವವಿದ್ಯಾನಿಲಯದ ಪ್ರತಿಯೊಂದು ಅಂಗಕ್ಕೂ ತನ್ನ ನಿರ್ದಿಷ್ಟ ಪಾತ್ರ ಮತ್ತು ಜವಾಬ್ದಾರಿಗಳಿವೆ. ಆಡಳಿತದಲ್ಲಿ ಪಾರದರ್ಶಕತೆಯನ್ನು ಅನುಸರಿಸುವ ಮೂಲಕ ನಾವು ಉತ್ತಮ ಆಡಳಿತವನ್ನು ನೀಡುವಲ್ಲಿ ಸಫಲರಾಗಿದ್ದೇವೆ. ಪ್ರಜಾಸತ್ತಾತ್ಮಕ ಹಾಗೂ ಪರಿಣಾಮಕಾರಿ ಕಾರ್ಯನಿರ್ವಹಣೆಗಾಗಿ ಮಾಹಿತಿ ಸಂವಹನ ತಂತ್ರಜ್ಞಾನದ ಸಂಪೂರ್ಣ ಪ್ರಯೋಜನವನ್ನು ನಾವು ಪಡೆದುಕೊಂಡಿದ್ದೇವೆ. ನಮ್ಮ ಇ–ಪೋರ್ಟಲ್ ಆನ್‌ಲೈನ್ ಪ್ರವೇಶಾತಿ, ವಿದ್ಯಾರ್ಥಿ ಹಾಜರಾತಿ, ವಿದ್ಯಾರ್ಥಿ ಪ್ರತಿಕ್ರಿಯೆ ಸಂಗ್ರಹಣೆ, ಆನ್‌ಲೈನ್ ಸಂಯೋಜನೆ, ಪತ್ರ ವ್ಯವಹಾರ ನಿರ್ವಹಣೆ, ಕಡತ ವ್ಯವಹಾರ ನಿರ್ವಹಣೆ, ಪರೀಕ್ಷಾ ನಿರ್ವಹಣಾ ವ್ಯವಸ್ಥೆ, ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ, ಇ–ಕಂಟೆಂಟ್ ಹಾಗೂ ಇ–ಕಲಿಕೆ, ಇ–ನಡಾವಳಿ, ಕೋರ್ಟ್ ಪ್ರಕರಣ ನಿರ್ವಹಣಾ ವ್ಯವಸ್ಥೆ ಮೊದಲಾದ ಸೌಲಭ್ಯಗಳನ್ನು ಹೊಂದಿದೆ.

**ವಿಶ್ವವಿದ್ಯಾನಿಲಯದ ಸಂಶೋಧನಾ ಸಂಸ್ಕೃತಿ**

ಯಾವುದೇ ಇತರೆ ಉನ್ನತ ಶಿಕ್ಷಣ ಸಂಸ್ಥೆಯ ಹಾಗೆಯೇ ತುಮಕೂರು ವಿಶ್ವವಿದ್ಯಾನಿಲಯವೂ ಕೂಡ ತನ್ನ ಧ್ಯೇಯ–ದರ್ಶನದಲ್ಲಿ ಸಂಶೋಧನೆಯನ್ನು ಪ್ರಮುಖ ಅಂಶವಾಗಿ ಮಾಡಿಕೊಂಡಿದೆ. ಬಹುಶಿಸ್ತೀಯ ವಿಧಾನದಡಿ ವಿಶ್ವವಿದ್ಯಾನಿಲಯದ ಅಧ್ಯಯನ ವಿಭಾಗಗಳು ಸ್ನಾತಕೋತ್ತರ, ಪಿಎಚ್.ಡಿ ಹಾಗೂ ಡಿ.ಲಿಟ್. ಕಾರ್ಯಕ್ರಮಗಳನ್ನು ಹೊಂದಿವೆ. ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆಯನ್ನು ಉತ್ತೇಜಿಸುವ ಸಲುವಾಗಿ ಸಂಶೋಧನೆ ಮತ್ತು ಸಮಾಲೋಚನಾ ನೀತಿಯನ್ನು ರೂಪಿಸಲಾಗಿದೆ. ಸಂಶೋಧನೆಗೆ ವಿಶ್ವವಿದ್ಯಾನಿಲಯದಲ್ಲಿ ಇರುವ ಪೂರಕ ವಾತಾವರಣವು ನಮ್ಮ ಬೋಧಕರು ಪ್ರತಿಷ್ಠಿತ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಅನುದಾನ ಸಂಸ್ಥೆಗಳಿಂದ ಸಂಶೋಧನಾ ಅನುದಾನವನ್ನು ಪಡೆಯಲು ಅನುವು ಮಾಡಿಕೊಟ್ಟಿದೆ. ಇದಲ್ಲದೆ, ಯುವ ಬೋಧಕರಲ್ಲಿ ಸಂಶೋಧನಾ ಸಂಸ್ಕೃತಿಯನ್ನು ಬೆಳೆಸುವ ಉದ್ದೇಶದಿಂದ 22 ಲಕ್ಷ ರೂಪಾಯಿಗಳ ಮೂಲಧನವನ್ನು ಮೀಸಲಿಡಲಾಗಿದೆ. ಬೋಧಕರಲ್ಲಿರುವ ಸಂಶೋಧನಾ ಸಾಮರ್ಥ್ಯವನ್ನು ಮತ್ತಷ್ಟು ಹುರಿಗೊಳಿಸಿ ತನ್ಮೂಲಕ ವಿಶ್ವವಿದ್ಯಾನಿಲಯವನ್ನು ಸಂಶೋಧನೆಗೆ ಕೇಂದ್ರಸ್ಥಾನವನ್ನಾಗಿ ಪರಿವರ್ತಿಸಬೇಕು ಎಂಬ ಹೊಸ ಶಿಕ್ಷಣ ನೀತಿಯ ಆಶಯವನ್ನು ಈಡೇರಿಸಿಕೊಳ್ಳುವುದು ನಮ್ಮ ಉದ್ದೇಶವಾಗಿದೆ.

ವಿಶ್ವವಿದ್ಯಾನಿಲಯದ ಸಂಶೋಧನಾ ಸಂಸ್ಕೃತಿಯು ಹೇಗಿದೆಯೆಂದರೆ ನಮ್ಮ ಬೋಧಕರ ಸಂಶೋಧನಾ ಉತ್ಪನ್ನಗಳು ಶೈಕ್ಷಣಿಕ ವಲಯದಲ್ಲಿ ವಿಶೇಷ ಸ್ಥಾನವನ್ನು ಪಡೆದು, ಮಾದರಿಯಾಗಿ ಹೊರಹೊಮ್ಮಿದೆ. ಸಂಶೋಧನಾ ಯೋಜನೆಗಳಿಗೆ ಪ್ರತಿಷ್ಠಿತ ಅನುದಾನ ಸಂಸ್ಥೆಗಳಿಗೆ ಪ್ರಸ್ತಾವನೆ ಸಲ್ಲಿಸಿ ಅನುದಾನ ಪಡೆಯುವುದೇ ಅಲ್ಲದೆ, ಹಲವಾರು ಪ್ರಸಿದ್ಧ ರಾಷ್ಟ್ರೀಯ, ಅಂತಾರಾಷ್ಟ್ರೀಯ ನಿಯತಕಾಲಿಕೆಗಳು, ಸಮ್ಮೇಳನಗಳು ಹಾಗೂ ವಿಚಾರ ಸಂಕಿರಣಗಳಲ್ಲಿ ಸಂಶೋಧನಾ ಪ್ರಬಂಧಗಳು ಪ್ರಕಟಗೊಂಡಿವೆ.

ಯುಜಿಸಿ ಮಾರ್ಗಸೂಚಿ ಹಾಗೂ ಸಂಶೋಧನಾ ನೀತಿಗೆ ಅನುಗುಣವಾಗಿ ಪಿಎಚ್.ಡಿ. ಪ್ರವೇಶಾತಿ ನಡೆಸಲಾಗುತ್ತಿದೆ. ನಾವು ನಡೆಸುವ ಕೋರ್ಸ್‌ವರ್ಕ್ ಸಂಶೋಧನಾರ್ಥಿಗಳಲ್ಲಿ ಅನ್ವೇಷಣಾ ಮನೋಭಾವವನ್ನು ಬೆಳೆಸುತ್ತದೆ. ಇದರ ಫಲವಾಗಿಯೇ ಇಂದು 85 ಸಂಶೋಧನಾರ್ಥಿಗಳು ಉತ್ತಮ ಸಂಶೋಧನೆ ನಡೆಸಿ ಪಿಎಚ್.ಡಿ. ಪದವಿ ಪಡೆಯುತ್ತಲಿದ್ದಾರೆ. ಸಂಶೋಧನಾ ಯೋಜನೆಗಳು ಮತ್ತು ಸಮಾಲೋಚನೆಯ ಮೂಲಕ ಒಂದಷ್ಟು ಆದಾಯವನ್ನು ಗಳಿಸುವ ಮೂಲಕ ಹೊಸ ಸಂಪ್ರದಾಯವನ್ನು ಹುಟ್ಟುಹಾಕಿದೆ. ಸಂಶೋಧನೆ ಮತ್ತು ಸಮಾಲೋಚನೆಯಲ್ಲಿ ತೊಡಗಿಸಿಕೊಳ್ಳುವ ಬೋಧಕರಿಗೆ ಎಲ್ಲಾ ರೀತಿಯ ಉತ್ತೇಜನ ಮತ್ತು ಪ್ರೋತ್ಸಾಹ ನೀಡಲಾಗುತ್ತಿದೆ. ನಮ್ಮ ಗ್ರಂಥಾಲಯದ ಬೆಳವಣಿಗೆಗೆ ನಾವು ಎಲ್ಲಾ ಕ್ರಮಗಳನ್ನು ಕೈಗೊಂಡಿದ್ದು, ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಒಂದು ಕೋಟಿ ರೂಪಾಯಿ ಮೌಲ್ಯದ ಮಾಹಿತಿ ಸಂಪನ್ಮೂಲಗಳನ್ನು ಸೇರ್ಪಡಿಸಿದ್ದೇವೆ. ಅಲ್ಲದೆ ಪ್ರತಿ ವಿಭಾಗದಲ್ಲೂ ವಿಭಾಗೀಯ ಗ್ರಂಥಾಲಯ ಸ್ಥಾಪಿಸಿ, ತರಗತಿಗಳ ಸಂವಾದದ ಗುಣಮಟ್ಟವನ್ನು ಹೆಚ್ಚಿಸಲಾಗಿದೆ.

**ಆಂತರಿಕ ಗುಣಮಟ್ಟ ಭರವಸೆ ಕೋಶ (ಐ.ಕ್ಯೂ.ಎ.ಸಿ.)**

ಜಾಗತಿಕ ಅಗತ್ಯಕ್ಕನುಗುಣವಾಗಿ ಜ್ಞಾನ, ಕೌಶಲ್ಯ ಮತ್ತು ಉದ್ಯೋಗಾರ್ಹತೆಯನ್ನು ಮೇಳೈಸಿಕೊಂಡ ಉನ್ನತ ಶಿಕ್ಷಣವನ್ನು ನೀಡಲು ಹಾಗೂ ಅದರಲ್ಲಿ ಗುಣಮಟ್ಟವನ್ನು ನಿರಂತರವಾಗಿ ಕಾಯ್ದುಕೊಳ್ಳುವ ಸಲುವಾಗಿ ವಿಶ್ವವಿದ್ಯಾನಿಲಯದಲ್ಲಿ ಆಂತರಿಕ ಗುಣಮಟ್ಟ ಭರವಸೆ ಕೋಶ (ಐ.ಕ್ಯೂ.ಎ.ಸಿ.)ವನ್ನು ಸ್ಥಾಪಿಸಲಾಗಿದೆ. ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಮಾತ್ರವಲ್ಲದೆ ಆಡಳಿತದಲ್ಲಿಯೂ ಗುಣಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಐ.ಕ್ಯೂ.ಎ.ಸಿ.ಯು ಪ್ರಮುಖ ಪಾತ್ರ ವಹಿಸಿದೆ.

ಪ್ರಚಲಿತ ವಿದ್ಯಮಾನಗಳ ಬಗ್ಗೆ ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಐ.ಕ್ಯೂ.ಎ.ಸಿ.ಯು ಸಮಕಾಲೀನತೆಯನ್ನು ಕಾಯ್ದುಕೊಂಡಿದೆ. ಉಳಿತಾಯದ ಚತುರೋಪಾಯಗಳ ಪ್ರಾಯೋಗಿಕ ವಿಧಾನಗಳ ಬಗ್ಗೆ ಬೆಳಕು ಚೆಲ್ಲಿದ ಡಾ. ಸುಬ್ರಮಣ್ಯಂ ಶರ್ಮ ಅವರೊಂದಿಗಿನ "ಬಜೆಟ್ 2020 ಅವಲೋಕನ" ಸಂವಾದ ಕಾರ್ಯಕ್ರಮ, ಹೊಸ ಶಿಕ್ಷಣ ನೀತಿಯ ಕರಡಿನ ಕುರಿತು ಪ್ರೊ. ಎಂ.ಕೆ.ಶ್ರೀಧರ್ ಅವರೊಂದಿಗೆ ಆಯೋಜಿಸಿದ ಸಂವಾದ ಕಾರ್ಯಕ್ರಮವು ಉಲ್ಲೇಖಾರ್ಹ. ಮಾರಣಾಂತಿಕ ಕ್ಯಾನ್ಸರ್ ರೋಗದ ಕುರಿತು ಅಮೆರಿಕಾದ ಪ್ರೊಫೆಸರ್‌ಗಳ ಜೊತೆ ವಿಶ್ವವಿದ್ಯಾನಿಲಯದ ಬೋಧಕರ, ಸಂಶೋಧನಾರ್ಥಿಗಳ ಹಾಗೂ ವಿದ್ಯಾರ್ಥಿಗಳ ಸಂವಾದವು ಅನೇಕ ಹೊಸ ಹೊಳಹುಗಳನ್ನು ನೀಡುವಂತಹುದಾಗಿತ್ತು. ಪ್ರೊ. ಪೀಟರ್ ಹೋಟನ್, ಪ್ರೊ. ಮೇರಿ–ಆನ್ ಬೋರ್ನ್‌ಸ್ಟಿ, ಪ್ರೊ. ಜೇಮ್ಸ್ ವಿಂಕ್ಲರ್ ಮೊದಲಾದವರು ಕ್ಯಾನ್ಸರ್ ಕುರಿತಾದ ಹಲವು ಮಜಲುಗಳ ಸಂಶೋಧನೆಯ ಬಗ್ಗೆ ಸಂವಾದ ನಡೆಸಿ ಸಂದೇಹಗಳನ್ನು ಪರಿಹರಿಸಿದರು. ಇದಲ್ಲದೆ, ಐ.ಕ್ಯೂ.ಎ.ಸಿ.ಯು ಬೌದ್ಧಿಕ ಆಸ್ತಿ ಹಕ್ಕುಗಳು, ನ್ಯಾಕ್‌ನ ಹೊಸ ಮಾನ್ಯತಾ ವಿಧಾನ ಹಾಗೂ ಅತ್ಯಾಧುನಿಕ ಬೋಧನಾ ವಿಧಿವಿಧಾನಗಳ ಬಗ್ಗೆ ಕಾರ್ಯಾಗಾರಗಳನ್ನು ಆಯೋಜಿಸಿತ್ತು.

**ಅಧ್ಯಯನ ಪೀಠಗಳು**

ಜಾಗತಿಕ ಮಟ್ಟದಲ್ಲಿ ವಿದ್ಯಾರ್ಥಿಗಳು ಶೈಕ್ಷಣಿಕ ಉನ್ನತಿ ಮತ್ತು ಕೌಶಲ್ಯಗಳನ್ನು ರೂಢಿಸಿಕೊಳ್ಳಲು ಅತ್ಯಗತ್ಯವಾದ ಎಲ್ಲಾ ಅಂಶಗಳ ಬಗ್ಗೆ ತುಮಕೂರು ವಿಶ್ವವಿದ್ಯಾನಿಲಯವು ಗಮನ ಹರಿಸಿದೆ. ಸಾಂಪ್ರದಾಯಿಕ ತರಗತಿಯ ಚಟುವಟಿಕೆಗಳ ಸೀಮೆಯನ್ನು ಮೀರಿ, ಸಂಶೋಧನೆಯ ಪರಿಧಿಯಲ್ಲಿ ವೈಜ್ಞಾನಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬಹುಶಿಸ್ತೀಯ ಸಮನ್ವಯತೆಯನ್ನು ಸಾಧಿಸಲು ಅನುವು ಮಾಡಿಕೊಡುವ ಪರಿಸರವನ್ನು ನಿರ್ಮಿಸಲಾಗಿದೆ. ಅಧ್ಯಯನ ಪೀಠಗಳನ್ನು ಸ್ಥಾಪಿಸಿ, ವಿದ್ಯಾರ್ಥಿಗಳು ಸಮಕಾಲೀನ ಮತ್ತು ಮಹತ್ವದ ವಿಷಯಗಳ ಬಗ್ಗೆ ಆಳವಾಗಿ ಅನ್ವೇಷಣೆ ನಡೆಸಲು ಅಗತ್ಯವಾದ ಶೈಕ್ಷಣಿಕ ಸಂಪನ್ಮೂಲಗಳನ್ನು ಒದಗಿಸಲಾಗಿದೆ. ವಿವಿಧ ಅಧ್ಯಯನ ಪೀಠಗಳು ಪ್ರಸಕ್ತ ವರ್ಷದಲ್ಲಿ ಆಯೋಜಿಸಿರುವ ಪ್ರಮುಖ ಕಾರ್ಯಕ್ರಮಗಳ ವಿವರ ಹೀಗಿದೆ:

- ಪ್ರೊ. ಎಂ.ಡಿ. ನಂಜುಂಡಸ್ವಾಮಿ ಅಧ್ಯಯನ ಪೀಠವು ಭಾರತದಲ್ಲಿ ಕೃಷಿ, ಪರಿಸರ ಮತ್ತು ಸುಸ್ಥಿರ ಅಭಿವೃದ್ಧಿ: ವಿಧಾನಗಳು, ಸಮಸ್ಯೆಗಳು ಮತ್ತು ಮುಂದಿನ ಹಾದಿ ಎಂಬ ವಿಷಯದ ಕುರಿತು ರಾಷ್ಟ್ರೀಯ ಸಮ್ಮೇಳನ ಆಯೋಜಿಸಿತ್ತು.
- ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಪೀಠವು ಇಪ್ಪತ್ತನೇ ಶತಮಾನದ ಮಹಾನ್ ಚಿಂತಕ ಡಾ. ಬಿ.ಆರ್. ಅಂಬೇಡ್ಕರ್ ಅವರಿಗಾಗಿಯೇ ಸಮರ್ಪಿತವಾಗಿದೆ. ಡಾ. ಅಂಬೇಡ್ಕರರ ವೈಚಾರಿಕ ನೆಲೆಗಟ್ಟುಗಳ ಮೂಲಕ ವಿದ್ಯಾರ್ಥಿಗಳಲ್ಲಿ ರಾಷ್ಟ್ರ ನಿರ್ಮಾಣದ ಪರಿಕಲ್ಪನೆಯನ್ನು ಬಿತ್ತುವುದು ಈ ಪೀಠದ ಆಶಯವಾಗಿದೆ. ಡಾ. ಅಂಬೇಡ್ಕರ್ ಅವರ ಆದರ್ಶಗಳನ್ನು ಮೈಗೂಡಿಸಿಕೊಂಡು ಆರ್ಥಿಕತೆ, ರಾಜ್ಯಶಾಸ್ತ್ರ, ಧರ್ಮ, ತತ್ತ್ವಶಾಸ್ತ್ರ, ಸಂವಿಧಾನ, ಶಿಕ್ಷಣ, ಸಮಾಜಕಾರ್ಯ, ಮಾನವ ಹಕ್ಕುಗಳು ಮೊದಲಾದ ಕ್ಷೇತ್ರಗಳನ್ನು ಸಂಶೋಧನೆ ನಡೆಸಲು ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡುವುದು ಈ ಪೀಠದ ಪ್ರಮುಖ ಉದ್ದೇಶವಾಗಿದೆ. ಅದರಂತೆ ಪೀಠವು ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿತ್ತು. ದಲಿತ ಸಂಸ್ಕೃತಿ ಮತ್ತು ಸಾಹಿತ್ಯದ ಹೊಸ ದಿಗಂತಗಳು ರಾಷ್ಟ್ರೀಯ ಸಮ್ಮೇಳನ; ಡಾ. ಬಿ. ಆರ್. ಅಂಬೇಡ್ಕರ್ ಅವರು 128ನೇ ಜನ್ಮ ದಿನಾಚರಣೆ; "ಒಂದು ದೇಶ ಒಂದು ಸಂವಿಧಾನ" ಆಶಯದೊಂದಿಗೆ ಗಣರಾಜ್ಯೋತ್ಸವ ಆಚರಣೆ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ ಪರಿನಿರ್ವಾಣ ದಿನಾಚರಣೆ ಆ ಅಧ್ಯಯನ ಪೀಠವು ಆಯೋಜಿಸಿದ ಕಾರ್ಯಕ್ರಮಗಳಲ್ಲಿ ಪ್ರಮುಖವಾದವು.

- ಡಾ. ಬಾಬು ಜಗಜೀವನರಾಮ್ ಅಧ್ಯಯನ ಪೀಠವು ದೇಶದ ಮಾದರಿ ನಾಯಕರಲ್ಲೊಬ್ಬರಾದ ಬಾಬು ಜಗಜೀವನರಾಮ್ ಅವರ ಬಗ್ಗೆ ಅಧ್ಯಯನ ಮತ್ತು ಸಂಶೋಧನೆಗೆ ಮೀಸಲಾಗಿದೆ. ಜಗಜೀವನರಾಮ್ ಅವರ ಜೀವನ, ಸಾಹಿತ್ಯ, ರಾಜಕೀಯ ಬದುಕು ಮತ್ತು ರಾಷ್ಟ್ರದ ಪ್ರಗತಿಗೆ ಅವರು ನೀಡಿದ ಕೊಡುಗೆಯ ಬಗ್ಗೆ ಪೀಠವು ಅಧ್ಯಯನಕ್ಕೆ ಅನುವು ಮಾಡಿಕೊಟ್ಟಿದೆ. ಪೀಠವು ಡಾ. ಬಾಬು ಜಗಜೀವನರಾಮ್ ಅವರ ಸಮಕಾಲೀನ ಪ್ರಸ್ತುತತೆ ಎಂಬ ವಿಷಯದ ಕುರಿತು ಶ್ರೀ ಅಗ್ರಹಾರ ಕೃಷ್ಣಮೂರ್ತಿ ಅವರಿಂದ ವಿಶೇಷ ಉಪನ್ಯಾಸವನ್ನು ಹಾಗೂ ಕೆ.ಬಿ.ಸಿದ್ದಯ್ಯ: ಬದುಕು, ಸಾಹಿತ್ಯ ಮತ್ತು ಚಳುವಳಿ ಕುರಿತು ಕಮ್ಮಟವನ್ನು ಆಯೋಜಿಸಿತ್ತು.
- ಕುವೆಂಪು ಅಧ್ಯಯನ ಪೀಠವು ಕುವೆಂಪು ಜನ್ಮದಿನಾಚರಣೆ ಮತ್ತು ಕುವೆಂಪು ಓದು ಅಭಿಯಾನ ಎಂಬ ವಿಷಯದ ಕುರಿತು ಕುವೆಂಪು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಚಿದಾನಂದ ಗೌಡ ಅವರಿಂದ ವಿಶೇಷ ಉಪನ್ಯಾಸವನ್ನು ಹಾಗೂ ಪೂರ್ಣದೃಷ್ಟಿ: ಕುವೆಂಪು ಕಣ್ಣಲ್ಲಿ ಎಂಬ ವಿಷಯದ ಕುರಿತು ಖ್ಯಾತ ಕನ್ನಡ ಸಾಹಿತಿ ಮತ್ತು ಜೈನ ಸಾಹಿತ್ಯ ವಿದ್ವಾಂಸರಾದ ಹಂಪ ನಾಗರಾಜಯ್ಯ ಅವರಿಂದ ವಿಶೇಷ ಉಪನ್ಯಾಸ ಆಯೋಜಿಸಿತ್ತು.
- ದೇವರಾಜ ಅರಸು ಅಧ್ಯಯನ ಪೀಠವು ಆಯೋಜಿಸಿದ್ದ ದೇವರಾಜ ಅರಸು ಜನ್ಮದಿನಾಚರಣೆ ಅಂಗವಾಗಿ ಪ್ರೊ. ಬರಗೂರು ರಾಮಚಂದ್ರಪ್ಪ ಅವರು ಕರ್ನಾಟಕದಲ್ಲಿ ಸಾಮಾಜಿಕ ನ್ಯಾಯಕ್ಕೆ ಅರಸು ಕೊಡುಗೆಗಳು ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.
- ಜಿ.ಎಸ್. ಪರಮಶಿವಯ್ಯ ಅಧ್ಯಯನ ಪೀಠವು ಪ್ರೊ. ರವೀಂದ್ರನಾಥ್ ಕದಮ್ ಅವರಿಂದ ಪರಿಸರ ಅಸಮತೋಲನ ಕುರಿತು, ಶ್ರೀ ಮಲ್ಲಿಕಾರ್ಜುನ ಹೊಸಪಾಳ್ಯ ಅವರಿಂದ ಜಲ ಅಭಿಜ್ಞಾನ ವಿಷಯದ ಕುರಿತು ಹಾಗೂ ಕಾವೇರಿ ನೀರಾವರಿ ನಿಗಮದ ಶ್ರೀ ಜಯಪ್ರಕಾಶ್ ಅವರಿಂದ ನೀರ ಕಥನಗಳ ಸ್ಮೃತಿ ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸಗಳನ್ನು ಆಯೋಜಿಸಿತ್ತು. ನೀರಾವರಿ ಸಂಬಂಧಿತ ಯೋಜನೆಗಳ ಕುರಿತು ಸಂಶೋಧನೆ ಕೈಗೊಂಡು ತುಮಕೂರು ಜಿಲ್ಲೆಯನ್ನು ಕಾಡುತ್ತಿರುವ ನೀರಾವರಿ ಸಮಸ್ಯಗಳಿಗೆ ಪರಿಹಾರ ಕಂಡುಕೊಳ್ಳುವ ಸಲುವಾಗಿ ಹಾಗೂ ಡಿಜಿಟಲ್ ಗ್ರಂಥಾಲಯವೊಂದನ್ನು ಸ್ಥಾಪಿಸಲು ಜಮೀನು ಮಂಜೂರು ಮಾಡಲು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಗಿದೆ. ಇದು ಸಾಕಾರಗೊಂಡಿದ್ದೇ ಆದಲ್ಲಿ ಈ ಪೀಠವು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡುವುದು ಎಂಬ ಭರವಸೆಯಿದೆ.
- ನಾಡಪ್ರಭು ಕೆಂಪೇಗೌಡ ಪೀಠವು ಕೆಂಪೇಗೌಡ ಜನ್ಮದಿನಾಚರಣೆಯನ್ನು ಹಮ್ಮಿಕೊಂಡಿತ್ತು. ಮಂಡ್ಯದ ಕರ್ನಾಟಕ ಸಂಘದ ಪ್ರೊ. ಜಯಪ್ರಕಾಶ ಅವರು ಉಪನ್ಯಾಸ ನೀಡಿದರು.
- ಜುಂಜಪ್ಪ ಅಧ್ಯಯನ ಪೀಠವು ಡಾ. ಎಚ್. ಆರ್. ರೇಣುಕ ಅವರು ಬರೆದಿರುವ "ಕಾಡುಗೊಲ್ಲ ಮಹಿಳೆ: ಸಾಂಸ್ಕೃತಿಕ ಸಂಕಥನ" ಕೃತಿಯ ಬಿಡುಗಡೆಯ ಸಂದರ್ಭದಲ್ಲಿ ಡಾ. ಜಿ.ವಿ. ಆನಂದಮೂರ್ತಿ ಅವರಿಂದ ವಿಶೇಷ ಉಪನ್ಯಾಸ ಆಯೋಜಿಸಿತ್ತು.

**ಮಹಿಳಾ ಅಧ್ಯಯನ ಕೇಂದ್ರ**

ಸಮಾನತೆ ಮತ್ತು ಮಹಿಳಾ ಸಬಲೀಕರಣದಲ್ಲಿ ವಿಶ್ವವಿದ್ಯಾನಿಲಯದ ಮಹಿಳಾ ಅಧ್ಯಯನ ಕೇಂದ್ರವು ಪ್ರಮುಖ ಪಾತ್ರ ವಹಿಸಿದೆ. ಲಿಂಗ ಸಮಾನತೆ, ಮಹಿಳಾ ಸಬಲೀಕರಣದ ಮೇಲೆ ಒತ್ತು ಕೊಡುವುದಲ್ಲದೆ ಮಹಿಳೆಯರ ಅವಶ್ಯಕತೆಗಳ ಬಗ್ಗೆ ಕೇಂದ್ರವು ವಿಶೇಷ ಆಸಕ್ತಿ ವಹಿಸಿದೆ. ಸಮಾಜದ ಅತೀ ಸೌಲಭ್ಯವಂಚಿತ ವರ್ಗಗಳ ಮಹಿಳೆಯರನ್ನೂ ಒಳಗೊಂಡಂತೆ ಎಲ್ಲಾ ವರ್ಗಗಳ ಮಹಿಳೆಯರ ಸಮಸ್ಯೆಗಳ ಬಗ್ಗೆ ಕೇಂದ್ರವು ವಿಶೇಷ ಗಮನ ಹರಿಸಿದೆ. ಉದ್ಯೋಗಸ್ಥ ಮಹೆಳೆಯರ ತಲ್ಲಣಗಳು: ಅವಲೋಕನ ಮತ್ತು ಪರಿಹಾರೋಪಾಯಗಳು ಎಂಬ ವಿಷಯದ ಕುರಿತು ಶ್ರೀಮತಿ ಶುಭಾ ಕಲ್ಯಾಣ್ ಅವರೊಂದಿಗೆ ಸಂವಾದವನ್ನು ಕೇಂದ್ರವು ಆಯೋಜಿಸಿತ್ತು.

**ವಿಶೇಷ ಘಟಕ ಯೋಜನೆ / ಗಿರಿಜನ ಉಪಯೋಜನೆ (ಎಸ್.ಸಿ.ಪಿ./ಟಿ.ಎಸ್.ಪಿ.)**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗಾಗಿ ಕರ್ನಾಟಕ ಸರ್ಕಾರವು ವಿಶೇಷ ಘಟಕ ಯೋಜನೆ / ಗಿರಿಜನ ಉಪಯೋಜನೆಯಡಿ ಅನುದಾನವನ್ನು ನೀಡಿದೆ. ಈ ಯೋಜನೆಗಳ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗಾಗಿ ವಿಶ್ವವಿದ್ಯಾನಿಲಯವು ಕಂಪ್ಯೂಟರ್ ಬಳಕೆ, ಇಂಗ್ಲಿಷ್ ಸಂವಹನ ಕೌಶಲ್ಯ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಮೊದಲಾದ ಸಾಮರ್ಥ್ಯವರ್ಧನಾ ಕಾರ್ಯಕ್ರಮಗಳನ್ನು ನಿಯತವಾಗಿ

ಆಯೋಜಿಸುತ್ತಿದೆ. ಯುಜಿಸಿ ಎನ್.ಇ.ಟಿ./ಕೆ–ಸೆಟ್ ಪರೀಕ್ಷೆಗಳಿಗೆ ನುರಿತ ವಿಷಯ ಪರಿಣತರಿಂದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

**ವಿಸ್ತರಣಾ ಚಟುವಟಿಕೆಗಳು**

ಉನ್ನತ ವಿಚಾರಗಳನ್ನು ವಿದ್ಯಾರ್ಥಿಗಳಲ್ಲಿ, ಬೋಧಕ/ಬೋಧಕೇತರರಲ್ಲಿ ಮೈಗೂಡಿಸುವ ಸಲುವಾಗಿ ವಿಶ್ವವಿದ್ಯಾನಿಲಯವು ವಿಸ್ತರಣಾ ಚಟುವಟಿಕೆಗಳಿಗೆ ವಿಶೇಷ ಆದ್ಯತೆ ನೀಡಿದೆ. ಜಾತಿ–ಮತಗಳ ಭೇದಗಳನ್ನು ಮೀರಿ ವಿಶ್ವಮಾನವರಾಗಲು ಎಡೆಮಾಡಿಕೊಡುವುದೇ ವಿಶ್ವವಿದ್ಯಾನಿಲಯಗಳ ಉದ್ದೇಶ ಎಂಬ ಅರಿವನ್ನು ಮೂಡಿಸುವಲ್ಲಿ ವಿಸ್ತರಣಾ ಚಟುವಟಿಕೆಗಳು ಯಶಸ್ವಿಯಾಗಿವೆ. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ರಾಮುಖ್ಯತೆಯುಳ್ಳ ದಿನಾಚರಣೆಗಳು, ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಏಕತೆಯ ಸತ್ವವನ್ನು ತುಂಬುವ ಪ್ರಯತ್ನವನ್ನು ಈ ಚಟುವಟಿಕೆಗಳು ಮಾಡುತ್ತಿವೆ. ಬೋಧಕರು ಮತ್ತು ವಿದ್ಯಾರ್ಥಿಗಳಲ್ಲಿ ದೇಶಭಕ್ತಿಯನ್ನು ಈ ದಿನಾಚರಣೆಗಳು ಜಾಗೃತಗೊಳಿಸುತ್ತವೆ. ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ, ಗಾಂಧೀ ಜಯಂತಿ, ಅಂಬೇಡ್ಕರ್ ಜಯಂತಿ ಮುಂತಾದ ಪ್ರಮುಖ ದಿನಾಚರಣೆಗಳನ್ನು ಕೆಲಸದ ದಿನವೆಂದು ಪರಿಗಣಿಸಲಾಗಿದ್ದು ಇದರಿಂದ ಇಂಥಾ ದಿನಗಳ ಆಚರಣೆಗೆ ಅಗತ್ಯವಾದ ಗಾಂಭೀರ್ಯವು ದೊರಕಿದೆ.

ವಿಶ್ವವಿದ್ಯಾನಿಲಯದ ರೆಡ್‌ಕ್ರಾಸ್ ಘಟಕವು ಮೌಲ್ಯಗಳು, ಹಕ್ಕುಗಳು, ಕರ್ತವ್ಯಗಳು ಮತ್ತು ನಾಗರಿಕರ ಜವಾಬ್ದಾರಿಯ ವಿಷಯಗಳ ಬಗ್ಗೆ ಅತಿ ಹೆಚ್ಚಿನ ಆದ್ಯತೆ ನೀಡಿದೆ. ಈ ಘಟಕವು ಕಾರ್ಯಕ್ರಮಾಧಿಕಾರಿಗಳು ಹಾಗೂ ವಿದ್ಯಾರ್ಥಿ ಸ್ವಯಂಸೇವಕರಿಗೆ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಹಾಗೂ ಸ್ಕೌಟ್ ಮತ್ತು ಗೈಡ್ಸ್‌ಗಳಿಗೆ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿತ್ತು.

ಕನ್ನಡ ಮತ್ತು ಇಂಗ್ಲಿಷ್ ವಿಭಾಗಗಳು ಬೋಧಕರಿಗೆ ಇಂಗ್ಲಿಷ್ ಭಾಷೆಯ ಬೋಧನೆ, ಮತ್ತು ಬೋಧಕರಾಗಿ ವಿದ್ಯಾರ್ಥಿಗಳು ಎಂಬ ವಿಶಿಷ್ಟ ಕಾರ್ಯಕ್ರಮಗಳನ್ನು ಹೊಂದಿವೆ. ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿರುವ ಪರಿಸರಕ್ಕನುಗುಣವಾಗಿ ಬೋಧನಾ ಕೌಶಲ್ಯಗಳನ್ನು ಭವಿಷ್ಯದ ಬೋಧಕರಾದ ಇಂದಿನ ವಿದ್ಯಾರ್ಥಿಗಳು ರೂಢಿಸಿಕೊಳ್ಳಬೇಕು ಎಂಬ ಉದ್ದೇಶದಿಂದ ಪ್ರಾಥಮಿಕ ಶಾಲೆಗಳಲ್ಲಿ ತರಗತಿಗಳನ್ನು ತೆಗೆದುಕೊಳ್ಳಲು ಅನುವು ಮಾಡಿಕೊಡಲಾಗಿದೆ. ಕನ್ನಡ ವಿಭಾಗವು ನಡೆಸುವ 'ಬೋಧಕರಾಗಿ ವಿದ್ಯಾರ್ಥಿಗಳು' ಎಂಬ ಕಾರ್ಯಕ್ರಮವು ವಿದ್ಯಾರ್ಥಿಗಳು ಬೋಧಕರ ಪಾತ್ರ ವಹಿಸಿ ಅವರ ಜವಾಬ್ದಾರಿಗಳನ್ನು ಅರಿತು ನಿರ್ವಹಿಸಲು ಅಪೂರ್ವ ಅವಕಾಶವನ್ನು ಮಾಡಿಕೊಟ್ಟಿದೆ.

ವಿಜ್ಞಾನ ವಿಭಾಗಗಳೂ ಕೂಡ "ವಿಜ್ಞಾನದಿಂದ ಸಮಾಜದೆಡೆಗೆ" ಮೊದಲಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ನಡೆಸುವುದರ ಮೂಲಕ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ವಿದ್ಯಾರ್ಥಿಗಳ ಜವಾಬ್ದಾರಿಯ ಬಗ್ಗೆ ಅರಿವು ಮೂಡಿಸುತ್ತಿವೆ. ಇದೊಂದು ಆಸಕ್ತಿಕರ ಕಾರ್ಯಕ್ರಮ. ತಮ್ಮ ವಿಜ್ಞಾನದ ಅರಿವನ್ನು ಪ್ರಚಲಿತ ಸಾಮಾಜಿಕ ಸಮಸ್ಯೆಗಳ ನಿವಾರಣೆಯೆಡೆಗೆ ಬಳಸಿಕೊಳ್ಳುವ ಜ್ಞಾನ ಮತ್ತು ಕೌಶಲ್ಯವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವ ಗುರಿ ಈ ಕಾರ್ಯಕ್ರಮದ್ದು. ವೈಜ್ಞಾನಿಕ ಅರಿವಿನ ತಳಹದಿಯಲ್ಲಿ ಸಾಮಾಜಿಕ ಸಮಸ್ಯೆಗಳನ್ನು ವಿಶ್ಲೇಷಿಸುವ ಪ್ರವೃತ್ತಿಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಲು ಒಂದು ಉತ್ತಮ ವೇದಿಕೆಯನ್ನು ಒದಗಿಸುವುದು ಈ ಕಾರ್ಯಕ್ರಮದ ಗುರಿ.

"ರೀಚ್ ದ ಅನ್‌ರೀಚ್ಡ್" ಎಂಬ ಕಾರ್ಯಕ್ರಮವು ಸಮಾಜದ ಅತಿ ಹಿಂದುಳಿದ ಸೌಲಭ್ಯವಂಚಿತ ವರ್ಗಗಳ ಬಗ್ಗೆ ವಿದ್ಯಾರ್ಥಿಗಳಿಗೆ ಪ್ರತ್ಯಕ್ಷಾನುಭವ ನೀಡುವ ಕಾರ್ಯಕ್ರಮ. ಸಾಮಾಜಿಕ ಕಾರ್ಯಕರ್ತರ ನಿಜ ಉದ್ದೇಶವಾದ "ಜನರು ತಮಗೆ ತಾವೇ ನೆರವಾಗಿಕೊಳ್ಳಲು ನೆರವಾಗಿ" ಎಂಬ ಆಶಯಕ್ಕೆ ಈ ಕಾರ್ಯಕ್ರಮ ಇಂಬು ನೀಡಿದೆ.

ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆ (ರಾ.ಸೇ.ಯೋ.) ಘಟಕವು ವಿದ್ಯಾರ್ಥಿಗಳಲ್ಲಿ "ಪರಿಸರ ಪ್ರಜ್ಞೆ"ಯನ್ನು ಮೂಡಿಸುವಲ್ಲಿ ಸಕ್ರಿಯ ಪಾತ್ರ ವಹಿಸಿ, ವಿಶೇಷ ಕೊಡುಗೆ ನೀಡಿದೆ. ನಮ್ಮ ಸುತ್ತಮುತ್ತಲಿನ ಪರಿಸರದ ಸಂರಕ್ಷಣೆಯ ಬಗ್ಗೆ ನಮಗೆ ಅತೀವ ಕಾಳಜಿಯಿದೆ. ಈ ನಿಟ್ಟಿನಲ್ಲಿ ತಮ್ಮ ಸ್ವಯಂಸೇವಕರ ಮೂಲಕ ತುರ್ತು ನಿಗಾ ಅವಶ್ಯಕವಿರುವ ಕಾಗದದ ಮಿತಬಳಕೆ, ಪಾಲಿಥೀನ್ ಮತ್ತು ಪ್ಲಾಸ್ಟಿಕ್ ಬಳಕೆ ಮುಂತಾದ ಗಂಭೀರ ಅಂಶಗಳನ್ನು ರಾ.ಸೇ.ಯೋ. ಘಟಕವು ಗುರುತಿಸಿದೆ. "ರಿಯೂಸ್, ರೆಡ್ಯೂಸ್ ಅಂಡ್ ರಿಸೈಕಲ್" ಎಂಬ ವಿಚಾರದ ಬಗ್ಗೆ ವಿದ್ಯಾರ್ಥಿಗಳು ಮತ್ತು ಬೋಧಕರಲ್ಲಿ ರಾ.ಸೇ.ಯೋ. ಘಟಕವು ಜಾಗೃತಿ ಮೂಡಿಸಿದೆ. ಈ ಘಟಕವು ವೈವಿಧ್ಯಮಯ ರೀತಿಯಲ್ಲಿ ಪರಿಸರ ಜಾಗೃತಿ ಕಾರ್ಯಕ್ರಮಗಳನ್ನು

ಹಮ್ಮಿಕೊಂಡಿರುವುದರಿಂದಲೇ ವಿಶ್ವವಿದ್ಯಾನಿಲಯದ ಆವರಣದಲ್ಲಿ ಅಶೋಕ, ಗುಲ್‌ಮೊಹರ್, ಕದಮ್, ಮೌಲ್ಸರಿ, ಬೇವು ಮೊದಲಾದ ಸಸ್ಯಪ್ರಭೇದಗಳು ನೆಲೆಗೊಂಡಿವೆ.

**ಹೊಸ ಕ್ಯಾಂಪಸ್ ಮತ್ತು ಸೌಕರ್ಯಾಭಿವೃದ್ಧಿ**

- ತುಮಕೂರು ವಿಶ್ವವಿದ್ಯಾನಿಲಯಕ್ಕೆ ಹೊಸ ಕ್ಯಾಂಪಸ್ಸನ್ನು ಕಟ್ಟುವ ಮಹತ್ತ್ವಾಕಾಂಕ್ಷಿ ಯೋಜನೆಯು ಈಗಾಗಲೇ ಪ್ರಗತಿಯಲ್ಲಿದ್ದು, ತುಮಕೂರಿನ ಹೊರವಲಯದಲ್ಲಿ ಕುಣಿಗಲ್ ರಸ್ತೆಯ ಬಿದರಕಟ್ಟೆಯಲ್ಲಿ ಇನ್ನೂರ ನಲವತ್ತು ಎಕರೆ ಪ್ರದೇಶದಲ್ಲಿ ಈ ಕಾರ್ಯ ಭರದಿಂದ ಸಾಗಿದೆ.
- 17.5 ಕೋಟಿ ರೂಪಾಯಿ ವೆಚ್ಚದಲ್ಲಿ ವಿದ್ಯಾರ್ಥಿನಿಲಯಗಳ ನಿರ್ಮಾಣ ಕಾರ್ಯವು ಬಹುತೇಕ ಪೂರ್ಣಗೊಂಡಿದ್ದು, ಶೀಘ್ರದಲ್ಲಿಯೇ ಅವು ಕಾರ್ಯಾರಂಭ ಮಾಡಲಿವೆ.
- ವಿವಿಧ ಅಧ್ಯಯನ ವಿಭಾಗಗಳಿಗೆ ಕಟ್ಟಡಗಳ ನಿರ್ಮಾಣ ಪ್ರಗತಿಯಲ್ಲಿದೆ.
- 2.5 ಕೋಟಿ ರೂಪಾಯಿ ವೆಚ್ಚದಲ್ಲಿ ಮುಖ್ಯದ್ವಾರ ನಿರ್ಮಾಣವು ಪೂರ್ಣಗೊಂಡಿದೆ.
- ಸಿರಾದಲ್ಲಿ 25 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ 10 ಕೋಟಿ ರೂಪಾಯಿ ವೆಚ್ಚದಲ್ಲಿ ಸ್ನಾತಕೋತ್ತರ ಕೇಂದ್ರದ ನಿರ್ಮಾಣ ಪೂರ್ಣಗೊಂಡಿದ್ದು, ಶೀಘ್ರದಲ್ಲಿಯೇ ಕಾರ್ಯಾರಂಭಗೊಳ್ಳಲಿದೆ.
- ವಿಶ್ವವಿದ್ಯಾನಿಲಯ ಕಲಾ ಕಾಲೇಜಿನ ಮೈದಾನವನ್ನು ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಉನ್ನತೀಕರಿಸಿ ಅದರ ಸೌಂದರ್ಯವನ್ನು ಹೆಚ್ಚಿಸಿದೆ.

**ಪ್ರಸಾರಾಂಗ**

ವಿಶ್ವವಿದ್ಯಾನಿಲಯದ ಪ್ರಕಟಣಾ ವಿಭಾಗವಾದ ಪ್ರಸಾರಾಂಗವು ಪ್ರಾಗ್ಮಾಟಾ (ಮಾನವಿಕ ವಿಜ್ಞಾನಗಳ ನಿಯತಕಾಲಿಕೆ) ಮತ್ತು ಲೋಕಜ್ಞಾನ (ಸಾಂಸ್ಕೃತಿಕ ಅಧ್ಯಯನ ನಿಯತಕಾಲಿಕೆ) ಎಂಬ ಎರಡು ವಿದ್ವತ್ಪೂರ್ಣ ನಿಯತಕಾಲಿಕೆಗಳನ್ನು ಪ್ರಕಟಿಸುತ್ತಿದೆ.

**ಪರಿಹಾರ ನಿಧಿ**

ಸಾಮಾಜಿಕ ಬಿಕ್ಕಟ್ಟುಗಳಿಗೆ ತುಮಕೂರು ವಿಶ್ವವಿದ್ಯಾನಿಲಯವು ಸದಾ ಸ್ಪಂದಿಸಿದೆ ಎಂಬುದನ್ನು ನಾನು ಈ ಸಂದರ್ಭದಲ್ಲಿ ಉಲ್ಲೇಖಿಸಲು ಇಚ್ಛಿಸುತ್ತೇನೆ. 2019ರ ಮಾನ್ಸೂನ್ ಅವಧಿಯಲ್ಲಿ ಅತಿವೃಷ್ಟಿಯಿಂದಾಗಿ ತತ್ತರಿಸಿದ ಉತ್ತರ ಕರ್ನಾಟಕದ ಪರಿಸ್ಥಿತಿ ಎಷ್ಟು ಚಿಂತಾಜನಕವಾಗಿತ್ತೆಂದರೆ ತಮ್ಮ ನೆಲೆಗಳನ್ನು ಕಳೆದುಕೊಂಡು ನಿರಾಶ್ರಿತರಾದ ಜನಕ್ಕೆ ಸುರಕ್ಷಿತ ಸ್ಥಳಗಳಲ್ಲಿ ಆಶ್ರಯತಾಣಗಳನ್ನು ನಿರ್ಮಿಸಬೇಕಾಯಿತು. ನಿರಾಶ್ರಿತರಾದ ಜನರ ದುಸ್ಥಿತಿಗೆ ಸ್ಪಂದಿಸಿದ ವಿಶ್ವವಿದ್ಯಾನಿಲಯವು ಸುಮಾರು 6 ಲಕ್ಷ ರೂಪಾಯಿಗಳ ಪರಿಹಾರ ಧನವನ್ನು ಸಂಗ್ರಹಿಸಿ, ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ನೀಡಲಾಯಿತು.

**ಹೊಸ್ ಕೋರ್ಸ್‌ಗಳು**

ಪ್ರಸ್ತುತ ಇರುವ ಇಪ್ಪತ್ತು ಕೋರ್ಸ್‌ಗಳಿಗೆ ಈ ಬಾರಿ ಎರಡು ಹೊಸ ಕೋರ್ಸ್‌ಗಳನ್ನು ಸೇರ್ಪಡಿಸಲಾಗಿದೆ: ಎಂ.ಕಾಂ. (ಮಾಹಿತಿ ವ್ಯವಸ್ಥೆ) ಮತ್ತು ಎಂ.ಎಸ್ಸಿ. (ಸೂಕ್ಷ್ಮಜೀವಶಾಸ್ತ್ರ). ವಿದ್ಯಾರ್ಥಿಗಳಿಗೆ ಹೆಚ್ಚಿನ ಕಲಿಕೆಯ ಅವಕಾಶಗಳನ್ನು ಈ ಹೊಸ ಕೋರ್ಸ್‌ಗಳು ನೀಡುವ ಭರವಸೆಯಿದೆ.

**ಪರೀಕ್ಷಾ ಸುಧಾರಣೆಗಳು**

ಪರೀಕ್ಷಾ ನಿರ್ವಹಣಾ ವ್ಯವಸ್ಥೆಯಂಥ ಆಧುನಿಕ ಸುಧಾರಣಾ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳುವ ಮೂಲಕ ನಮ್ಮ ಪರೀಕ್ಷಾಂಗವು ಸಮಕಾಲೀನ ಅಗತ್ಯಕ್ಕೆ ತಕ್ಕಂತೆ ಮಾರ್ಪಾಡುಗೊಂಡಿದೆ. ಪರೀಕ್ಷಾ ಸಂಬಂಧಿ ಚಟುವಟಿಕೆಗಳ ಸಮರ್ಥ ನಿರ್ವಹಣೆಗೆ ಇದು ಅವಶ್ಯಕ. ಆಂತರಿಕ ಮೌಲ್ಯಮಾಪನ ಅಂಕಗಳಿಗೆ ದ್ವಿದಾಖಲು ಪದ್ಧತಿ, ಪರೀಕ್ಷಾ ವೇಳಾಪಟ್ಟಿ, ವಿದ್ಯಾರ್ಥಿಗಳ ದಾಖಲೆಗಳು ನಿರ್ವಹಣೆ ಮೊದಲಾದವನ್ನು ಈ ವ್ಯವಸ್ಥೆಯಲ್ಲಿ ಸುಗಮವಾಗಿ ನಿರ್ವಹಿಸಬಹುದಾಗಿವೆ.

ಇದಲ್ಲದೆ ಸ್ನಾತಕ ಪದವಿ ಪರೀಕ್ಷೆಗಳನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸಲು ಅಗತ್ಯ ಸುಧಾರಣೆಗಳನ್ನು ಜಾರಿಗೊಳಿಸಲಾಗಿದೆ.

**ಭವಿಷ್ಯದ ಕನಸುಗಳು**

ನಾನು ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರ, ಗೌರವಾನ್ವಿತ ಸಚಿವರುಗಳು, ತುಮಕೂರಿನ ಲೋಕಸಭಾ ಸದಸ್ಯರುಗಳು, ಶಾಸಕರುಗಳು, ವಿಧಾನ ಪರಿಷತ್ ಸದಸ್ಯರುಗಳಿಗೆ ಅವರು ಈ ವಿಶ್ವವಿದ್ಯಾನಿಲಯದ ಬೆಳವಣಿಗೆಗೆ ನೀಡುತ್ತಿರುವ ಬೆಂಬಲ ಮತ್ತು ಸಹಕಾರಕ್ಕಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನಮ್ಮ ಭವಿಷ್ಯದ ಕನಸುಗಳನ್ನು ತಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ.

1. ಉನ್ನತ ಶಿಕ್ಷಣದ ನಿಜವಾದ ಗುರಿಯ ಬಗ್ಗೆ ಇರುವ ಸಂಕುಚಿತ ದೃಷ್ಟಿಯನ್ನು ಹೋಗಲಾಡಿಸುವ ಸಲುವಾಗಿ ಬೋಧನೆ–ಕಲಿಕೆಯಲ್ಲಿ ನಾವೀನ್ಯತೆಯ ಉತ್ತೇಜನೆಗೆ ಅವಕಾಶ ಮಾಡಿಕೊಡುವುದು.
2. ರಾಷ್ಟ್ರವನ್ನು ಜ್ಞಾನ ಸಮಾಜವಾಗಿ ಪರಿವರ್ತಿಸಲು ಮಾನವ ಸಂಪನ್ಮೂಲವನ್ನು ಶಿಕ್ಷಿತರೂ, ಕೌಶಲ್ಯಭರಿತರನ್ನಾಗಿ ಮಾಡುವುದು.
3. ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಗೆ ಅಗತ್ಯವಿರುವ ಕೈಗಾರಿಕೆಗಳ ಜೊತೆ ಸಹಭಾಗಿತ್ವವನ್ನು ಸ್ಥಾಪಿಸುವುದು.
4. ಜನರ ಬೌದ್ಧಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆ ಮತ್ತು ಅಭ್ಯುದಯಕ್ಕಾಗಿ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ಸುಧಾರಿಸುವೆಡೆ ಹೆಚ್ಚು ಗಮನ ಹರಿಸುವುದು.

**ಧನ್ಯವಾದಗಳು.**

**a.** ವಿವಿಧ ಪದವಿಗಳಿಗೆ ಅರ್ಹರಾದ ಅರ್ಜಿ ಸಲ್ಲಿಸಿದ ಮತ್ತು ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ:

ಅರ್ಹ ಮತ್ತು ಪ್ರವೇಸ ಪಡೆದ ವಿದ್ಯಾರ್ಥಿಗಳ ಸಂಖ್ಯೆ –7941

**TUMKUR UNIVERSITY**
**TWELFTH ANNUAL CONVOCATION (2017-18)**
**ELIGIBILITY ABSTRACT-DEGREEWISE**

| ಕ್ರ.ಸಂ | COURSE | EXAMPLARY | | | DISTINCTION | | | 1ST CLASS | | | 2ND CLASS | | | PASS CLASS | | | TOTAL PASS | | |
|---|---|---|---|---|---|---|---|---|---|---|---|---|---|---|---|---|---|---|---|
| | | ಗಂ | ಹೆ | ಒಟ್ಟು | ಗಂ | ಹೆ | ಒಟ್ಟು | ಗಂ | ಹೆ | ಒಟ್ಟು | ಗಂ | ಹೆ | ಒಟ್ಟು | ಗಂ | ಹೆ | ಒಟ್ಟು | ಗಂ | ಹೆ | ಒಟ್ಟು |
| 1 | ಡಿ.ಲಿಟ್ | NA | NA | NA | NA | NA | NA | NA | NA | NA | NA | NA | NA | NA | NA | NA | 3 | 0 | 3 |
| 2 | ಪಿ ಹೆಚ್ ಡಿ | NA | NA | **NA** | NA | NA | **NA** | NA | NA | **NA** | NA | NA | **NA** | NA | NA | **NA** | **52** | **42** | **94** |
| 3 | ಸ್ನಾತಕೋತ್ತರ | NA | NA | **0** | 5 | 28 | **33** | 360 | 813 | **1173** | 196 | 184 | **380** | 1 | 0 | **1** | **562** | **1025** | **1587** |
| 4 | ಸ್ನಾತಕ | 19 | 7 | **26** | 358 | 1056 | **1414** | 953 | 1561 | **2514** | 1023 | 1159 | **2182** | 103 | 18 | **121** | **2456** | **3801** | **6257** |
| ಒಟ್ಟು | | **14** | **19** | **7** | **26** | **363** | **1084** | **1447** | **1313** | **2374** | **3687** | **1219** | **1343** | **2562** | **104** | **18** | **122** | **3073** | **4868** |

**Number of Students Applied -5945**

**b.** ನೀಡಲಾದ ಚಿನ್ನದ ಪದಕ, ನಗದುಬಹುಮಾನಗಳು–ಎಸ್.ಸಿ/ಎಸ್.ಟಿ/ಓಬಿಸಿ/ಮಹಿಳಾ/ ಇತರೆ

ನೀಡಲಾದ ಒಟ್ಟು ಚಿನ್ನದ ಪದಕಗಳ ಸಂಖ್ಯೆ : 92
ಎಸ್.ಸಿ:17 ಎಸ್.ಟಿ:16, ಮಹಿಳೆ :62 ಮತ್ತು ಇತರೆ: 12
ನಗದು ಬಹುಮಾನ :03 (ಮಹಿಳೆ)

| ಹದಿಮೂರನೆ ವಾರ್ಷಿಕ ಘಟಿಕೋತ್ಸವ | | | | | | |
|---|---|---|---|---|---|---|
| ಸ್ವರ್ಣಪದಕ ವಿಜೇತರ ಪಟ್ಟಿ | | | | | | |
| ಕ್ರ.ಸಂ. | ದಾನಿಗಳ ಹೆಸರು | ಪದವಿ / ವಿಷಯ | ತೇರ್ಗಡೆಯಾದ ವರ್ಷ | ವಿದ್ಯಾರ್ಥಿಗಳ ಹೆಸರು | ನೊಂದಣಿ ಸಂಖ್ಯೆ | ಕಾಲೇಜು / ವಿಭಾಗದ ಹೆಸರು |
| ಕಲಾ ನಿಕಾಯ | | | | | | |
| 1 | ಪ್ರೊ. ಹೆಚ್. ಜಿ. ಸಣ್ಣಗುಡ್ಡಯ್ಯ ಟ್ರಸ್ಟ್, ತುಮಕೂರು | ಎಂ.ಎ. ಕನ್ನಡ | 2019 | ಲಾವಣ್ಯ ಟಿ ಡಿ | 17PKA119 | ಡಾ. ಡಿ.ವಿ ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು |
| 2 | ಶ್ರೀಮತಿ ಪುಟ್ಟರಂಗಮ್ಮ ಕೆಂಗರಾಮಯ್ಯ – ಸ್ವರ್ಣಪದಕ | ಎಂ.ಎ. ಕನ್ನಡ | 2019 | ಲಾವಣ್ಯ ಟಿ ಡಿ | 17PKA119 | ಡಾ. ಡಿ.ವಿ ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು |
| 3 | ಶ್ರೀಮತಿ ರಾಜಲಕ್ಷ್ಮೀ ಬರಗೂರು– ಸ್ವರ್ಣಪದಕ | ಎಂ.ಎ. ಕನ್ನಡ | 2019 | ಲಾವಣ್ಯ ಟಿ ಡಿ | 17PKA119 | ಡಾ. ಡಿ.ವಿ ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು |
| 4 | ಶ್ರೀ ಮಹಾಲಕ್ಷ್ಮೀ ದೇವಸ್ಥಾನ, ಗೊರವನಹಳ್ಳಿ – ಸ್ವರ್ಣಪದಕ | ಎಂ.ಎ. ಇತಿಹಾಸ & ಪುರಾತತ್ವಶಾಸ್ತ್ರ | 2019 | ಜೈಕಲ ಜಿ ಆರ್ | 17PHS112 | ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು |
| 5 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಎಂ.ಎ. ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿ | 2019 | ಜೈಕಲ ಜಿ ಆರ್ | 17PHS112 | ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು |
| 6 | ಶ್ರೀ ಮಹಾಲಕ್ಷ್ಮೀ ದೇವಸ್ಥಾನ, ಗೊರವನಹಳ್ಳಿ – ಸ್ವರ್ಣಪದಕ | ಎಂ.ಎ. ಅರ್ಥಶಾಸ್ತ್ರ | 2019 | ಕಾವ್ಯ ಕೆ ಎಸ್ | 17PEC119 | ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು |
| 7 | ಡಾ. ಹೆಚ್.ಎಂ.ಗಂಗಾಧರಯ್ಯ ಮೆಮೊರಿಯಲ್– ಸ್ವರ್ಣಪದಕ | ಎಂ.ಎ. ಅರ್ಥಶಾಸ್ತ್ರ | 2019 | ಕಾವ್ಯ ಕೆ ಎಸ್ | 17PEC119 | ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು |
| 8 | ಡಾ. ಹೆಚ್.ಎಂ.ಗಂಗಾಧರಯ್ಯ ಮೆಮೊರಿಯಲ್– ಸ್ವರ್ಣಪದಕ | ಎಂ.ಎ. ರಾಜ್ಯಶಾಸ್ತ್ರ | 2019 | ಭಾನುಮತಿ ಎಂ | 17PPS104 | ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು |

| | | | | | | |
|---|---|---|---|---|---|---|
| 9 | ಶ್ರೀ ಎಲ್.ಜಿ. ಹಾವನೂರ್ – ಸ್ವರ್ಣಪದಕ | ಎಂ.ಎ. ರಾಜ್ಯಶಾಸ್ತ್ರ | 2019 | ಭಾನುಮತಿ ಎಂ | 17PPS104 | ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು |
| 10 | ಶ್ರೀ ಕೊಪ್ಪಲ್ ಸಿದ್ಧವೀರಯ್ಯ & ಶ್ರೀಮತಿ ಪಾರ್ವತಮ್ಮ – ಸ್ವರ್ಣಪದಕ | ಎಂ.ಎಸ್.ಡಬ್ಲ್ಯೂ | 2019 | ಸಾಧಿಕ್ ಪಾಷಾ ಎಸ್ | 17PSW143 | ಸ್ನಾತಕೋತ್ತರ ಸಮಾಜಕಾರ್ಯ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು |
| 11 | ಶ್ರೀ ಕೆಂಗರಾಮಯ್ಯ – ಸ್ವರ್ಣಪದಕ | ಎಂ.ಎಸ್.ಡಬ್ಲ್ಯೂ | 2019 | ಸಾಧಿಕ್ ಪಾಷಾ ಎಸ್ | 17PSW143 | ಸ್ನಾತಕೋತ್ತರ ಸಮಾಜಕಾರ್ಯ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು |
| 12 | ದಿ ॥ ಶ್ರೀ ಎಂ.ಜಿ. ಚೇತನ – ಸ್ವರ್ಣಪದಕ | ಎಂ.ಎ. ಇಂಗ್ಲೀಷ್ | 2019 | ನಿವೇದಿತ ಬಿ | 17PEN128 | ಸ್ನಾತಕೋತ್ತರ ಇಂಗ್ಲೀಷ್ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು |
| 13 | ತುಮಕೂರು ವಿಶ್ವವಿದ್ಯಾನಿಲಯ – ಸ್ವರ್ಣಪದಕ | ಎಂ.ಎ. ಸಾರ್ವಜನಿಕ ಆಡಳಿತ | 2019 | ಅಭಿಷೇಕ್ ಇ | 17PPB101 | ಸ್ನಾತಕೋತ್ತರ ಸಾರ್ವಜನಿಕ ಆಡಳಿತ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು |
| 14 | ಶ್ರೀ ಎಲ್.ಜಿ. ಹಾವನೂರ್ – ಸ್ವರ್ಣಪದಕ | ಎಂ.ಎ. ಸಮಾಜಶಾಸ್ತ್ರ | 2019 | ಶ್ವೇತ ಆರ್ | 17PSO125 | ಸ್ನಾತಕೋತ್ತರ ಸಮಾಜಶಾಸ್ತ್ರ ವಿಭಾಗ, ತುಮಕೂರು |
| 15 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಎಂ.ಎ. ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿನಿ | 2019 | ಕಿರಣ ಎಂ ಆರ್ | 17PKA117 | ಡಾ. ಡಿ.ವಿ ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು |
| 16 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಎಂ.ಎ. ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಪಂಗಡ ವಿದ್ಯಾರ್ಥಿ | 2019 | ಶ್ರೀಧರ ಆರ್ ವಿ | 17PKA135 | ಡಾ. ಡಿ.ವಿ ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು |
| 17 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಎಂ.ಎ. ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಪಂಗಡ ವಿದ್ಯಾರ್ಥಿನಿ | 2019 | ಸೌಂದರ್ಯ ಇ | 17PKA137 | ಡಾ. ಡಿ.ವಿ ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು |
| 18 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಸ್ನಾತಕೋತ್ತರ ಪದವಿಗಳಲ್ಲಿ ಅತಿ ಹೆಚ್ಚು ಅಂಕಪಡೆದ ವಿಶಿಷ್ಟ ಚೇತನ ಮಹಿಳಾ ವಿದ್ಯಾರ್ಥಿ | 2019 | ಮಂಜುಳ ಟಿ ಎಸ್ | 17PSW709 | ಹೇಮಾದ್ರಿ ಪೋಸ್ಟ್ ಗ್ರಾಜುಯೇಟ್ ಸೆಂಟರ್, ತುಮಕೂರು |

| | | | | | | |
|---|---|---|---|---|---|---|
| 19 | ಪ್ರೊ. ಎಂ.ಡಿ. ನಂಜುಂಡಸ್ವಾಮಿ – ಸ್ವರ್ಣಪದಕ | ಬಿ.ಎ. | 2019 | ಪವಿತ್ರ ಟಿ ವಿ | 16A33114 | ಸ.ಪ್ರ.ದ.ಕಾ., ಗುಬ್ಬಿ |
| 20 | ತಿಪಟೂರು ಶಿವರುದ್ರಪ್ಪ ಚಂದ್ರಶೇಖರಯ್ಯ– ಸ್ವರ್ಣಪದಕ | ಬಿ.ಎ. – ಕನ್ನಡ (ಐಚ್ಛಿಕ) | 2019 | ಪವಿತ್ರ ಟಿ ವಿ | 16A33114 | ಸ.ಪ್ರ.ದ.ಕಾ., ಗುಬ್ಬಿ |
| 21 | ಪ್ರೊ. ಬಿ.ಆರ್. ರಾಮಚಂದ್ರೇಗೌಡ ಮೆಮೊರಿಯಲ್–ಸ್ವರ್ಣಪದಕ | ಬಿ.ಎ. – ಕನ್ನಡ (ಐಚ್ಛಿಕ) | 2019 | ಪವಿತ್ರ ಟಿ ವಿ | 16A33114 | ಸ.ಪ್ರ.ದ.ಕಾ., ಗುಬ್ಬಿ |
| 22 | ಶ್ರೀ ಶಿವಾಜಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ತುಮಕೂರು– ಸ್ವರ್ಣಪದಕ | ಬಿ.ಎ. – ಅರ್ಥಶಾಸ್ತ್ರ | 2019 | ರಾಜೇಶ್ವರಿ ಹೆಚ್ | 16A32008 | ಸ.ಪ್ರ.ದ.ಕಾ., ಚಿ.ನಾ.ಹಳ್ಳಿ |
| 23 | ಶ್ರೀಮತಿ ಜಿ.ಎಸ್. ನಿಜಗುಣಾಂಬ, ಪ್ರೊ. ಬಿ.ಎಸ್. ಲಿಂಗರಾಜ್– ಸ್ವರ್ಣಪದಕ | ಬಿ.ಎ. – ರಾಜ್ಯಶಾಸ್ತ್ರ | 2019 | ರಾಜೇಶ್ವರಿ ಹೆಚ್ | 16A32008 | ಸ.ಪ್ರ.ದ.ಕಾ., ಚಿ.ನಾ.ಹಳ್ಳಿ |
| 24 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಬಿ.ಎ. ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಪಂಗಡ ವಿದ್ಯಾರ್ಥಿನಿ | 2019 | ರಾಜೇಶ್ವರಿ ಹೆಚ್ | 16A32008 | ಸ.ಪ್ರ.ದ.ಕಾ., ಚಿ.ನಾ.ಹಳ್ಳಿ |
| 25 | ಶ್ರೀ ಪಿ. ಶಾಂತಿಲಾಲ್ & ಮೋಹಿನಿ ಬಾಯಿ– ಸ್ವರ್ಣಪದಕ | ಬಿ.ಎ. – ಇಂಗ್ಲೀಷ್ (ಐಚ್ಛಿಕ) | 2019 | ಉಮ್ಮೆ ಸಲ್ಮ ಎ | 16A10206 | ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು |
| 26 | ಹಾಲಪ್ಪ ಫೌಂಡೇಷನ್, ಮಧುಗಿರಿ– ಸ್ವರ್ಣಪದಕ | ಬಿ.ಎ. – ಪತ್ರಿಕೋಧ್ಯಮ | 2019 | ಪುಷ್ಪಲತ ಟಿ ಎಸ್ | 16A10244 | ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು |
| 27 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಬಿ.ಎ. ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿ | 2019 | ಪುಟ್ಟಸ್ವಾಮಿ ಜೆ ವಿ | 16A22085 | ಸ.ಪ್ರ.ದ.ಕಾ., ಕುಣಿಗಲ್ |

| | | | | | | |
|---|---|---|---|---|---|---|
| 28 | ಪ್ರೊ. ಹೆಚ್. ಕುಸುಮ – ಸ್ವರ್ಣಪದಕ | ಬಿ.ಎ. ಇತಿಹಾಸ (ಮಹಿಳಾ) | 2019 | ಕೋಕಿಲ ಎಸ್ ಆರ್ | 16A24040 | ಸ.ಪ್ರ.ದ.ಕಾ., ತಿಪಟೂರು |
| 29 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಬಿ.ಎ. ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಪಂಗಡ ವಿದ್ಯಾರ್ಥಿ | 2019 | ನವೀನ್ ಹೆಚ್ ಆರ್ | 16A33026 | ಸ.ಪ್ರ.ದ.ಕಾ., ಗುಬ್ಬಿ |
| 30 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಬಿ.ಎ. ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿನಿ | 2019 | ಆಶಾರಾಣಿ ವಿ | 16A33105 | ಸ.ಪ್ರ.ದ.ಕಾ., ಗುಬ್ಬಿ |
| 31 | ತುಮಕೂರು ವಿಶ್ವವಿದ್ಯಾನಿಲಯ – ಸ್ವರ್ಣಪದಕ | ಬಿ.ಎ. ಇಂಟಿಗ್ರೇಟೆಡ್ ಕನ್ನಡ ಪಂಡಿತ್ | 2019 | ಲಿಖಿತ್ ಬಿ ಟಿ | 16K10008 | ಶ್ರೀ ಸಿದ್ದಲಿಂಗೇಶ್ವರ ಬಿ.ಎ. ಕನ್ನಡ ಇಂಟಿಗ್ರೇಟೆಡ್ ಕಾಲೇಜು, ತುಮಕೂರು |
| 32 | ತುಮಕೂರು ವಿಶ್ವವಿದ್ಯಾನಿಲಯ – ಸ್ವರ್ಣಪದಕ | ಬಿ.ಎಫ್.ಎ. | 2019 | ಶ್ರೀವಾಣಿ ಎನ್ | 14AFA511 | ಸ್ನಾತಕ ಲಲಿತಕಲಾ ವಿಭಾಗ, ತುಮಕೂರು |
| 33 | ತುಮಕೂರು ವಿಶ್ವವಿದ್ಯಾನಿಲಯ – ಸ್ವರ್ಣಪದಕ | ಬಿ.ಎಸ್.ಡಬ್ಲ್ಯು. | 2019 | ನದಿನಿಪ್ರಿಯ | 16W16024 | ಗುರುಶ್ರೀ ವಾಣಿಜ್ಯ ಮತ್ತು ಸಮಾಜಕಾರ್ಯ ಕಾಲೇಜು, ತುಮಕೂರು |
| **ವಾಣಿಜ್ಯ ಮತ್ತು ನಿರ್ವಹಣಶಾಸ್ತ್ರ ನಿಕಾಯ** | | | | | | |
| 34 | ಸಿದ್ಧಗಂಗಾ ಆಯಿಲ್ ಎಕ್ಸ್ಟ್ರಾಕ್ಷನ್ ಪ್ರೈ.ಲಿ., ತುಮಕೂರು– ಸ್ವರ್ಣಪದಕ | ಎಂ.ಕಾಂ. | 2019 | ದಿವ್ಯಮಣಿ ಎಂ ಸಿ | 17PC1014 | ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು |
| 35 | ಡಾ. ಟಿ.ಎಸ್.ಮಲ್ಲಿಕಾರ್ಜುನಯ್ಯ – ಸ್ವರ್ಣಪದಕ | ಎಂ.ಕಾಂ. | 2019 | ದಿವ್ಯಮಣಿ ಎಂ ಸಿ | 17PC1014 | ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು |
| 36 | ಕೆನರಾ ಬ್ಯಾಂಕ್ (ಮುಖ್ಯಶಾಖೆ), ತುಮಕೂರು– ಸ್ವರ್ಣಪದಕ | ಎಂ.ಕಾಂ. | 2019 | ದಿವ್ಯಮಣಿ ಎಂ ಸಿ | 17PC1014 | ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು |

| | | | | | | |
|---|---|---|---|---|---|---|
| 37 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಎಂ.ಕಾಂ. ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಪಂಗಡ ವಿದ್ಯಾರ್ಥಿನಿ | 2019 | ದಿವ್ಯಮಣಿ ಎಂ ಸಿ | 17PC1014 | ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು |
| 38 | ಕೆನರಾ ಬ್ಯಾಂಕ್ (ಮುಖ್ಯಶಾಖೆ), ತುಮಕೂರು– ಸ್ವರ್ಣಪದಕ | ಎಂ.ಬಿ.ಎ. | 2019 | ಹರ್ಷಿತ್ ಸಿ ಎಂ | 17PA1015 | ಸ್ನಾತಕೋತ್ತರ ವ್ಯವಹಾರ ಆಡಳಿತ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು |
| 39 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಎಂ.ಕಾಂ. ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿ | 2019 | ಭೂತರಾಜು ಆರ್ | 17PC1008 | ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು |
| 40 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಎಂ.ಕಾಂ. ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿನಿ | 2019 | ರಮ್ಯಶ್ರೀ ಎಂ ಎನ್ | 17PC1039 | ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು |
| 41 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಎಂ.ಕಾಂ. ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಪಂಗಡ ವಿದ್ಯಾರ್ಥಿ | 2019 | ತೇಜ ಕುಮಾರ್ ವಿ | 17PC1051 | ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು |
| 42 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಎಂ.ಬಿ.ಎ. ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿ | 2019 | ಜೈಪ್ರಸನ್ನ ಎಂ ವಿ | 17PA1018 | ಸ್ನಾತಕೋತ್ತರ ವ್ಯವಹಾರ ಆಡಳಿತ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು |
| 43 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಎಂ.ಬಿ.ಎ. ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿನಿ | 2019 | ಮಂಜುಳ ಜೆ | 17PA2041 | ಶ್ರೀ ಸಿದ್ಧಾರ್ಥ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ತುಮಕೂರು |
| 44 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಎಂ.ಬಿ.ಎ. ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಪಂಗಡ ವಿದ್ಯಾರ್ಥಿ | 2019 | ಶಿವರಾಜ ಆದಪ್ಪ ಗುರಿಕಾರ | 17PA1049 | ಸ್ನಾತಕೋತ್ತರ ವ್ಯವಹಾರ ಆಡಳಿತ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು |
| 45 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಎಂ.ಬಿ.ಎ. ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಪಂಗಡ ವಿದ್ಯಾರ್ಥಿನಿ | 2019 | ಶ್ವೇತ ಪಿ | 17PA2086 | ಶ್ರೀ ಸಿದ್ಧಾರ್ಥ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ತುಮಕೂರು |

| | | | | | | |
|---|---|---|---|---|---|---|
| 46 | ಶ್ರೀಮತಿ ಗಂಗಮ್ಮ, ಎ.ಡಿ. ತಿಮ್ಮಯ್ಯ – ಸ್ವರ್ಣಪದಕ | ಬಿ.ಕಾಂ. | 2019 | ಪ್ರಜ್ಞಾ ಭೂಮಿಕಶ್ರೀ ಎನ್ ಜಿ | 16C19083 | ಶ್ರೀ ಸಿದ್ದಗಂಗಾ ಮಹಿಳಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ತುಮಕೂರು |
| 47 | ಲಾಲ್ & ಮಲ್– ಸ್ವರ್ಣಪದಕ | ಬಿ.ಕಾಂ. | 2019 | ಪ್ರಜ್ಞಾ ಭೂಮಿಕಶ್ರೀ ಎನ್ ಜಿ | 16C19083 | ಶ್ರೀ ಸಿದ್ದಗಂಗಾ ಮಹಿಳಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ತುಮಕೂರು |
| 48 | ಕರ್ನಾಟಕ ಬ್ಯಾಂಕ್ ಲಿ.,– ಸ್ವರ್ಣಪದಕ | ಬಿ.ಕಾಂ. | 2019 | ಪ್ರಜ್ಞಾ ಭೂಮಿಕಶ್ರೀ ಎನ್ ಜಿ | 16C19083 | ಶ್ರೀ ಸಿದ್ದಗಂಗಾ ಮಹಿಳಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ತುಮಕೂರು |
| 49 | ತುಮಕೂರು ವಿಶ್ವವಿದ್ಯಾನಿಲಯ – ಸ್ವರ್ಣಪದಕ | ಬಿ.ಬಿ.ಎಂ. | 2019 | ಗೀತಾಂಜಲಿ ಬಿ ಜಿ | 16M14010 | ಶ್ರೀ ಸಿದ್ಧಾರ್ಥ ಇನ್‌ಸ್ಟಿಟ್ಯೂಟ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್, ತುಮಕೂರು |
| 50 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಬಿ.ಎ. ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿ | 2019 | ಮೋಹನ್ ಕುಮಾರ್ ವಿ | 16C10113 | ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು |
| 51 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಬಿ.ಎ. ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿನಿ | 2019 | ಭಾಗ್ಯಶ್ರೀ ಎಲ್ | 16C10028 | ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು |
| 52 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಬಿ.ಎ. ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಪಂಗಡ ವಿದ್ಯಾರ್ಥಿ | 2019 | ನಂದನ್ ಎನ್ | 16C10120 | ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು |
| 53 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಬಿ.ಎ. ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಪಂಗಡ ವಿದ್ಯಾರ್ಥಿನಿ | 2019 | ಜ್ಯೋತಿ ಪಿ ಎನ್ | 16C59031 | ಶ್ರೀ ಸಿದ್ದಗಂಗಾ ಮಹಿಳಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ತುಮಕೂರು |
| **ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ** | | | | | | |
| 54 | ಹೊಸಹಳ್ಳಿ ಪಾರ್ವತಮ್ಮ ಸಿ. ದೇವೇಗೌಡ– ಸ್ವರ್ಣಪದಕ | ಎಂ.ಎಸ್ಸಿ ಗಣಿತಶಾಸ್ತ್ರ | 2019 | ಮನೋಹರ್ ಎಸ್ ಹೆಚ್ | 17PMT124 | ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು |
| 55 | ಶ್ರೀ ಎಂ.ಎಸ್. ವೀರಭದ್ರ ಶೆಟ್ಟಿ – ಸ್ವರ್ಣಪದಕ | ಎಂ.ಎಸ್ಸಿ ಗಣಿತಶಾಸ್ತ್ರ | 2019 | ಮನೋಹರ್ ಎಸ್ ಹೆಚ್ | 17PMT124 | ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು |

| | | | | | | |
|---|---|---|---|---|---|---|
| 56 | ಶ್ರೀಮತಿ ಅಂಬಿಕಾದೇವಿ ಶಿವಪ್ಪ – ಸ್ವರ್ಣಪದಕ | ಎಂ.ಎಸ್ಸಿ ಗಣಿತಶಾಸ್ತ್ರ | 2019 | ಮನೋಹರ್ ಎಸ್ ಹೆಚ್ | 17PMT124 | ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು |
| 57 | ಹೈಟೆಕ್ ಪ್ರಿಂಟ್ ಸಿಸ್ಟಮ್ ಲಿ., ಬೆಂಗಳೂರು– ಸ್ವರ್ಣಪದಕ | ಎಂ.ಎಸ್ಸಿ. ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ | 2019 | ಮನೋಹರ್ ಎಸ್ ಹೆಚ್ | 17PMT124 | ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು |
| 58 | ತುಮಕೂರು ವಿಶ್ವವಿದ್ಯಾನಿಲಯ ಎರೋಬಯಾಲಜಿ–2015 – ಸ್ವರ್ಣಪದಕ | ಎಂ.ಎಸ್ಸಿ. ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ | 2019 | ಮನೋಹರ್ ಎಸ್ ಹೆಚ್ | 17PMT124 | ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು |
| 59 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಎಂ.ಎಸ್ಸಿ. –ಸಸ್ಯಶಾಸ್ತ್ರ ಅತಿ ಹೆಚ್ಚು ಅಂಕ ಪಡೆದ ಸಾಮಾನ್ಯ ವರ್ಗ ವಿದ್ಯಾರ್ಥಿನಿ | 2019 | ರೋಹಿಣಿ ಜಿ | 17PBO128 | ಸ್ನಾತಕೋತ್ತರ ಸಸ್ಯಶಾಸ್ತ್ರ ವಿಭಾಗ, ತುಮಕೂರು |
| 60 | ದಿ ॥ ಶ್ರೀಮತಿ ಗಂಗಮಾಳಮ್ಮ ಡಾ. ಹೆಚ್.ಎಂ. ಗಂಗಾಧರಯ್ಯ ಮೆಮೊರಿಯಲ್ – ಸ್ವರ್ಣಪದಕ | ಎಂ.ಎಸ್ಸಿ. ಭೌತಶಾಸ್ತ್ರ | 2019 | ಕಾವ್ಯ ಹೆಚ್ | 17PPH119 | ಸ್ನಾತಕೋತ್ತರ ಭೌತಶಾಸ್ತ್ರ ವಿಭಾಗ, ತುಮಕೂರು |
| 61 | ದಿ ॥ ಶ್ರೀಮತಿ ಗಂಗಮಾಳಮ್ಮ ಡಾ. ಹೆಚ್.ಎಂ. ಗಂಗಾಧರಯ್ಯ ಮೆಮೊರಿಯಲ್ – ಸ್ವರ್ಣಪದಕ | ಎಂ.ಎಸ್ಸಿ. ರಸಾಯನಶಾಸ್ತ್ರ | 2019 | ಸೌಂದರ್ಯ ಟಿ ಎಲ್ | 17PCH143 | ಸ್ನಾತಕೋತ್ತರ ರಸಾಯನಶಾಸ್ತ್ರ ವಿಭಾಗ, ತುಮಕೂರು |
| 62 | ದಿ ॥ ಡಾ ಬಸವರಾಜ್ ಮತ್ನಾಳ್ (ಅಮೇರಿಕಾ) ಮೆಮೋರಿಯಲ್ – ಸ್ವರ್ಣಪದಕ | ಎಂ.ಎಸ್ಸಿ. ಜೀವರಸಾಯನಶಾಸ್ತ್ರ | 2019 | ಸುದರ್ಶನ್ ಎಂ | 17PBC141 | ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು |
| 63 | ತುಮಕೂರು ವಿಶ್ವವಿದ್ಯಾನಿಲಯ – ಸ್ವರ್ಣಪದಕ | ಎಂ.ಎಸ್ಸಿ. ಜೀವಶಾಸ್ತ್ರ | 2019 | ಅಮೀನ ಮಿಸ್ಬ ಬಿ.ಎ | 17PZO102 | ಸ್ನಾತಕೋತ್ತರ ಜೀವಶಾಸ್ತ್ರ ವಿಭಾಗ, ತುಮಕೂರು |

| | | | | | | |
|---|---|---|---|---|---|---|
| 64 | ಸೀತಾರಾಂ ಜಿಂದಾಲ್ ಫೌಂಡೇಷನ್ – ಸ್ವರ್ಣಪದಕ | ಎಂ.ಎಸ್ಸಿ. ಪರಿಸರವಿಜ್ಞಾನ | 2019 | ಮಂಜುನಾಥರೆಡ್ಡಿ ಗಾರಿ ಶೃತಿ | 17PES104 | ಸ್ನಾತಕೋತ್ತರ ಪರಿಸರ ವಿಜ್ಞಾನ ವಿಭಾಗ, ತುಮಕೂರು |
| 65 | ಪ್ರೊ. ಪಿ. ಸದಾಶಿವಮೂರ್ತಿ – ಸ್ವರ್ಣಪದಕ | ಎಂ.ಎಸ್ಸಿ. ಗ್ರಂಥಾಲಯ & ಮಾಹಿತಿ ವಿಜ್ಞಾನ | 2019 | ಸುಮ ಎಂಸಿ | 17PLB117 | ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು |
| 66 | ತುಮಕೂರು ವಿಶ್ವವಿದ್ಯಾನಿಲಯ – ಸ್ವರ್ಣಪದಕ | ಎಂ.ಎಸ್. ಕಮ್ಯೂನಿಕೇಷನ್ | 2019 | ಶಶಿಕಲ ಜಿ ಎಂ | 17PCN117 | ಶ್ರೀ ಸಿದ್ಧಾರ್ಥ ಸೆಂಟರ್ ಫಾರ್ ಮೀಡಿಯಾ ಸ್ಟಡೀಸ್, ತುಮಕೂರು |
| 67 | ತುಮಕೂರು ವಿಶ್ವವಿದ್ಯಾನಿಲಯ – ಸ್ವರ್ಣಪದಕ | ಎಂ.ಎಸ್ಸಿ. ವಿದ್ಯುನ್ಮಾನ | 2019 | ರಕ್ಷಿತ ವಿ | 17PEM112 | ಶ್ರೀ ಸಿದ್ಧಾರ್ಥ ಸೆಂಟರ್ ಫಾರ್ ಮೀಡಿಯಾ ಸ್ಟಡೀಸ್, ತುಮಕೂರು |
| 68 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಎಂ.ಎಸ್ಸಿ. ಅತಿ ಹೆಚು ಅಂಕ ಪಡೆದ ಪರಿಶಿಷ್ಟ ಪಂಗಡ ವಿದ್ಯಾರ್ಥಿ | 2019 | ಮಹೇಶ | 17PZO118 | ಸ್ನಾತಕೋತ್ತರ ಪ್ರಾಣಿಶಾಸ್ತ್ರ ವಿಭಾಗ, ತುಮಕೂರು |
| 69 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಎಂ.ಎಸ್ಸಿ. – ಪ್ರಾಣಿಶಾಸ್ತ್ರ ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಪಂಗಡ ವಿದ್ಯಾರ್ಥಿ | 2019 | ಮಹೇಶ | 17PZO118 | ಸ್ನಾತಕೋತ್ತರ ಪ್ರಾಣಿಶಾಸ್ತ್ರ ವಿಭಾಗ, ತುಮಕೂರು |
| 70 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಎಂ.ಎಸ್ಸಿ. ಅತಿ ಹೆಚು ಅಂಕ ಪಡೆದ ಪರಿಶಿಷ್ಟ ಪಂಗಡ ವಿದ್ಯಾರ್ಥಿನಿ | 2019 | ಶೋಭ ಪಿ ಎನ್ | 17PZO133 | ಸ್ನಾತಕೋತ್ತರ ಪ್ರಾಣಿಶಾಸ್ತ್ರ ವಿಭಾಗ, ತುಮಕೂರು |
| 71 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಎಂ.ಎಸ್ಸಿ. – ಪ್ರಾಣಿಶಾಸ್ತ್ರ ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಪಂಗಡ ವಿದ್ಯಾರ್ಥಿನಿ | 2019 | ಶೋಭ ಪಿ ಎನ್ | 17PZO133 | ಸ್ನಾತಕೋತ್ತರ ಪ್ರಾಣಿಶಾಸ್ತ್ರ ವಿಭಾಗ, ತುಮಕೂರು |
| 72 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಎಂ.ಎಸ್ಸಿ. ಅತಿ ಹೆಚು ಅಂಕ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿ | 2019 | ನಚಿಕೇತನ್ ಎ ಸಿ | 17PES106 | ಸ್ನಾತಕೋತ್ತರ ಪರಿಸರ ವಿಜ್ಞಾನ ವಿಭಾಗ, ತುಮಕೂರು |

| | | | | | | |
|---|---|---|---|---|---|---|
| 73 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಎಂ.ಎಸ್ಸಿ. ಅತಿ ಹೆಚು ಅಂಕ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿನಿ | 2019 | ಮೇಘ ಕೆ | 17PMT125 | ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು |
| 74 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಎಂ.ಎಸ್ಸಿ. – ಪ್ರಾಣಿಶಾಸ್ತ್ರ ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿ | 2019 | ಗೌರಿಶಂಕರ್ ಎಂ ಹೆಚ್ | 17PZO110 | ಸ್ನಾತಕೋತ್ತರ ಪ್ರಾಣಿಶಾಸ್ತ್ರ ವಿಭಾಗ, ತುಮಕೂರು |
| 75 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಎಂ.ಎಸ್ಸಿ. – ಪ್ರಾಣಿಶಾಸ್ತ್ರ ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿನಿ | 2019 | ಲಕ್ಷ್ಮೀದೇವಿ ಡಿ | 17PZO116 | ಸ್ನಾತಕೋತ್ತರ ಪ್ರಾಣಿಶಾಸ್ತ್ರ ವಿಭಾಗ, ತುಮಕೂರು |
| 76 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಎಂ.ಎಸ್ಸಿ. – ಪ್ರಾಣಿಶಾಸ್ತ್ರ ಅತಿ ಹೆಚ್ಚು ಅಂಕ ಪಡೆದ ಸಾಮಾನ್ಯ ವರ್ಗ ವಿದ್ಯಾರ್ಥಿನಿ | 2019 | ವಸುಧ ಎಂ ವಿ | 17PZO144 | ಸ್ನಾತಕೋತ್ತರ ಪ್ರಾಣಿಶಾಸ್ತ್ರ ವಿಭಾಗ, ತುಮಕೂರು |
| 77 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಎಂ.ಎಸ್ಸಿ. –ಸಸ್ಯಶಾಸ್ತ್ರ ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿ | 2019 | ಮೋಹನ್ ಕುಮಾರ್ ಹೆಚ್ ವಿ | 17PBO116 | ಸ್ನಾತಕೋತ್ತರ ಸಸ್ಯಶಾಸ್ತ್ರ ವಿಭಾಗ, ತುಮಕೂರು |
| 78 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಎಂ.ಎಸ್ಸಿ. –ಸಸ್ಯಶಾಸ್ತ್ರ ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿನಿ | 2019 | ಜ್ಯೋತಿ ಕೆ ಟಿ | 17PBO105 | ಸ್ನಾತಕೋತ್ತರ ಸಸ್ಯಶಾಸ್ತ್ರ ವಿಭಾಗ, ತುಮಕೂರು |
| 79 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಎಂ.ಎಸ್ಸಿ. –ಸಸ್ಯಶಾಸ್ತ್ರ ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಪಂಗಡ ವಿದ್ಯಾರ್ಥಿ | 2019 | ತಿಪ್ಪೇರುದ್ರಯ್ಯ ಡಿ ಟಿ | 17PBO137 | ಸ್ನಾತಕೋತ್ತರ ಸಸ್ಯಶಾಸ್ತ್ರ ವಿಭಾಗ, ತುಮಕೂರು |
| 80 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಎಂ.ಎಸ್ಸಿ. –ಸಸ್ಯಶಾಸ್ತ್ರ ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಪಂಗಡ ವಿದ್ಯಾರ್ಥಿನಿ | 2019 | ಪ್ರಿಯಾಂಕ ಎಸ್ ಜೆ | 17PBO122 | ಸ್ನಾತಕೋತ್ತರ ಸಸ್ಯಶಾಸ್ತ್ರ ವಿಭಾಗ, ತುಮಕೂರು |

| | | | | | | |
|---|---|---|---|---|---|---|
| 81 | ತುಮಕೂರು ವಿಶ್ವವಿದ್ಯಾನಿಲಯ – ಸ್ವರ್ಣಪದಕ | ಬಿ.ಎಸ್ಸಿ. | 2019 | ಭಾವನ ಆರ್ | 16S10320 | ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು |
| 82 | ದಿ ॥ ಎಂ. ರಘುರಾಮ್– ಸ್ವರ್ಣಪದಕ | ಬಿ.ಎಸ್ಸಿ. ಪ್ರಾಣಿಶಾಸ್ತ್ರ ವಿಷಯದಲ್ಲಿ ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿ | 2019 | ಭಾವನ ಆರ್ | 16S10320 | ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು |
| 83 | ಶ್ರೀ ಸೋಲೂರು ನರಸಿಂಹಯ್ಯ ಮೆಮೋರಿಯಲ್– ಸ್ವರ್ಣಪದಕ | ಬಿ.ಎಸ್ಸಿ. ಗಣಿತಶಾಸ್ತ್ರ ವಿಷಯದಲ್ಲಿ ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿ | 2019 | ದೇವರ್ಲಗಾರಿ ಶ್ವೇತ | 16S10125 | ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು |
| 84 | ಕಲಮರಹಳ್ಳಿ ಇಂಜಿನಿಯರ್ ಜಿ. ಶಿವಾನಂದ – ಸ್ವರ್ಣಪದಕ | ಬಿ.ಎಸ್ಸಿ. ಭೌತಶಾಸ್ತ್ರ ವಿಷಯದಲ್ಲಿ ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿ | 2019 | ಮೇಘನ ಸಿ ಪಿ | 16S29008 | ಕಲ್ಪತರು ವಿಜ್ಞಾನ ಪ್ರ.ದ.ಕಾಲೇಜು, ತಿಪಟೂರು |
| 85 | ತುಮಕೂರು ವಿಶ್ವವಿದ್ಯಾನಿಲಯ – ಸ್ವರ್ಣಪದಕ | ಬಿ.ಸಿ.ಎ. | 2019 | ತಾರಾ ಕೆ ಎನ್ | 16B12213 | ವಿದ್ಯಾವಾಹಿನಿ ಪ್ರ.ದ.ಕಾಲೇಜು, ತುಮಕೂರು |
| 86 | ತುಮಕೂರು ವಿಶ್ವವಿದ್ಯಾನಿಲಯ – ಸ್ವರ್ಣಪದಕ | ಬಿ.ವೋಕ್. | 2019 | ರಾಕೇಶ ಇ | 16V10018 | ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು |
| 87 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಬಿ.ಎಸ್ಸಿ. ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿ | 2019 | ಸಾಗರ್ ಆರ್ | 16S10397 | ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು |
| 88 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಬಿ.ಎಸ್ಸಿ. ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿನಿ | 2019 | ಪಲ್ಲವಿ ಡಿ ಎಸ್ | 16S32047 | ಶ್ರೀ ಸಿದ್ದಗಂಗಾ ಮಹಿಳಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ತುಮಕೂರು |
| 89 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಬಿ.ಎಸ್ಸಿ. ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಪಂಗಡ ವಿದ್ಯಾರ್ಥಿ | 2019 | ಗುರುಪ್ರಸಾದ್ | 16S10030 | ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು |

| | | | | | | |
|---|---|---|---|---|---|---|
| 90 | ತುಮಕೂರು ಜಿಲ್ಲಾ ಸಹಕಾರ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್– ಸ್ವರ್ಣಪದಕ | ಬಿ.ಎಸ್ಸಿ. ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಪಂಗಡ ವಿದ್ಯಾರ್ಥಿನಿ | 2019 | ಜ್ಯೋತಿ ಎಸ್ | 16S31128 | ಕಲ್ಪತರು ವಿಜ್ಞಾನ ಪ್ರ.ದ.ಕಾಲೇಜು, ತಿಪಟೂರು |
| **ಶಿಕ್ಷಣ ನಿಕಾಯ** | | | | | | |
| 91 | ಸೀತಾರಾಂ ಜಿಂದಾಲ್ ಫೌಂಡೇಷನ್ – ಸ್ವರ್ಣಪದಕ | ಬಿ.ಇಡಿ | 2019 | ಶಾಂತಲ ಎಂ ಬಿ | 16ED3038 | ಕಲ್ಪತರು ಶಿಕ್ಷಣ ಮಹಾವಿದ್ಯಾಲಯ, ತಿಪಟೂರು |
| 92 | ತುಮಕೂರು ವಿಶ್ವವಿದ್ಯಾನಿಲಯ – ಸ್ವರ್ಣಪದಕ | ಬಿ.ಪಿ.ಇಡಿ | 2018 | ವಿಜಯಕುಮಾರ್ ಕೆ | 17PE1034 | ಶ್ರೀ ಸಿದ್ದಗಂಗಾ ದೈಹಿಕ ಶಿಕ್ಷಣ ಕಾಲೇಜು, ತುಮಕೂರು |

| **ನಗದು ಬಹುಮಾನ** | | | | | | |
|---|---|---|---|---|---|---|
| **ಕ್ರ.ಸಂ.** | **ದಾನಿಗಳ ಹೆಸರು** | **ಪದವಿ / ವಿಷಯ** | **ತೇರ್ಗಡೆಯಾದ ವರ್ಷ** | **ವಿದ್ಯಾರ್ಥಿಗಳ ಹೆಸರು** | **ನೊಂದಣಿ ಸಂಖ್ಯೆ** | **ಕಾಲೇಜು / ವಿಭಾಗದ ಹೆಸರು** |
| 1 | ಪ್ರೊ. ಹೆಚ್.ಆರ್ ಅಪ್ಪಣ್ಣಯ್ಯ ನಗದು ಬಹುಮಾನ | ಬಿ.ಕಾಂ. | 2019 | ಪ್ರಜ್ಞಾ ಭೂಮಿಕಶ್ರೀ ಎನ್ ಜಿ | 16C19083 | ಶ್ರೀ ಸಿದ್ದಗಂಗಾ ಮಹಿಳಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ತುಮಕೂರು |
| 2 | ತುಮಕೂರು ವಿಶ್ವವಿದ್ಯಾನಿಲಯ ನಗದು ಬಹುಮಾನ | ಎಂ.ಎಸ್ಸಿ. – ಸಸ್ಯಶಾಸ್ತ್ರ | 2019 | ರೋಹಿಣಿ ಜಿ | 17PBO128 | ಸ್ನಾತಕೋತ್ತರ ಸಸ್ಯಶಾಸ್ತ್ರ ವಿಭಾಗ, ತುಮಕೂರು |
| 3 | ತುಮಕೂರು ವಿಶ್ವವಿದ್ಯಾನಿಲಯ ನಗದು ಬಹುಮಾನ | ಎಂ.ಎಸ್ಸಿ. – ಸಸ್ಯಶಾಸ್ತ್ರ | 2019 | ಸಿಂಧು ಆರ್ | 17PBO132 | ಸ್ನಾತಕೋತ್ತರ ಸಸ್ಯಶಾಸ್ತ್ರ ವಿಭಾಗ, ತುಮಕೂರು |

**c. ಚಿನ್ನದ ಪದಕಗಳ ದತ್ತಿಗೆ ವಿಶ್ವವಿದ್ಯಾನಿಲಯದ ನೀತಿ:**
ತುಮಕೂರು ವಿಶ್ವವಿದ್ಯಾನಿಲಯವು ಚಿನ್ನದ ಪದಕ ಮತ್ತು ದತ್ತಿ ಸ್ಥಾಪನೆಗಾಗಿ ತನ್ನದೇ ಆದ ಶಾಸನವನ್ನು ಹೊಂದಿದೆ.

**d. Ph.D/D.Sc/D.Litt ಸ್ವೀಕರಿಸಿದ SC/ST/OBC ಮಹಿಳೆಯ ಸಂಖ್ಯೆ:**
ಪ್ರದಾನವಾದ ಡಿ.ಲಿಟ್‌ಗಳ ಸಂಖ್ಯೆ: 3 (ಪುರುಷ)
ಪ್ರದಾನವಾದ ಪಿಹೆಚ್.ಡಿ ಗಳ ಸಂಖ್ಯೆ **:94**
ಮಹಿಳೆ **:42**

**e. ಗೌರವ ಡಾಕ್ಟರೇಟ್ ಸ್ವೀಕರಿಸಿದವರ ಸಂಖ್ಯೆ ವಿವರದೊಂದಿಗೆ:** ನೀಡಲಾದ ಗೌರವ ಡಾಕ್ಟರೇಟ್ ಸಂಖ್ಯೆ: 01
**ಶ್ರೀ ಸಿ.ಎನ್. ಮಂಚೇಗೌಡ** ಇವರು ಅತ್ಯುತ್ತಮ ಅಧಿಕಾರಿಯಾಗಿದ್ದು, ಕರ್ನಾಟಕದಲ್ಲಿ ಗ್ರಾಮೀಣ ಯುವಕ/ಯುವತಿಯರಿಗೆ ಉದ್ಯೋಗಾವಕಾಶವನ್ನು ಕಲ್ಪಿಸುತ್ತಿದ್ದಾರೆ.

## 24. ಕೌಶಲ ಅಭಿವೃದ್ಧಿ ಮತ್ತು Placement Cell:

ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣಮಟ್ಟ ಮತ್ತು ಉದ್ಯಮಶೀಲತೆಯನ್ನು ಬೆಳೆಸಲು ವಿಶ್ವವಿದಾಯನಿಲಯ ಕೌಶಲ್ಯ ಅಭಿವೃದ್ಧಿ ಕೇಂದ್ರವು ಕಾರ್ಯ ನಿರ್ವಹಿಸುತ್ತದೆ. ಇದು DISHA ಮತ್ತು SKILL SATHI ಯೋಜನೆಯ ಬಗ್ಗೆ ಎಲ್ಲಾ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಜಾಗೃತ ತರಬೇತಿಯನ್ನು ನೀಡಿದೆ. ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ಮಂಡಳಿಯು "SKILLSATHI" ಎಂಬ ಬೃಹತ್ (ಮೆಗಾ) ಅಭಿಯಾನವನ್ನು ಪ್ರಾರಂಭಿಸಿತು. ಹೊಸ ಉದ್ಯಮ ಮತ್ತು ಉದ್ಯಮ ಉಪಕ್ರಮಕ್ಕಾಗಿ (Start up) ಉದ್ಯಮ ಶೀಲತೆ ಮಾರ್ಗದರ್ಶನ (Out Reach) ಕಾರ್ಯಕ್ರಮವನ್ನು ಆಯೋಜಿಸಿತು.

ಕರ್ನಾಟಕದ ಮುಖ್ಯಮಂತ್ರಿಗಳ ಕಲ್ಯಾಣ ವಿಕಾಸ್ ಯೋಜನೆಯಲ್ಲಿ ಅಡಿಯಲ್ಲಿ ತುಮಕೂರು ವಿಶ್ವವಿದ್ಯಾನಿಲಯವು ಕೌಶಲ್ಯ ಭರಿತ ಉನ್ನತ ಶಿಕ್ಷಣವನ್ನು ಒದಗಿಸುವ ಉದ್ದೇಶದಿಂದ ವಿಶ್ವವಿದ್ಯಾನಿಲಯದ 2 ಘಟಕ ಕಾಲೇಜುಗಳು ಮತ್ತು 20 ಸಂಯೋಜಿತ (affiliated) ಕಾಲೇಜುಗಳನ್ನು ನೊಂದಣಿ ಮಾಡಿದೆ ಮತ್ತು ಈ ಕಾಲೇಜುಗಳನ್ನು ತರಭೇತಿ ಕೇಂದ್ರಗಳಾಗಿ ಗುರುತಿಸಲಾಗುತ್ತಿದೆ. ಮಾರುಕಟ್ಟೆಯ ಕೌಶಲ್ಯಗಳನ್ನು ಗುರುತಿಸಲು ಮತ್ತು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಉದ್ಯಮಶೀಲತೆ ಮತ್ತು ಕೌಶಲ್ಯ ಅಭಿವೃದ್ಧಿ ತರಭೇತಿಯನ್ನು ಆಯೋಜಿಸಿಲು ತುಮಕೂರು ವಿಶ್ವವಿದ್ಯಾನಿಲಯ ASSOCHAM ನೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ.

**a. ಪಠ್ಯಕ್ರಮದ ಅಭಿವೃದ್ಧಿಯಲ್ಲಿ ಉದ್ಯಮದ ಒಳಗೊಳ್ಳುವಿಕೆ**
ಪಠ್ಯಕ್ರಮದ ಅಭಿವೃದ್ಧಿಪಡಿಸುವ ಸಲುವಾಗಿ ತುಮಕೂರು ವಿಶ್ವವಿದ್ಯಾನಿಲಯವು ಉದ್ಯಮದ (ಕೈಗಾರಿಕೆಗಳ) ಪ್ರತಿನಿಧಿಗಳನ್ನು ಸಂಬಂಧಿತ ಸ್ನಾತಕೋತ್ತರ ಕೋರ್ಸ್‌ಗಳ "ಬೋರ್ಡ್ ಆಫ್ ಸ್ಟಡೀಸ್" ನ ಸದಸ್ಯರಾಗಿ ನೇಮಿಸಿದೆ. ಇದಲ್ಲದೆ ಸಂಬಂಧಿತ ಅಧ್ಯಯನ ಮಂಡಳಿಗಳಲ್ಲಿ ಕೈಗಾರಿಕೋಧ್ಯಮಿಗಳು/ಫಾರ್ಮಾ ಉದ್ಯಮದ ಸಂಶೋಧನಾ ವಿಜ್ಞಾನಿಗಳು/ಸಂಶೋಧನಾ ಸಲಹೆಗಾರರನ್ನು ಸೇರಿಸಲು ವಿಶ್ವವಿದ್ಯಾನಿಲಯ ಪ್ರಾರಂಭಿಸಿದೆ. ಉದ್ಯಮ/ಸಂಸ್ಥೆಗಳು ಅಗತ್ಯಗಳಿಗೆ ಅನುಗುಣವಾಗಿ ಸ್ನಾತಕೋತ್ತರ ಪದವಿಯ ಪಠ್ಯಕ್ರಮವನ್ನು ಅಭಿವೃದ್ಧಿ ಪಡಿಸಲು ಉದ್ಯಮದ ವ್ಯಕ್ತಿಗಳನ್ನು ಗುರುತಿಸಿ ಅಧ್ಯಯನ ಮಂಡಳಿಗಳ ಸದಸ್ಯರಾಗಿ ನೇಮಿಸಲಾಗಿದೆ.

ಹಾರ್ಡ್‌ವೇರ್ ತಂತ್ರಜ್ಞಾನ ಮತ್ತು ನೆಟ್ ವರ್ಕಿಂಗ್ ನಲ್ಲಿ B.Voc ಪದವಿ ಹಾಗೂ MBA ಪ್ರೋಗ್ರ್ಯಾಮ್ ನ ಪಠ್ಯಕ್ರಮದ ಅಭಿವೃದ್ಧಿಯಲ್ಲಿ ತುಮಕೂರು ವಿಶ್ವವಿದ್ಯಾನಿಲಯವು ಕೈಗಾರಿಕೋದ್ಯಮದ ವ್ಯಕ್ತಿಗಳನ್ನು ಸೇರಿಸಿಕೊಂಡಿದೆ.

**b. ಪದವೀಧರ – ಉದ್ಯಮದ ಸಂವಾದಾತ್ಮಕ ವೇದಿಕೆಯನ್ನು ರಚಿಸಲು FKCCI ನ ಒಳಗೊಳ್ಳುವಿಕೆ.**
ತುಮಕೂರು ವಿಶ್ವವಿದ್ಯಾನಿಲಯದ ಸಂಬಂಧಿತ ವಿಭಾಗಗಳು ಶೈಕ್ಷಣಿಕ ಚಟುವಟಿಕೆಗಳಲ್ಲಿ ಚೇಂಬರ್ಸ್ ಆಫ್ ಕಾಮರ್ಸ್ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ಸಂಘದ ಪ್ರತಿನಿಧಿಗಳನ್ನು ಒಳಗೊಂಡಿರುತ್ತದೆ.

ತುಮಕೂರು ವಿ.ವಿ.ಯ ಸಿಬ್ಬಂದಿಯವರು ನಿರ್ವಹಣೆ ಮತ್ತು ಕೈಗಾರಿಕಾ ವೇದಿಕೆಗಳಲ್ಲಿಯೂ ಸಹ ವಿವಿಧ ಸಾಮರ್ಥ್ಯಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಈ ರೀತಿಯ ಕಾರ್ಯಕ್ರಮಗಳು ವಿಶ್ವವಿದ್ಯಾನಿಲಯದ ಮಧ್ಯಸ್ಥಗಾರರಿಗೆ ಉದ್ಯಮಿಯಾಗಲು ಖಂಡಿತವಾಗಿಯೂ ಸಹಾಯ ಮಾಡುತ್ತದೆ ಮತ್ತು ಪದವೀಧರ ಉದ್ಯಮದ ಸಂವಾದಾತ್ಮಕ ವೇದಿಕೆಯನ್ನು ರಚಿಸಲು ಸಹಾಯ ಮಾಡುತ್ತದೆ.

**c. ಡೇಟಾಬೇಸ್ ಯಾವುದಾದರೂ Placement ವಿವರಗಳು – Course-wise:**

ಈ ಕೆಳಗಿನ ಕಂಪನಿಗಳು/ಸಂಸ್ಥೆಗಳು ತುಮಕೂರು ವಿ.ವಿಯ ಹೊಸ ಹಾಗೂ ಹಿರಿಯ ವಿದ್ಯಾರ್ಥಿಗಳ ಸೆಳೆಯಲು ಔದ್ಯೋಗಿಕ/ನೇಮಕಾತಿ ಮೇಳಗಳಿಗೆ ಚಾಲನೆ ನೀಡಿರುತ್ತಾರೆ.

- ❖ ವಿಪ್ರೊ ಎಂಟರ್ ಪ್ರೈಸಸ್ ಪ್ರೈವೇಟ್ ಲಿಮಿಟೆಡ್
- ❖ ಇನ್‌ಕ್ಯಾಪ್ ಕಾಂಟ್ರಾಕ್ಟ್ ಮಾನ್ಯುಫ್ಯಾಕ್ಚರಿಂಗ್ ಸರ್ವೀಸ್ ಪ್ರೈ.ಲಿ.
- ❖ ಕೆಪೀ ಎಲೆಕ್ಟ್ರಾನಿಕ್ಸ್ ಅಂಡ್ ಅಸೋಸಿಯೇಷನ್ ಪ್ರೈ.ಲಿ.
- ❖ ಟೋಕೈ ರಿಕಾ ಮಿಂದ ಇಂಡಿಯಾ ಪ್ರೈ.ಲಿ.
- ❖ ಟಿಎಂಇಐಸಿ ಇಂಡಸ್ಟ್ರೀಯಲ್ ಸಿಸ್ಟಂ ಇಂಡಿಯಾ ಪ್ರೈ.ಲಿ.
- ❖ ರಾನೆ ಇಂಜಿನ್ ವಾಲ್ವಸ್ ಲಿ
- ❖ ಕೆರ್ನ್–ಲೈಬರ್ಸ್ ಪ್ರೈ.ಲಿ.
- ❖ ವಿಕಾಸ ಇಂಡಸ್ಟ್ರೀಸ್
- ❖ ಇಂಡೋ ಸ್ಪಾನಿಷ್ ಟೇಸ್ಟಿ ಫುಡ್ಸ್ ಪ್ರೈ.ಲಿ.
- ❖ ವೈನರ್ ಬರ್ಗರ್ ಪ್ರೈ. ಲಿ.
- ❖ ಬಯೋನೀಡ್ಸ್
- ❖ ಸಮರ್ಥ್ ಬಯೋಟೆಕ್ನಾಲಜೀಸ್

**d. ವಿಶ್ವವಿದ್ಯಾನಿಲಯು B.Voc/ M.Voc ಪದವಿಯನ್ನು ನೀಡುತ್ತಿದೆಯೇ? ಇಲ್ಲವಾದಲ್ಲಿ – ಸೂಕ್ತ ಕಾರಣಗಳನ್ನು ತಿಳಿಸಿ**

ಹೌದು ತುಮಕೂರು ವಿಶ್ವವಿದ್ಯಾನಿಲಯವು B.Voc ಪದವಿಯನ್ನು 2015 ರಿಂದು ನೀಡುತ್ತಿದೆ.

**e. ಹೆಸರಾಂತ ಕಾರ್ಪೋರೇಟ್ಸ್/ಕೈಗಾರಿಕೆಗಳು ಪಾಲ್ಗೊಂಡ ವಿವರದೊಂದಿಗೆ ಆಯೋಜಿಸಲಾದ ಕ್ಯಾಂಪಸ್ ನೇಮಕಾತಿ ಕಾರ್ಯಕ್ರಮಗಳ ಸಂಖ್ಯೆ & ಫಲಾನುಭವಿಗಳ ಸಂಖ್ಯೆ – Course-wise ವಿವರಗಳನ್ನು ಒದಗಿಸತಕ್ಕದ್ದು.**

ಈ ಕೆಳಗಿನ ಕಂಪನಿಗಳು/ಸಂಸ್ಥೆಗಳು ತುಮಕೂರು ವಿಶ್ವವಿದ್ಯಾನಿಲಯದ ಹೊಸ ಹಾಗೂ ಹಿರಿಯ ವಿದ್ಯಾರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲು ಕ್ಯಾಂಪಸ್ ನೇಮಕಾತಿ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದವು

- ❖ ವಿಪ್ರೊ ಎಂಟರ್ ಪ್ರೈಸಸ್ ಪ್ರೈವೇಟ್ ಲಿಮಿಟೆಡ್
- ❖ ಇನ್‌ಕ್ಯಾಪ್ ಕಾಂಟ್ರಾಕ್ಟ್ ಮಾನ್ಯುಫ್ಯಾಕ್ಚರಿಂಗ್ ಸರ್ವೀಸ್ ಪ್ರೈ.ಲಿ.
